ಅಖಿಲ ಭಾರತ ಪತ್ರಿಕೆ
ನವೆಂಬರ್ 2022

# ಪೂರ್ಣಯೋಗ ಮತ್ತು ಯೋಗ-ಸೂತ್ರದ ಆಯಾಮಗಳು

ಬೆಲೆ : 15/-



ಫೋಟೋ: ಇಮೇಜಿಂಗ್ ಸಾವಿತ್ರಿ

ಈ ಬುವಿಯನೀಗ ಪರಮಪಾವಿತ್ರ್ಯಗೊಳಿಸಲೆನೆ ಹರಸುತಿಂದು
ಆ ಮಹಾಶಕ್ತಿ ಆವರಣಗೊಳಲು ಆಗಮಿಸಿ ಬಂದುದಿಂದು
ನೆಲೆಗೊಂಡಿತಿಲ್ಲಿ ಮೃಣ್ಮಯದ ಬದುಕನಾಧರಿಸಿಕೊಂಡು ನಿತ್ಯ
ಅನುಭವಿಸಲೆಂದು ಕಡುಕಷ್ಟ ಮತ್ತೆ ಉಚ್ಚಾಭಿಲಾಷೆ ಸತ್ಯ
ಮತ್ತದೋ ಅವನ ತಾಪ-ಸಂತಾಪ ತಾನೀಗ ನಿಯತಿಯಲ್ಲಿ
ಆ ಗಮ್ಯವೀಗ ಅವನ ಮಾತೃಕೆಯ ಮೂಲದಾ ರೂಪದಲ್ಲಿ.

**– ಪುಟ್ಟು ಕುಲಕರ್ಣಿ**

**(ಶ್ರೀ ಅರವಿಂದರ 'ಸಾವಿತ್ರಿ'; ದಳ 2 ರೇಣು 4 ಪುಟ 133)**

**ಅಖಿಲ ಭಾರತ ಪತ್ರಿಕೆ**
**ನವೆಂಬರ್ 2022**

ಸಂಪುಟ: 33 ಸಂಚಿಕೆ: 11

## ಪರಿವಿಡಿ

# "ಪೂರ್ಣಯೋಗ ಮತ್ತು ಯೋಗ–ಸೂತ್ರದ ಆಯಾಮಗಳು"

ಜಡತ್ವದಲ್ಲಿ ದೈವತ್ವದ ಆವಿಷ್ಕಾರ. – ಶ್ರೀ ಅರವಿಂದರು

**ಅತಿಮಾನಸ ಮತ್ತು ಅಧಿಮಾನಸ** 7
ಅನು: ಕಿಶೋರಕುಮಾರ, ಮಾಶಾಳ

**ಯೋಗದ ಪ್ರಾರಂಭ** 8
ಅನು: ನಾಗಜ್ಯೋತಿ ಮಾನವಿ

**ಪಥದಲ್ಲಿ ಮುನ್ನಡೆ** 14
ಅನು: ಪುಟ್ಟು ಕುಲಕರ್ಣಿ

**ಯೋಗದ ಪದ್ಧತಿಗಳು** 16
**ಪೂರ್ಣ ಯೋಗದ ಸಿದ್ಧಾಂತ** 24
ಅನು: ಶ್ರೀ ಎಂ.ಎಸ್. ನಾಗರಹಳ್ಳಿ

**ನಿಜವಾದ ಆಧ್ಯಾತ್ಮಿಕ ಜೀವನ** 29
ಅನು: ಡಾ॥ ಮಹಾದೇವ ಸಕ್ರಿ

**ಪೂರ್ಣ ಯೋಗದ ಸೂತ್ರಗಳು** 36
ಅನು: ಪ್ರೊ. ವೀರಭದ್ರಪ್ಪ ಕೆ.

**ಶ್ರೀ ಅರವಿಂದರ 'ತಾಂತ್ರಿಕಸಿದ್ಧಿ ಪ್ರಕರಣಂ'** 42
ಅನು: ಪುಟ್ಟು ಕುಲಕರ್ಣಿ

**ಶ್ರೀ ಅರವಿಂದರ ಕಾವ್ಯ "ಈಲಿಯನ್"** 49
ಅನು: ಡಾ॥ ಬಿ.ಆರ್. ಭೀಡ್

**ರವೀಂದ್ರನಾಥ ಠಾಕೂರರ "ನಮಸ್ಕಾರ"** 55
ಅನು: ಶ್ರೀ ಜಿ. ರಾಮನಾಥ ಭಟ್ಟರು

**ವಾರ್ತಾಪತ್ರ** 56

**ಸಂಪಾದಕರು:**
ಶ್ರೀ ಪುಟ್ಟು ಕುಲಕರ್ಣಿ
ರಾಘವೇಂದ್ರ ಮಠದ ಹಿಂಭಾಗ,
ಗಿಬ್ ಸರ್ಕಲ್, ಹೆರವಟ್ಟ ರಸ್ತೆ,
ಕುಮಟಾ – 581 332.
ಫೋನ್: 9448774920
mayureshwarkp@gmail.com

**ಪರಿಶೀಲನಾ ಸಮಿತಿ**
ಡಾ॥ ಗುರುಲಿಂಗ ಕಾಪಸೆ
ಡಾ॥ ಆರ್.ಕೆ. ಕುಲಕರ್ಣಿ

**ಪ್ರಕಾಶಕರು:**
ಡಾ॥ ಅಜಿತ್ ಸಬ್ನೀಸ್
ಅಧ್ಯಕ್ಷರು, ಶ್ರೀ ಅರವಿಂದೋ
ಸೊಸೈಟಿ ರಾಜ್ಯ ಸಮಿತಿ ಕರ್ನಾಟಕ,
ಶ್ರೀ ಅರವಿಂದ ಮಾರ್ಗ,
ಜೆ.ಪಿ. ನಗರ ಮೊದಲನೇ ಹಂತ,
ಬೆಂಗಳೂರು – 560 078.

**ಪ್ರಾಯೋಜಕರು:**
ಶ್ರೀ ಅರವಿಂದೋ ಕಾಂಪ್ಲೆಕ್ಸ್ ಟ್ರಸ್ಟ್ (ರಿ.)
ಜೆ.ಪಿ. ನಗರ ಮೊದಲನೇ ಹಂತ,
ಬೆಂಗಳೂರು – 560 078.
ಫೋನ್: 080 – 2244 9882
http://abp.sirinudi.org

**ಡಿ.ಟಿ.ಪಿ.:**
ಗಣಕಯಂತ್ರ ಕೇಂದ್ರ
ಶ್ರೀ ಅರವಿಂದೋ ಕಾಂಪ್ಲೆಕ್ಸ್ ಟ್ರಸ್ಟ್ (ರಿ.)
ಜೆ.ಪಿ. ನಗರ ಮೊದಲನೇ ಹಂತ,
ಬೆಂಗಳೂರು – 560 078.

**ಆಫ್‌ಸೆಟ್ ಮುದ್ರಣ:**
ಶೇಷಸಾಯಿ ಇ ಫಾರ್ಮ್ಸ್ ಪ್ರೈ.ಲಿ.
ಶ್ರೀ ಅರವಿಂದೋ ಕಾಂಪ್ಲೆಕ್ಸ್ ಟ್ರಸ್ಟ್ (ರಿ.)
ಜೆ.ಪಿ. ನಗರ ಮೊದಲನೇ ಹಂತ,
ಬೆಂಗಳೂರು – 560 078.

# ಸಂಪಾದಕರ ಟಿಪ್ಪಣಿ

'ಪೂರ್ಣ ಯೋಗ'ವು ಅದರದೇ ಆದ ಅಸ್ಮಿತೆಯನ್ನು ಹೊಂದಿರುವದರಿಂದ ಅದನ್ನು ವ್ಯಾಖ್ಯಾನಿಸುವದು ಸುಲಭ ಸಾಧ್ಯವಲ್ಲ. ಇಲ್ಲಿಯವರೆಗೂ ಮನುಕುಲವು ಪಡೆದಿರುವ ವಿಕಾಸದ ಸರ್ವ ಆಯಾಮಗಳಿಗೂ ಮತ್ತೊಂದು ನವೀನ ಆಯಾಮವನ್ನು ಇದು ರೂಪಿಸುತ್ತಿದೆ. ಜೀವನದ ಪ್ರತಿಯೊಂದು ಅಂಶವೂ ಈ ಪೂರ್ಣ ಯೋಗದ ಅಂಶಾಂಶವೇ ಆಗಿರುತ್ತದೆ. ಈ ವಿಷಯಕ್ಕೆ ಸಂಬಂಧಿಸಿರುವ ಕೆಲವು ಆಧಾರ ಸ್ವರೂಪದ ಸಂರಚನೆಗಳನ್ನು ಮತ್ತು ಅವುಗಳ ಅಭ್ಯಾಸವು ಈ ಪೂರ್ಣ ಯೋಗವನ್ನು ಅರಿತುಕೊಳ್ಳಲು ಮಾರ್ಗದರ್ಶಿ ಪಥವನ್ನು ತೋರಿಸುತ್ತಿವೆ. ಇವುಗಳನ್ನು ಅಭ್ಯಸಿಸಲು ಶ್ರೀ ಅರವಿಂದರು ಮತ್ತು ಶ್ರೀಮಾತೆಯವರು ಅಭಿವ್ಯಕ್ತಿಸಿರುವ ಕೆಲವು ವಿಷಯಗಳನ್ನು ಈ ಸಂಚಿಕೆಯಲ್ಲಿ ರೂಪಿಸಲಾಗಿದೆ. [ಎಐಎಮ್]

# ಸಂಪಾದಕೀಯ

## ಪೂರ್ಣ ಯೋಗ; ವಿಕಾಸದ ವೈಶ್ವಿಕ ಆಯಾಮ ಮತ್ತು ಪ್ರಗತಿ

**‘ದಿವ್ಯ ಜೀವನಕೆ ಮಂತ್ರ ಸಾವಿತ್ರಿ**
**ಇದು ಪೂರ್ಣ ಯೋಗ ಪಥವು**
**ಮನುಜ ಕುಲವಿದುವು ದೇವಗಣವಾಗೆ**
**ಸಿದ್ಧ ಚೈತನ್ಯ ರಥವು’**

ಪರಿವರ್ತನೆ ಎನ್ನುವದು ಕಾಲದ ನಾಡಿ–ಮಿಡಿತ. ಅದು ನಿರಂತರವಾಗಿ ಸ್ಪಂದಿಸುತ್ತಲೇ ಇರಬೇಕು, ಇರುತ್ತದೆ. ಏಕೆಂದರೆ ಪರಿವರ್ತನೆಯ ಸಲುವಾಗಿಯೇ ಈ ಸ್ಪಂದನವು ನಿಯತಿಯ ಸೂತ್ರವೂ ಆಗಿದೆ. ಅನಂತಾನಂತವಾಗಿರುವ ಸೃಷ್ಟಿಯಲ್ಲಿ ನಿರಂತರತೆ ಇರುತ್ತದೆಯೋ ಅಥವಾ ಈ ನಿತ್ಯ ನಿರಂತರತೆಯೇ ಸೃಷ್ಟಿಯ ಸ್ವರೂಪಗಳಾಗಿವೆಯೋ ಎನ್ನುವದೂ ಜಿಜ್ಞಾಸೆಗೆ ಒಳಪಡುತ್ತಲೇ ಇದೆ. ಪೂರ್ಣತೆಯೆನ್ನುವದು ಪ್ರಕೃತಿಯ ಅಸ್ಮಿತೆ. ಆದರೆ ಮಾನವನ ಬದುಕು ಮಾತ್ರ – ಪ್ರಕೃತಿಯಿಂದ ದೂರವೇ ಉಳಿಯುವ ಕಾರಣದಿಂದಾಗಿ – ಕಾಲ ನಿಗದಿಯಾಗಿ ಅಸ್ತಿತ್ವ ಪಡೆಯುವದರಿಂದ, ಈ ಪೂರ್ಣತ್ವವನ್ನು ಅರ್ಥೈಸಿಕೊಳ್ಳಲು ಸಾಧ್ಯವಾಗದೇ, ತನಗೆ ತಾನೇ ರೂಪಿಸಿಕೊಂಡ ಅಜ್ಞಾನದ ಕವಚದಲ್ಲಿ ಸೀಮಿತನಾಗಿ ಬದುಕು ರೂಪಿಸಿಕೊಂಡು, ಸುಖವಾಗಿದ್ದೇನೆ ಎಂದು (ಸಂ)ಭ್ರಮಿಸಿಕೊಳ್ಳುತ್ತಾನೆ. ಆದರೆ ಚಿಂತನಪರವಾದ ಮಾನವನ ಮನಸ್ಸು ಈ ಪೂರ್ಣತೆಯನ್ನು ಅರಿತುಕೊಳ್ಳಲು ತುಡಿಯುತ್ತಲೇ ಆರೋಹಗೊಳ್ಳುತ್ತಲೇ ಇರುತ್ತದೆ. ಆದರೆ ಈ ತುಡಿತಕ್ಕೆ, ವೈಯಕ್ತಿಕವಾಗಿ ಮಾನವನಿಗೆ ನಿಗದಿಯಾಗಿರುವ ಅವಧಿ ಮಾತ್ರ ಅತ್ಯಲ್ಪವಾಗಿದ್ದರೂ, ಕಾಲದ ಅನಂತತೆಯ ಪಥದಲ್ಲಿ ಸಾಗುತ್ತಿರುವ ಪ್ರತಿಯೊಬ್ಬ ವ್ಯಕ್ತಿಯ ಹೆಜ್ಜೆಯಷ್ಟೇ ಅವನ ಗತಿ ಮತ್ತು ಅವನ ಸಮಯಗಳೂ ಸೀಮಿತವಾಗಿಯೇ ಇರುತ್ತವೆ. ಆದರೆ ಆ ನಿರಂತರವಾದ ಗಮನವು ನಿರ್ಮಿಸಿದ ಪಥವು ಮಾತ್ರ ನವನವೀನ ಅನ್ವೇಷಣೆಗಳಿಗೆ, ಪ್ರಕೃತಿಯ ರಹಸ್ಯವನ್ನು ತೆರೆಯುವ ಸುಸಂದರ್ಭಗಳಿಗೆ ಅವಕಾಶ ಮಾಡಿಕೊಡುತ್ತದೆ.

“ನಾಲ್ಕನ್ನು ಬಿಚ್ಚಿ ಐದನ್ನು ತೋರಿಸು” ಎಂದು ವರಕವಿ ದ.ರಾ. ಬೇಂದ್ರೆಯವರು ಬೆಡಗಿನ ಸ್ವರೂಪದಲ್ಲಿ ಈ ಯೋಗ ಪಥದ ಬಗೆಗೆ,

ಅದರಲ್ಲೂ ಅವರು ಆತ್ಮಗತವಾಗಿ ಆರಾಧಿಸುತ್ತಿದ್ದ ಶ್ರೀ ಅರವಿಂದರ ಕುರಿತು ಬರೆಯುತ್ತಾರೆ. ಏನಿದು ನಾಲ್ಕು ಹಾಗು ತೋರಿಸುವದು ಯಾವ ಐದನ್ನು ಎಂದು ಗಮನಿಸಿದಾಗ, ಈ ಯೋಗ ಪಥದ ಸುಗಮ ಗಮನಕ್ಕೆ ದಾರಿ ದೀಪವಾಗಿ ನಿರ್ದೇಶನ ದೊರೆಯುತ್ತದೆ. ಹಠ ಯೋಗ, ಜ್ಞಾನ ಯೋಗ, ಭಕ್ತಿ ಯೋಗ ಮತ್ತು ಕರ್ಮ ಯೋಗಗಳು ಇಲ್ಲಿಯವರೆಗೂ ಮಾನವ ಕುಲವು – ತಾನು ಮತ್ತೆ ತನ್ನದೇ ಮೂಲ ನೆಲೆಯಾಗಿರುವ – ಆ ತುರೀಯದಲ್ಲಿರುವ ಚಿನ್ಮಯದ ತಾಣವನ್ನು ಸೇರುವ ಪ್ರಯತ್ನದಲ್ಲಿ ನಿರ್ಮಿತಿಗೊಂಡ ಆಯಾಮಗಳಾಗಿವೆ. ಯೋಗದ ಎಲ್ಲ ಪರಂಪರೆಗಳೂ ಪೂರ್ಣತೆಯತ್ತಲೇ ಗುರಿ ಹೊಂದಿವೆ ಎನ್ನುವದು ನಿಜವಾದರೂ, ಇಲ್ಲಿಯವರೆಗೂ ನಿರ್ಮಿತಿಗೊಂಡಿರುವ ಇವು ಮೆಟ್ಟಿಲುಗಳಾಗಿವೆ ಎನ್ನುವದು ವಿಕಾಸದ ಹಂತದಲ್ಲಿ ಕಾಣುತ್ತದೆ. ಇದೀಗ ಮನೋಮಯ ಕೋಶದ ಆಚೆಗೂ ಸಾಗಿ 'ವಿಜ್ಞಾನಮಯ ಕೋಶ'ದ ಎಡೆಗೆ ಮಾನವನ ಯಾನ ನಡೆದಿದೆ; ನಡೆಯುತ್ತಿದೆ. 'ತಾರೆ ತಾರೆಗಳು ಮೈಲುಗಲ್ಲುಗಳು, ನೀಹಾರ ಧರ್ಮಛತ್ರ। ದ್ರಷ್ಟಾರ ಕಾಣ್ಕೆಗಿರೆ ಯಾನ ಸತತ, ಸೃಷ್ಟಾರನಿತ್ತ ಸತ್ರ॥ (ಸಾವಿತ್ರಿ ಬುಕ್ 6 ಪುಟ 401)' ಎಂದು ಈ ವ್ಯೋಮಯಾನದ ಸರ್ವ ಹಂತಗಳನ್ನೂ ಕಾಣಬಹುದಾಗಿದೆ. ಇದು 'ಪೂರ್ಣ ಯೋಗದ ಪ್ರಥಮ ಮೆಟ್ಟಿಲು' ಎನ್ನುವದನ್ನು ನಾವು ಅರಿತುಕೊಂಡೇ ಈ ಅನೂಹ್ಯ ಲೋಕಕ್ಕೆ ಪಯಣಿಸಬೇಕಾಗಿದೆ.

ಭೂ–ಬದುಕಿನ ಮಹತ್ತರವನ್ನು ಸಾಧಿಸಿಕೊಳ್ಳುವ ಹಠ ಯೋಗ, ಅನಂತಾನಂತವಾಗಿರುವ ನಿಸರ್ಗದ ಭೂಮತೆಯನ್ನು ಕಂಡು ತನ್ಮಯತೆಯಲ್ಲಿ ಸಮರ್ಪಣೆ ಮಾಡಿಕೊಂಡ ಭಕ್ತಿ ಯೋಗ, ಕುತೂಹಲದಿಂದ ಅರಸಿ ಮನಸ್ಸಿನ ಮೂಲಕ ಅನುಭಾವಿಸಕೊಂಡ ಜ್ಞಾನ ಯೋಗ ಮತ್ತು ಪ್ರಕೃತಿಯ ನಿಯತಿ ನಿರ್ಮಿತ ಚಲನೆಗೆ ತನ್ನನ್ನು ತೊಡಗಿಸಿಕೊಂಡು ಸಂತೃಪ್ತವಾಗುವ ಕರ್ಮ ಯೋಗ, ಹಾಗು ಈ ರಹಸ್ಯವನ್ನು ಅರಸಿ ಅದರೊಡನೆ ಸ್ಪಂದಿಸುವ ಸಮಾಧಿ ಯೋಗವನ್ನು ಒದಗಿಸುವ ರಾಜ ಯೋಗಗಳೆಲ್ಲವೂ ಮಾನವನ ಬದುಕನ್ನು ಮುಂದಿನ ಉನ್ನತಿಗೆ ಪಕ್ವಗೊಳಿಸಿವೆ. ಈ ನಾಲ್ಕು ಆಯಾಮಗಳಲ್ಲಿ ಸಂರಚನೆಗೊಂಡಿರುವಾಗ 'ಮಾನವನ ಆತ್ಮವು' ತನ್ನ ಅಸ್ಮಿತೆಯನ್ನು ಕಂಡುಕೊಂಡು, ಆ ಅಸ್ಮಿತೆಗೆ ಮೂಲ ಕಾರಣವಾದ ಋತ–ಚೇತನದೊಡನೆ ತಾದಾತ್ಮ್ಯವನ್ನು ಹೊಂದುವದು 'ಪೂರ್ಣ ಯೋಗ'ದ ಗುರಿ. ಇದೇ ದಾರಿಯೂ ಹೌದು.

ಹಾಗಾದರೆ ಸದ್ಯ ಮಾನವನಿಗೆ ಲಭ್ಯವಿರುವ ಈ ಭೌತಿಕ ದೇಹದ ವ್ಯವಸ್ಥೆಯಲ್ಲಿಯೇ ಈ ರೀತಿಯ ಊರ್ಧ್ವಾತಿ ಊರ್ಧ್ವ ಯಾನ ಸಾಧ್ಯವೇ ಎಂದು ಪ್ರಶ್ನೆ ಉದ್ಭವಿಸುತ್ತದೆ. ಸದ್ಯ ವೈಜ್ಞಾನಿಕ ಪ್ರಗತಿಯ ಹಂತದಲ್ಲಿಯೂ ಅನುಭವಕ್ಕೆ ಬಂದಿರುವ ಸಂಗತಿಯಂತೆ, ಭೂ–ವಲಯವನ್ನು ಮೀರಿ, ಊರ್ಧ್ವಗಾಮಿಯಾಗಲು 'ರಕ್ಷಾ ಕವಚ'ದ ಅವಶ್ಯಕತೆ ಇದೆ. ಆದರೆ ಸುದೀರ್ಘ ದೂರದ ಪಯಣಕ್ಕೆ ಇಂತಹ ರಕ್ಷಾ ಕವಚವಿದ್ದರೂ, ಮಾನವನ ಆಯುವಿನ ಮಿತಿ ಮತ್ತೊಂದು ಸವಾಲು ಒಡ್ಡುತ್ತಿದೆ. ಮಾನವ ನಿರ್ಮಿತ ಯಂತ್ರಗಳಲ್ಲಿ – ಮಾನವನಿಗೇ ಅಪಾರ ಎಂದೆನಿಸುವ – ವೇಗವನ್ನು ಸಾಧಿಸಿದ್ದರೂ, ಭೂಮ ಸದೃಶವಾಗಿರುವ ಅವಕಾಶದಲ್ಲಿ ಇರುವ ರಹಸ್ಯವನ್ನು ಕಾಣಲು ಬೇಕಾದ 'ವೇಗ' ಇನ್ನೂ ಲಭ್ಯವಾಗಿಲ್ಲ. ಆ ದಿಸೆಯಲ್ಲಿ ಇಂತಹ ವೇಗವನ್ನು ಪಡೆದುಕೊಳ್ಳಲು ಅತ್ಯಾವಶ್ಯವಿರುವ ಮಾರ್ಗಗಳು ಈ 'ಪೂರ್ಣ ಯೋಗ'ದ ಸಾಧನಾ ಕ್ರಮದಲ್ಲಿವೆ.

ಮಾನವ ಕುಲವು ಸಂಪೂರ್ಣವಾಗಿಯೇ ಔನ್ನತ್ಯಕ್ಕೇರುವ ಸಂಪೂರ್ಣ ವಿಕಸನದ ಪಥವೇ ಈ ಪೂರ್ಣ ಯೋಗದ ಮಾರ್ಗವಾಗಿದೆ. ಇದು ಲೌಕಿಕದ ಸಮತೆಯನ್ನು ಆಧ್ಯಾತ್ಮದಲ್ಲೂ ಅಳವಡಿಸಿಕೊಂಡು, ಸಂಪೂರ್ಣ ಭೂ–ಬದುಕು ಅಲೌಕಿಕವೆಂದು ಆರಾಧಿಸುತ್ತಿರುವ 'ಅತಿಮಾನಸ'ದ ಹಂತದ ಆರೋಹಣಕ್ಕೆ ಮಾರ್ಗದರ್ಶನ ಮಾಡುತ್ತಿದೆ. (ಪಿಪಿಕೆ)



ಶ್ರೀಮಾತೆಯ ಕುರಿತು ಯಾರು ಆರಾಧನಾ ಮನೋಭಾವವನ್ನು ಹೊಂದಿದ್ದಾರೋ ಅವರೆಲ್ಲರೂ ನಾನು ಹೇಳುತ್ತಿರುವ 'ಯೋಗ'ವನ್ನೇ ಅನುಷ್ಠಾನಿಸುತ್ತಿದ್ದಾರೆ. ಕೇವಲ 'ಓರ್ವ ವ್ಯಕ್ತಿ' ಮಾತ್ರ 'ಪೂರ್ಣ ಯೋಗ'ವನ್ನು ಮಾಡುತ್ತಿದ್ದಾನೆ ಎಂದರೆ ತಪ್ಪು ಹೇಳಿಕೆಯಾಗುತ್ತದೆ. ಏಕೆಂದರೆ, ಯೋಗದ ಎಲ್ಲ ಆಯಾಮಗಳನ್ನೂ ಕೇವಲ ಅವನೊಬ್ಬನ ಪ್ರಯತ್ನದಿಂದ ಮಾತ್ರವೇ ಫಲಪ್ರದಗೊಳಿಸಲು ಸಾಧ್ಯವಿಲ್ಲ. ಇಲ್ಲಿ ಪ್ರತಿಯೊಬ್ಬರೂ ತಮ್ಮನ್ನು ತಾವು ಸೇವೆಯ (ಕರ್ಮದ) ಮೂಲಕ, ಭಕ್ತಿಯ ಮೂಲಕ, ಮತ್ತು ಅಭೀಪ್ಸೆಯ ಮೂಲಕ ಶ್ರೀಮಾತೆಯ ಹಸ್ತಕ್ಕೆ ಸಮರ್ಪಿಸಿಕೊಳ್ಳಲಿ. ಆಗ ಮಾತ್ರ ಶ್ರೀಮಾತೆಯು ತನ್ನ ತೇಜದಿಂದ ಹಾಗು ಬಲದಿಂದ, ಅವನು ಸಾಧನೆಯಲ್ಲಿ ತೊಡಗಿಕೊಳ್ಳುವಂತೆ ಮಾಡುತ್ತಾಳೆ. ಓರ್ವ ಸುಪ್ರಸಿದ್ಧ 'ಪೂರ್ಣ ಯೋಗಿ'ಯಾಗುವ ಅಥವಾ ಅತಿಮಾನಸ ವ್ಯಕ್ತಿಯಾಗುವ ಗುರಿಯನ್ನು ಹೊಂದುವದೂ ಮತ್ತು ತಾನು ಈ ವಿಷಯದಲ್ಲಿ ಅದೆಷ್ಟು ಪ್ರಗತಿಯನ್ನು ಸಾಧಿಸಿಕೊಂಡಿದ್ದೇನೆ ಎಂದುಕೊಳ್ಳುವದೂ ಸಹಿತ ತಪ್ಪು ಅಭಿಪ್ರಾಯವೇ ಆಗಿರುತ್ತದೆ. ಇಲ್ಲಿ ಸೂಕ್ತವಾಗಿರುವ ದೃಷ್ಟಿಕೋನವೆಂದರೆ, ಸಂಪೂರ್ಣ ಭಕ್ತಿಯಿಂದಲೇ ತನ್ನನ್ನು ತಾನು ಶ್ರೀಮಾತೆಗೆ ಸಮರ್ಪಿಸಿಕೊಳ್ಳಬೇಕು, ಮತ್ತು ಶ್ರೀಮಾತೆಯು ಏನನ್ನು ಇಚ್ಛಿಸುತ್ತಾಳೆಯೋ ಅದೇ ರೀತಿಯಲ್ಲಿ ಸ್ವೀಕರಿಸುವಂತೆಯೂ ಸಿದ್ಧವವಿರಬೇಕು. ಉಳಿದಂತೆ ಎಲ್ಲವನ್ನೂ ಅವಳೇ ನಿರ್ಧರಿಸುವವಳು ಮತ್ತು ನಿನ್ನಲ್ಲಿ ರೂಪುಗೊಳಿಸುವವಳು.

**ಚಂಪಕಲಾಲ ಪ್ರವಚನ, ಪುಟ 334–35** **ಶ್ರೀ ಅರವಿಂದರು**

# ಅತಿಮಾನಸ ಮತ್ತು ಅಧಿಮಾನಸ

**– ಅನುವಾದ: ಕಿಶೋರಕುಮಾರ, ಮಾಶಾಳ (ಕಲಬುರ್ಗಿ)**

ಮೃಣ್ಮಯದ ರೂಪಾಂತರಣವು ಶ್ರೀ ಅರವಿಂದರ ವಿಶಿಷ್ಟ ಕಾರ್ಯವಾಗಿದೆ.

ಮನೋಮಯದ ನಂತರದ ಪ್ರಜ್ಞಾರೋಹಣದ ಪಥದಲ್ಲಿ ಇನ್ನೂ ಹಲವು ಮಾನಸ ಹಂತದ ಸ್ತರಗಳು ಅಸ್ತಿತ್ವದಲ್ಲಿವೆ. ಆ ಎಲ್ಲಾ ಸತ್ತೆಗಳನ್ನು ದಾಟಿ, ಊರ್ಧ್ವ ಲೋಕದಲ್ಲಿ ದಿವ್ಯ–ಲೋಕವೊಂದು ಅಸ್ತಿತ್ವದಲ್ಲಿದೆ. ಅದನ್ನೇ ಶ್ರೀ ಅರವಿಂದರು 'ಅತಿಮಾನಸ'ವೆಂದು ಕರೆದಿದ್ದಾರೆ. ಆದರೆ ಈ ಮಧ್ಯದಲ್ಲಿಯೇ ಇಲ್ಲಿ ಇನ್ನೊಂದು ಹಂತವಿರುವದನ್ನೂ ಶ್ರೀ ಅರವಿಂದರು ದರ್ಶಿಸಿದ್ದಾರೆ. ಇದೇ 'ಅಧಿಮಾನಸ'ವಾಗಿದೆ. ವೈಶ್ವಿಕ ದೇವತೆಗಳ ಲೋಕವಾಗಿರುವ ಇದು ನಮ್ಮ ಜಗತ್ತನ್ನು (ಮರ್ತ್ಯ ಲೋಕವನ್ನು) – ಅಂದರೆ ಅನ್ನಮಯದ ಸ್ತರವನ್ನು ನಿಯಾಮಕಗೊಳಿಸುತ್ತಿದೆ. ಮಾನವನು ಇಲ್ಲಿಯವರೆಗೂ ತನ್ನ ಜಾಗ್ರತಗೊಂಡ ಚೈತನ್ಯ ಪ್ರಜ್ಞೆಯಿಂದ ತಲುಪಲು ಸಾಧ್ಯವಾಗಿರುವ ತುರೀಯ ಹಂತವಾಗಿದೆ. ಇದನ್ನೆ ಆ ಪರಮ–ದಿವ್ಯವೆಂದು ಪರಿಗಣಿಸಿದರೂ ಮತ್ತು ಯಾರು ಯಾರು ಈ ಹಂತವನ್ನು ತಲುಪಲು ಸಾಧ್ಯವಾಗಿದೆಯೋ, ಆ ಕ್ಷಣವನ್ನು ಅವರು "ಆ ನೈಜ–ಆತ್ಮವನ್ನೇ" ತಲುಪಿದ್ದೇವೆ ಎಂದುಕೊಂಡು ಒಂದು ಕ್ಷಣವೂ ಸಂಶಯಪಡುವದಿಲ್ಲ. ಏಕೆಂದರೆ ಇದು, ಸಾಮಾನ್ಯ ಮಾನವ–ಪ್ರಜ್ಞೆಗೆ ಇದೊಂದು ಮಹತ್ತರವಾಗಿರುವ ಹಾಗೂ ಮಹತ್–ಸಾಧನೀಯ ಅಂಶವೇ ಆಗಿರುವದರಿಂದ, ತಾವು ನಿಜವಾಗಿಯೂ ಆ ತುರೀಯಾತೀತ ಗಮ್ಯವನ್ನು ತಲುಪಲು ಯಶಸ್ವಿಯಾಗಿದ್ದೇವೆ ಮತ್ತು ಇದೇ 'ಸತ್ಯದ ಪರಮೋಚ್ಚ ತಾಣವಾಗಿದೆ' ಎಂದುಕೊಂಡು ಪರಿಭಾವಿಸಿಕೊಳ್ಳುತ್ತಾರೆ. ಆದರೆ ಇದು ನಿಜವಾಗಿಯೂ 'ಸತ್ಯದ' ಅಧಿಕೃತ ನಿವಾಸವಾಗಿರುವದಿಲ್ಲ. ಇದು ಕೇವಲ ಅದರ ತರಬೇತಿಗೊಳಿಸುತ್ತಿರುವ ಜ್ಞಾನಕ್ಷೇತ್ರವಾಗಿದೆ. ಇಲ್ಲಿಯೇ ಎಲ್ಲ ಕ್ರಿಯಾತ್ಮಕ ಶಕ್ತಿಗಳು ಮತ್ತು ದೇವತೆಗಳು ಇರುತ್ತಾರೆ. ಇವರಿಗೇ ಮಾನವನು ಸಂಪೂರ್ಣವಾಗಿ ಶರಣಾಗಿಯೇ ಇರುವ ಇತಿಹಾಸವೇ ಇದೆ. ಹಾಗಿದ್ದಲ್ಲಿ ಈ ದಿವ್ಯತ್ವವು ಏಕೆ ಅಭಿವ್ಯಕ್ತಗೊಂಡು ಈ ಮೃಣ್ಮಯದ–ಸ್ವರೂಪಕ್ಕೆ ರೂಪಾಂತರವನ್ನು ಹೊಂದಲಿಲ್ಲವೆಂದರೆ, ಈ ಅಧಿಮಾನಸವನ್ನೇ ಅತಿಮಾನಸವೆಂದು ತಪ್ಪಾಗಿ ಪರಿಗಣಿಸಿರುವದರಿಂದ ಹೀಗಾಗಿದೆ. ಈ ವೈಶ್ವಿಕ–ದೇವತೆಗಳು ಸಂಪೂರ್ಣವಾಗಿ ಆ ಋತ–ಚೇತನದಲ್ಲಿ ನೆಲೆಸಿರುವದಿಲ್ಲ. ಅವರು ಅಲ್ಲಿ ಅದರೊಡನೆ ಸಂಪರ್ಕವನ್ನು

ಮಾತ್ರ ಹೊಂದಿದ್ದಾರೆ ಮತ್ತು ಅದನ್ನು ಪ್ರತಿನಿಧಿಸುತ್ತಾರೆ, ಅವರಲ್ಲಿ ಪ್ರತಿಯೊಬ್ಬರೂ ಪ್ರತಿಯೊಂದೂ ಹಂತದ, ಅದರದೇ ಆದ ಅಸ್ಮಿತೆಯ ವೈಭವಗಳೊಡನೆ ಅಲ್ಲಿರುವರು...

ಆದ್ದರಿಂದ, ಈ ಅಧಿಮಾನಸವು ಮಾನವ–ಸ್ವಭಾವವನ್ನು ದೈವೀ–ಸ್ವಭಾವವಾಗಿ ರೂಪಾಂತರಗೊಳಿಸುವ ಶಕ್ತಿಯನ್ನು ಹೊಂದಿಲ್ಲ. ಅದಕ್ಕಾಗಿ ಸುಪ್ರಮಾನಸವೇ ಏಕೈಕವಾದ ಪರಿಣಾಮಕಾರಿಯಾದ ಪ್ರತಿನಿಧಿಯಾಗಿದೆ. ಈ ಹಿಂದೆ ಯೋಗದ ಮೂಲಕ ಜೀವನವನ್ನು ಅಧ್ಯಾತ್ಮಮಯಗೊಳಿಸಿಕೊಳ್ಳುವ ಎಲ್ಲ ಪ್ರಯತ್ನಗಳಿಗಿಂತ, ನಮ್ಮ ಈ ಯೋಗವು ಉಳಿದೆಲ್ಲವುಗಳಿಗಿಂತ ವಿಭಿನ್ನವಾಗಿದೆ. ಏಕೆಂದರೆ, ಈ ಅಧಿಮಾನಸದ ಎಲ್ಲ ಆ ವೈಭವಗಳೇ ಆ ತುರೀಯದಲ್ಲಿರುವ ನೈಜ ವಾಸ್ತವವಲ್ಲ ಎನ್ನುವದು ನಮಗೆ ತಿಳಿದಿದೆ, ಅದರಲ್ಲೂ ಅದು ಕೇವಲ ಒಂದು ಸಂಪರ್ಕ–ಸೇತುವಾಗಿ ಈ ಮನಸ್ಸು ಮತ್ತು ದಿವ್ಯತ್ವದ ಮೆಟ್ಟಿಲಾಗಿದೆ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 3/173–74 – ಶ್ರೀಮಾತೆ**

## ಯೋಗದ ಪ್ರಾರಂಭ

**– ಅನುವಾದ: ನಾಗಜ್ಯೋತಿ ಮಾನವಿ**

### ಯೋಗಕ್ಕಾಗಿ ಕರೆ

*ನಿಮಗೆ ಯೋಗ ಏತಕ್ಕಾಗಿ ಬೇಕು? ಶಕ್ತಿಯನ್ನು ಪಡೆಯಲು? ಶಾಂತಿ ತಾಳ್ಮೆಯನ್ನು ಹೊಂದಲು? ಮಾನವೀಯತೆಯ ಸೇವೆಗಾಗಿಯೇ?*

ನೀವು ಯೋಗದ ಮಾರ್ಗವನ್ನು ಆರಿಸಿಕೊಳ್ಳಲು ಈ ಯಾವ ಉದ್ದೇಶಗಳು ಸಾಕಾಗುವುದಿಲ್ಲ.

ನೀವು ಉತ್ತರಿಸಬೇಕಾದ ಪ್ರಶ್ನೆ ಇದಾಗಿದೆ: ನಿಮಗೆ ಯೋಗವು ಪರಮಾತ್ಮನಿಗಾಗಿ ಬೇಕಾಗಿದೆಯೇ? ಪರಮಾತ್ಮನು ನಿಮ್ಮ ಜೀವನದ ಸರ್ವೋಚ್ಚ ಸತ್ಯವಾಗಿದ್ದಾನೆಯೇ, ಆದ್ದರಿಂದ ಆತನಿಲ್ಲದೆಯೇ ಏನೋ ಮಾಡಲಾಗುವುದಿಲ್ಲವೋ? ಎಲ್ಲದಕ್ಕೂ ಪರಮಾತ್ಮ ಮಾತ್ರ ಕಾರಣ, ಮತ್ತು ಆತನಿಲ್ಲದೆ ನಿಮ್ಮ ಅಸ್ತಿತ್ವಕ್ಕೆ ಯಾವ ಕಾರಣವೂ ಇಲ್ಲ ಎಂದು ನಿಮಗನಿಸುತ್ತದೆಯೇ? ಹಾಗಿದ್ದರೆ, ಆಗ ಮಾತ್ರ, ನಿಮಗೆ ಈ ಮಾರ್ಗಕ್ಕಾಗಿ ಕರೆ ಇದೆ ಎಂದು ಹೇಳಬಹುದು.

ಅವಶ್ಯವಾದ ಮೊದಲ ಅಂಶವೆಂದರೆ ಪರಮಾತ್ಮನಿಗಾಗಿ ಅಭೀಪ್ಸೆ.

ನಂತರದ ಅಂಶವೆಂದರೆ ಈ ಅಭೀಪ್ಸೆಯನ್ನು ರಕ್ಷಿಸುವುದು, ಯಾವಾಗಲೂ ಎಚ್ಚರಿಕೆ ಮತ್ತು ಜಾಗೃತವಾಗಿ ಮತ್ತು ಜೀವಂತವಾಗಿಟ್ಟುಕೊಳ್ಳುವುದು, ಅದಕ್ಕಾಗಿ ಅವಶ್ಯವಿರುವುದು ಏಕಾಗ್ರತೆ. ಪರಮಾತ್ಮನ ಸಂಕಲ್ಪ ಮತ್ತು ಉದ್ದೇಶಕ್ಕೆ ಸಮಗ್ರವಾಗಿ ಮತ್ತು ಪರಿಪೂರ್ಣವಾಗಿ ನಮ್ಮನ್ನು ನಾವು ಅರ್ಪಿಸಿಕೊಳ್ಳಲು, ಪರಮಾತ್ಮನ ಮೇಲೆ ನಾವು ಏಕಾಗ್ರತೆಯನ್ನು ಸಾಧಿಸಿಕೊಳ್ಳುವದು ಅವಶ್ಯಕವಿದೆ.

ಹೃದಯದ ಮೇಲೆ ಏಕಾಗ್ರತೆ ಇಡಿ. ಅದರೊಳಗೆ ಪ್ರವೇಶಿಸಿ; ಒಳಗೆ ಹೋಗಿ ಮತ್ತು ಆಳವಾಗಿ ಮತ್ತು ದೂರ ಹೋಗಿ, ಎಷ್ಟು ದೂರ ಹೋಗಲು ಸಾಧ್ಯವೋ ಅಷ್ಟು ದೂರ ಹೋಗಿ. ಚದುರಿದಂತಿರುವ ನಿಮ್ಮ ಪ್ರಜ್ಞೆ ಎಲ್ಲಾ ತಂತುಗಳನ್ನು ಒಗ್ಗೂಡಿಸಿ, ಸುರುಳಿಸುತ್ತ ಮತ್ತೂ ಧುಮುಕಿ ಮತ್ತು ಆಳವಾಗಿ ಮುಳುಗಿ, ಅಲ್ಲಿ ಒಂದು ಜ್ವಾಲೆಯು ಉರಿಯುತ್ತಾ ಇದೆ, ಹೃದಯದ ಆಳವಾದ ನಿಶ್ಚಲತೆಯಲ್ಲಿ. ಇದು ನಿಮ್ಮೊಳಗಿರುವ ದೈವತ್ವ – ನಿಮ್ಮ ನಿಜ ಅಸ್ತಿತ್ವವಾಗಿದೆ. ಅದರ ಧ್ವನಿಯನ್ನು ಕೇಳಿ ಅದರ ಆದೇಶವನ್ನು ಪಾಲಿಸಿ.

ಏಕಾಗ್ರತೆಯಲ್ಲಿ ಮತ್ತೆ ಉಳಿದ ಚಕ್ರಗಳಿವೆ, ಉದಾಹರಣೆಗೆ ಒಂದು, ಮುಕುಟದ ಮೇಲೆ ಮತ್ತು ಇನ್ನೊಂದು ನಿಮ್ಮ ಭ್ರೂ–ಮಧ್ಯದಲ್ಲಿ. ಪ್ರತಿಯೊಂದಕ್ಕೂ ತನ್ನದೇ ಆದ ಕಾರ್ಯದಕ್ಷತೆಯಿದೆ, ನಿಮಗೆ ನಿರ್ದಿಷ್ಟ ಫಲಿತಾಂಶವನ್ನು ನೀಡುತ್ತವೆ. ಆದರೆ ಕೇಂದ್ರ ಅಸ್ತಿತ್ವವು ಮಾತ್ರ ಹೃದಯದೊಳಗೆ ನೆಲೆಸಿದೆ ಮತ್ತು ಹೃದಯದಿಂದ ಎಲ್ಲಾ ಕೇಂದ್ರ ಚಲನೆಗಳು ಮುಂದೆ ಸಾಗುತ್ತವೆ. ರೂಪಾಂತರ ಮತ್ತು ಸಾಕ್ಷಾತ್ಕಾರದ ಶಕ್ತಿಗಾಗಿ ಎಲ್ಲಾ ಕ್ರಿಯಾತ್ಮಕ ಮತ್ತು ಪ್ರೇರಣಾತ್ಮಕ ಚಲನೆಗಳು ಇಲ್ಲಿಂದಲೇ ಬರುತ್ತವೆ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 3/1**

**ಯೋಗಕ್ಕಾಗಿ ಸಿದ್ಧತೆ**

*ಯೋಗಕ್ಕಾಗಿ ಸಿದ್ಧರಾಗಲು ಒಬ್ಬರು ಏನು ಮಾಡಬೇಕು?*

ಮೊದಲನೆಯದಾಗಿ ಪ್ರಜ್ಞಾಪೂರ್ವಕರಾಗಿರಿ. ನಾವು ಕೇವಲ ನಮ್ಮ ಅಸ್ತಿತ್ವದ ಪ್ರಾಮುಖ್ಯವಲ್ಲದ ಅಂಶಗಳ ಬಗ್ಗೆ ಮಾತ್ರ ಪ್ರಜ್ಞಾಪೂರ್ವಕರಾಗಿರುತ್ತೇವೆ. ಹೆಚ್ಚಿನ

ಭಾಗಗಳ ಬಗ್ಗೆ ಅಪ್ರಜ್ಞಾಪೂರ್ವಕರಾಗಿರುತ್ತೇವೆ. ಈ ಪ್ರಜ್ಞೆಯು ನಮ್ಮ ಕೆಳಸ್ತರದ ಪ್ರಕೃತಿಯಲ್ಲಿ ನಮ್ಮನ್ನು ಬಂಧಿಸುತ್ತದೆ. ಅದರಲ್ಲಿನ ಬದಲಾವಣೆ ಮತ್ತು ರೂಪಾಂತರವನ್ನು ತಡೆಯುತ್ತದೆ. ಈ ಪ್ರಜ್ಞೆಯ ಮೂಲಕ, ಆ ಎಲ್ಲ ದೈವೀ ಶಕ್ತಿಗಳು ನಮ್ಮಲ್ಲಿ ಪ್ರವೇಶಿಸುತ್ತೇವೆ ಮತ್ತು ನಮ್ಮನ್ನು ಅವುಗಳ ದಾಸರನ್ನಾಗಿ ಮಾಡಿಕೊಳ್ಳುತ್ತವೆ. ನೀವು ನಿಮ್ಮ ಬಗ್ಗೆ ಪ್ರಜ್ಞಾಪೂರ್ವಕವಾಗಿರಬೇಕೆಂದರೆ, ನೀವು ನಿಮ್ಮ ಪ್ರಕೃತಿಯ ಮತ್ತು ಅದರ ಚಲನೆಗಳ ಬಗ್ಗೆ ಜಾಗೃತವಾಗಿರಲೇಬೇಕು, ಯಾವುದೇ ಕ್ರಿಯೆ, ಭಾವನೆ, ಚಿಂತನೆಗಳನ್ನು ಏಕೆ ಮತ್ತು ಹೇಗೆ ಮಾಡುತ್ತೀರಿ ಎಂಬುದರ ಬಗ್ಗೆ ಅರಿವಿರಬೇಕು; ನಿಮ್ಮ ಉದ್ದೇಶಗಳನ್ನು, ಶಕ್ತಿಗಳನ್ನು, ಅಲ್ಲಿ ಅಡಗಿರುವ ಮತ್ತು ಸಹಜವಾಗಿ ಕಾಣುವ, ಮತ್ತು ನಿಮ್ಮನ್ನು ಚಲಿಸುವಂತೆ ಮಾಡುತ್ತಿರುವ ವಿಷಯದ ಬಗೆಗೆ ನೀವು ಅರಿಯಲೇಬೇಕು; ವಾಸ್ತವವಾಗಿ, ನಾನು ಎಂಬ ಯಂತ್ರದ ಎಲ್ಲಾ ಬಿಡಿ ಭಾಗಗಳ ಬಗ್ಗೆ ಅರಿವಿರಬೇಕು.

ಒಮ್ಮೆ ನೀವು ಪ್ರಜ್ಞಾಯುತರಾದರೆ, ಇದರರ್ಥ ನೀವು ವ್ಯತ್ಯಾಸವನ್ನು ಕಾಣಬಲ್ಲಿರಿ ಮತ್ತು ವಸ್ತುಗಳನ್ನು ಶೋಧಿಸಬಲ್ಲಿರಿ, ಯಾವ ಶಕ್ತಿಗಳು ನಿಮ್ಮನ್ನು ಕೆಳಕ್ಕೆಳಿಸುತ್ತವೆ ಮತ್ತು ಯಾವ ಶಕ್ತಿಗಳು ನಿಮಗೆ ಸಹಾಯ ಮಾಡುತ್ತವೆ ಎಂದು ನೀವು ನೋಡಬಲ್ಲಿರಿ, ಮತ್ತು ಯಾವಾಗ ತಪ್ಪಿನಿಂದ ಸರಿಯಾದದು, ಸುಳ್ಳಿನಿಂದ ಸತ್ಯವಾದುದು, ಅದೈವದಿಂದ ದೈವವು ನಿಮಗೆ ತಿಳಿಯುತ್ತದೆಯೋ ಆಗ ನಿಮ್ಮ ಜ್ಞಾನದಿಂದ ಕಟ್ಟುನಿಟ್ಟಾಗಿ ವರ್ತಿಸುವಿರಿ; ಅಂದರೆ ದೃಢ ನಿಶ್ಚಯದಿಂದ ಒಂದನ್ನು ತಿರಸ್ಕರಿಸಿ ಇನ್ನೊಂದನ್ನು ಸ್ವೀಕರಿಸುವಿರಿ. ಪ್ರತಿ ಹೆಜ್ಜೆಯಲ್ಲಿಯೂ ದ್ವಂದ್ವವು ತನ್ನಷ್ಟಕ್ಕೆ ತಾನಾಗಿಯೇ ಇರುತ್ತದೆ ಮತ್ತು ಪ್ರತೀ ಹೆಜ್ಜೆಯಲ್ಲಿಯೂ ನೀವು ನಿಮ್ಮ ಆಯ್ಕೆಯನ್ನು ಮಾಡಬೇಕಾಗುತ್ತದೆ. ನೀವು ತಾಳ್ಮೆಯಿಂದ ಮತ್ತು ನಿರಂತರವಾಗಿ ಮತ್ತು ಜಾಗೃತವಾಗಿ – 'ನಿದ್ರಾರಹಿತ'ರಾಗಿರಬೇಕು, ಜ್ಞಾನಿಗಳು ಹೇಳುವ ಹಾಗೆ, "ದೈವದ ವಿರುದ್ಧವಾದ ಅದೈವಕ್ಕೆ ಯಾವುದೇ ಅವಕಾಶವನ್ನು ನೀಡಲು ಯಾವಾಗಲೂ ತಿರಸ್ಕರಿಸಬೇಕು."

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 3/2**

**ಯೋಗದ ಮಾರ್ಗ**

ಇಲ್ಲಿ ಅನುಸರಿಸಲಾಗುವ ಮಾರ್ಗವು ಬೇರೆಯವುಗಳಿಗಿಂತ ಭಿನ್ನವಾಗಿದೆ, – ಇದರ ಗುರಿ ಕೇವಲ ಅಜ್ಞಾನ ಜಗತ್ತಿನ ಪ್ರಜ್ಞೆಯಿಂದ ಹೊರಬಂದು ದೈವೀ

ಪ್ರಜ್ಞೆಯೆಡೆಗೆ ಉದಯಿಸುವುದು ಮಾತ್ರವಲ್ಲ, ಆದರೆ ದೈವೀ ಪ್ರಜ್ಞೆಯ ಅತಿಮಾನಸ ಶಕ್ತಿಯನ್ನು ಮನ, ಪ್ರಾಣ, ಶರೀರದಲ್ಲಿ ಅವತರಣಗೊಳಿಸುವದು. ಅವುಗಳನ್ನು ರೂಪಾಂತರಿಸುವುದು, ಪರಮಾತ್ಮನನ್ನು ಇಲ್ಲಿ ಪ್ರಕಟಿಸಲು ಮತ್ತು 'ಜಡ'ದಲ್ಲಿ ದೈವೀ ಜೀವನವನ್ನು ಸೃಷ್ಟಿಸಲು, ಇದು ಒಂದು ಅತ್ಯಂತ ಕಠಿಣವಾದ ಗುರಿ ಮತ್ತು ಕಠಿಣವಾದ ಯೋಗವಾಗಿದೆ; ಹಲವರಿಗೆ ಅಥವಾ ಬಹುತೇಕ ಜನರಿಗೆ ಇದು ಅಸಾಧ್ಯವೆನಿಸುತ್ತದೆ. ಸಾಮಾನ್ಯವಾಗಿ ಅಜ್ಞಾನ ಜಗತ್ತಿನ – ಪ್ರಜ್ಞೆಯ ಎಲ್ಲಾ ಸ್ಥಾಪಿತವಾದ ಶಕ್ತಿಗಳು ಇದನ್ನು ವಿರೋಧಿಸುತ್ತವೆ ಮತ್ತು ನಿರಾಕರಿಸುತ್ತವೆ ಮತ್ತು ತಡೆಯಲು ಪ್ರಯತ್ನಿಸುತ್ತವೆ. ಮತ್ತು ಸಾಧಕನು ತನ್ನ ಸ್ವತಃ ಮನ, ಪ್ರಾಣ, ಶರೀರದಲ್ಲಿಯೇ ಹಠಮಾರಿತನದಿಂದ ಕೂಡಿದ ಅಂಶಗಳು ಸಾಕ್ಷಾತ್ಕಾರಕ್ಕೆ ಅಡೆತಡೆಗಳನ್ನೊಡುತ್ತವೆ ಎಂದು ತಿಳಿಯುತ್ತಾನೆ. ಒಂದು ವೇಳೆ ನೀವು ಆದರ್ಶವನ್ನು ತುಂಬು ಹೃದಯದಿಂದ ಸ್ವೀಕರಿಸಿದರೆ ಎಲ್ಲಾ ಕಷ್ಟಗಳನ್ನು ಎದುರಿಸಿ, ಆಗಿಹೋಗಿರುವುದನ್ನು ಮತ್ತು ನಿಮ್ಮ ಹಿಂದಿರುವ ಅದರ ಬಂಧನವನ್ನು ಬಿಟ್ಟು ಮತ್ತು ಎಲ್ಲವನ್ನೂ ಬಿಟ್ಟುಕೊಡಲು ಸಿದ್ಧರಾಗಿ ಮತ್ತು ದೈವೀ ಸಾಧ್ಯತೆಗಳಿಗಾಗಿ ಎಲ್ಲಾ ಅಪಾಯವನ್ನು ಎದುರಿಸಿದಾಗ ಅನುಭಾವದ ಮೂಲಕ ಅದರ ಹಿಂದಿರುವ ಸತ್ಯವನ್ನು ಅನ್ವೇಷಿಸಲು ಆಗ ಮಾತ್ರ ವಿಶ್ವಾಸವಿಡಬಹುದು.

ಈ ಯೋಗದ ಸಾಧನವು ಯಾವುದೇ ಗೊತ್ತುಪಡಿಸಿದ ಬೋಧನೆ ಅಥವಾ ಸೂಚಿಸಿದ ಧ್ಯಾನದ ವಿಧಾನದಲ್ಲಿ, ಮಂತ್ರಗಳಲ್ಲಿ ಅಥವಾ ಇತರ ಅಂಶಗಳಿಂದ ಮುಂದುವರೆಯಲಾರದು. ಆದರೆ ಅಭೀಪ್ಸೆಯಿಂದ, ಆತಂರಿಕ ಅಥವಾ ಮುಖ್ಯವಾದ ಸ್ವ–ಏಕಾಗ್ರತೆಯಿಂದ, ನಮ್ಮ ಮೇಲಿನ ದೈವೀ ಶಕ್ತಿಗೆ ಮತ್ತು ಅದರ ಕಾರ್ಯಕ್ಕೆ, ಹೃದಯದಲ್ಲಿನ ದೈವೀ ಸಾನಿಧ್ಯದ ಪ್ರಭಾವಕ್ಕೆ ಸ್ವತಃ ತೆರೆದಿಟ್ಟುಕೊಳ್ಳುವುದರಿಂದ ಮತ್ತು ಈ ವಿಷಯಗಳಿಗೆ ಹೊರತಾದ ಎಲ್ಲಾ ಇತರ ವಿಷಯಗಳನ್ನು ತಿರಸ್ಕರಿಸುವುದರಿಂದ ಸಾಧನವು ಮುಂದುವರೆಯುತ್ತದೆ. ಶ್ರದ್ಧೆ, ಅಭೀಪ್ಸೆ ಮತ್ತು ಸಮರ್ಪಣೆಯಿಂದ ಮಾತ್ರ ಈ ಸ್ವ–ತೆರೆದುಕೊಳ್ಳುವಿಕೆ ಬರುತ್ತದೆ.

### ಪೂರ್ಣ ಯೋಗದ ಗುರಿ

ಯೋಗದ ಗುರಿಯು ಪ್ರಜ್ಞೆಯನ್ನು ಪರಮಾತ್ಮನಿಗೆ ತೆರಿದಿಡುವುದಾಗಿದೆ, ಬಾಹ್ಯ ಜೀವನದಲ್ಲಿ ಕ್ರಿಯೆ ಮಾಡುವಾಗ ಹೆಚ್ಚು ಹೆಚ್ಚು ಆಂತರಿಕ ಪ್ರಜ್ಞೆಯಲ್ಲಿರುವುದು, ಅಂತರಾಳದಲ್ಲಿರುವ ಚೈತ್ಯ ಪುರುಷನನ್ನು ಮುಂದೆ

ತರುವುದು ಮತ್ತು ಅದರ ಸಾಮರ್ಥ್ಯದಿಂದ ಅಸ್ತಿತ್ವವನ್ನು ಪರಿಶುದ್ಧಗೊಳಿಸುವುದು ಮತ್ತು ಬದಲಾಯಿಸುವುದು. ಇದರಿಂದ ಅಸ್ತಿತ್ವವು ರೂಪಾಂತರಕ್ಕೆ ಮತ್ತು ದೈವೀ ಜ್ಞಾನ, ಸಂಕಲ್ಪ ಮತ್ತು ಪ್ರೀತಿಯೊಂದಿಗೆ ಐಕ್ಯವಾಗಲು ಸಿದ್ಧವಾಗುತ್ತದೆ. ಎರಡನೆಯದಾಗಿ ಯೋಗಿಕ ಪ್ರಜ್ಞೆಯನ್ನು ಅಭಿವೃದ್ಧಿಪಡಿಸುವುದು. ಅಂದರೆ ಎಲ್ಲಾ ಸ್ತರಗಳಲ್ಲಿಯೂ ಅಸ್ತಿತ್ವವನ್ನು ವಿಶ್ವಾತ್ಮಕವನ್ನಾಗಿಸುವುದು, ವಿಶ್ವಾತೀತ ಅಸ್ತಿತ್ವದ ಅರಿವನ್ನು ಪಡೆಯುವುದು ಮತ್ತು ಅದಿಮಾನಸದವರೆಗಿನ ಎಲ್ಲಾ ಸ್ತರಗಳಲ್ಲಿಯೂ ಪರಮಾತ್ಮನೊಂದಿಗೆ ಐಕ್ಯವಾಗಿರುವುದು. ಮೂರನೆಯದಾಗಿ ಅಧಿಮಾನಸದಾಚೆಗಿನ ಪರಾತ್ಪರದೊಂದಿಗಿನ ಸಂಪರ್ಕಕ್ಕೆ ಬರುವುದು, ಅತಿಮಾನಸ ಪ್ರಜ್ಞೆಯ ಮೂಲಕ ಪ್ರಜ್ಞೆ ಮತ್ತು ಪ್ರಕೃತಿಯನ್ನು ಅತಿಮಾನಸೀಕರಣಗಳಿಸಿ ಮತ್ತು ಕ್ರಿಯಾತ್ಮಕ ದೈವೀ ಸತ್ಯದ ಸಾಕ್ಷಾತ್ಕಾರಕ್ಕಾಗಿ ನಿಮ್ಮನ್ನು ಉಪಕರಣವನ್ನಾಗಿ ಮಾಡಿಕೊಳ್ಳುವುದು.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 29/19–20**

**ಪೂರ್ಣ ಯೋಗದ ತತ್ವಗಳು**

ಈ ಯೋಗದ ಇಡೀ ತತ್ವವೆಂದರೆ ತಮ್ಮನ್ನು ತಾವು ದೈವೀ ಪ್ರಭಾವಕ್ಕೆ ತೆರಿದಿಟ್ಟುಕೊಳ್ಳುವುದೇ ಆಗಿದೆ. ಇದು ನಿಮ್ಮನ್ನೇ ಅವಲಂಬಿಸಿಕೊಂಡಿದೆ. ಒಮ್ಮೆ ನೀವು ಅದರ ಬಗ್ಗೆ ಪ್ರಜ್ಞಾಯುತರಾದರೆ, ಒಮ್ಮೆ ನೀವು ಅದರ ಬಗ್ಗೆ ಅಭೀಪ್ಸೆ ಹೊಂದಿದರೆ, ಆಗ ನಿಮ್ಮೊಳಗೆ ಅವತರಣಗೊಳ್ಳಲು ಕರೆಯಬಹುದು. ಇದು ಮನ ಮತ್ತು ದೇಹದಲ್ಲಿ ಶಾಂತಿಯಾಗಿ, ಬೆಳಕಾಗಿ, ಕೆಲಸ ಮಾಡುವ ಶಕ್ತಿಯಾಗಿ ಆನಂದವಾಗಿ ಇಳಿಯುತ್ತದೆ. ಒಬ್ಬರು ಈ ಪ್ರಜ್ಞೆಯನ್ನು ಪಡೆಯುವುದಕ್ಕಿಂತ ಮುಂಚಿತವಾಗಿ ಶ್ರದ್ಧೆಯನ್ನು ಪಡೆದು ಮತ್ತು ತೆರೆಯುವಿಕೆಗಾಗಿ ಅಭೀಪ್ಸೆ, ಕರೆ, ಪ್ರಾರ್ಥನೆ ಇವು ಒಂದೇ ಅಂಶದ ರೂಪಗಳಾಗಿವೆ. ಮತ್ತು ಇವೆಲ್ಲಾ ಪರಿಣಾಮಕಾರಿಯಾಗಿವೆ; ನಿಮ್ಮೆಡೆಗೆ ಬಂದಿರುವ ರೂಪವನ್ನು ಅಥವಾ ನಿಮಗೆ ಸುಲಭವಾಗಿ ಬಂದಿರುವ ರೂಪವನ್ನು ಅಥವಾ ನಿಮಗೆ ಸುಲಭವಾದುದನ್ನು ನೀವು ತೆಗೆದುಕೊಳ್ಳಬಹುದು. ಇನ್ನೊಂದು ಮಾರ್ಗವೆಂದರೆ ಏಕಾಗ್ರತೆ; ನೀವು ನಿಮ್ಮ ಪ್ರಜ್ಞೆಯನ್ನು ಹೃದಯದಲ್ಲಿ ಕೇಂದ್ರೀಕರಿಸಿ (ಕೆಲವರು ಶಿರೋ ಭಾಗದಲ್ಲಿ ಅಥವಾ ಮತ್ತೂ ಮೇಲೆ ಮಾಡುತ್ತಾರೆ) ಮತ್ತು ಹೃದಯದಲ್ಲಿ ಶ್ರೀಮಾತೆಯನ್ನು ಧ್ಯಾನಿಸಿ ಮತ್ತು ಆಕೆಯನ್ನು ಅಲ್ಲಿ ಕರೆಯಿರಿ. ಒಬ್ಬರು ಯಾವುದಾದರೂ ಒಂದನ್ನು

ಅಥವಾ ಎರಡನ್ನೂ ವಿವಿಧ ಸಮಯದಲ್ಲಿ ಮಾಡಬಹುದು. ನಿಮಗೆ ಆ ಸಮಯದಲ್ಲಿ ನೀವು ಏನು ಮಾಡಲು ಹೊರಟಿರುವಿರೋ ಅದನ್ನು ಮಾಡಿ. ವಿಶೇಷವಾಗಿ ಆರಂಭದಲ್ಲಿ ಒಂದು ಉನ್ನತವಾದ ಅವಶ್ಯಕತೆಯೆಂದರೆ ನಿಮ್ಮ ಮನವನ್ನು ನಿಶ್ಚಲಗೊಳಿಸುವುದು, ಧ್ಯಾನದ ಸಮಯದಲ್ಲಿ ಸಾಧನಕ್ಕೆ ಸಂಬಂಧವಿಲ್ಲದ ಎಲ್ಲಾ ಯೋಚನೆ ಮತ್ತು ಚಲನೆಗಳನ್ನು ತಿರಸ್ಕರಿಸಿ. ನಿಶ್ಚಲ ಮನದಲ್ಲಿ ಅನುಭವಕ್ಕಾಗಿ ಒಂದು ಪ್ರಗತಿದಾಯಕ ಸಿದ್ಧತೆಯು ನಡೆದಿರುತ್ತದೆ. ಆದರೆ ಎಲ್ಲವೂ ಒಮ್ಮೆಯೇ ಆಗದಿದ್ದರೆ ನೀವು ತಾಳ್ಮೆಗೆಡಬಾರದು; ಮನದಲ್ಲಿ ಸಂಪರ್ಣ ನಿಶ್ಚಲತೆ ತರಲು ಸಮಯ ತೆಗೆದುಕೊಳ್ಳುತ್ತದೆ; ಪ್ರಜ್ಞೆಯು ಸಿದ್ಧವಾಗುವವರೆಗೆ ನೀವು ಮುಂದುವರೆಯಬೇಕಾಗುತ್ತದೆ.

*

ಈ ಯೋಗದಲ್ಲಿ ಒಬ್ಬರು 'ಪ್ರಭಾವಕ್ಕೆ' ತಮ್ಮನ್ನು ತೆರೆದಿರುವರೋ ಇಲ್ಲವೋ ಎಂಬುದರ ಮೇಲೆ ಎಲ್ಲಾ ಅವಲಂಬಿತವಾಗಿದೆ. ಅಭೀಪ್ಸೆಯಲ್ಲಿ ಪ್ರಾಮಾಣಿಕತೆ ಮತ್ತು ಎಲ್ಲಾ ಅಡೆತಡೆಗಳ ಹೊರತಾಗಿಯೂ ಉನ್ನತ ಪ್ರಜ್ಞೆಯೆಡೆಗೆ ಹೋಗುವ ತಾಳ್ಮೆಯುತ ಸಂಕಲ್ಪವಿದ್ದರೆ, ಆಗ ಒಂದು ಅಥವಾ ಇನ್ನೊಂದು ರೂಪದ ತೆರೆದುಕೊಳ್ಳುವಿಕೆ ಖಂಡಿತವಾಗಿ ಬರುತ್ತದೆ. ಆದರೆ ಸಿದ್ಧಪಡಿಸಿದ ಅಥವಾ ಸಿದ್ಧಪಡಿಸದೇ ಇರುವ ಮನ, ಹೃದಯ ಮತ್ತು ದೇಹದ ಸ್ಥಿತಿಗನುಸಾರವಾಗಿ ಇದು ಹೆಚ್ಚು ಅಥವಾ ಕಡಿಮೆ ಸಮಯ ತೆಗೆದುಕೊಳ್ಳುತ್ತದೆ; ಆದ್ದರಿಂದ ಒಬ್ಬರು ಅವಶ್ಯಕ ತಾಳ್ಮೆಯನ್ನು ಹೊಂದಿಲ್ಲದಿದ್ದರೆ ಆರಂಭಿಕ ಕಷ್ಟಗಳಿಗೆ, ಪ್ರಯತ್ನಗಳನ್ನು ಕೈಬಿಡಲು ಬದ್ಧನಾಗಬೇಕಾಗುತ್ತದೆ. ಹೃದಯದಲ್ಲಿ ಕೇಂದ್ರೀಕರಿಸುವಿಕೆಯ ಹೊರತಾಗಿ ಈ ಯೋಗದಲ್ಲಿ ಯಾವ ವಿಧಾನಗಳೂ ಇಲ್ಲ, ಮತ್ತು ನಾವು ಶ್ರೀಮಾತೆಯ ಅಸ್ತಿತ್ವದೊಳಗಾಗಲು ಆಕೆಯ ಸನ್ನಿಧಾನ ಮತ್ತು ಶಕ್ತಿಯನ್ನು ಕರೆಯಿರಿ ಮತ್ತು ಆಕೆಯ ಶಕ್ತಿಯ ಕ್ರಿಯೆಯಿಂದ ಪ್ರಜ್ಞೆಯನ್ನು ರೂಪಾಂತರಿಸಿ; ಒಬ್ಬರು ಮುಕುಟ ಅಥವಾ ಭ್ರೂ–ಮಧ್ಯಯಲ್ಲಿಯೂ ಸಹ ಕೇಂದ್ರೀಕರಿಸಬಹುದು. ಆದರೆ ಬಹಳಷ್ಟು ಜನರಿಗೆ ಇದು ಅತೀ ಕಷ್ಟಕರವಾದ ತೆರೆದುಕೊಳ್ಳುವಿಕೆಯಾಗಿದೆ. ಮನ ನಿಶ್ಚಲವಾದಾಗ ಮತ್ತು ಏಕಾಗ್ರತೆ ಬಲಶಾಲಿಯಾದಾಗ ಮತ್ತು ಅಭೀಪ್ಸೆ ತೀವ್ರವಾದಾಗ, ಆಲ್ಲಿ ಅನುಭಾವವು ಆಂಭವಾಗುತ್ತದೆ. ಶ್ರದ್ಧೆ ಹೆಚ್ಚಾಗಿದ್ದರೆ, ಫಲಿತಾಂಶವೂ ಶೀಘ್ರವಾಗಿರುತ್ತದೆ. ಉಳಿದವುಗಳಿಗಾಗಿ ಒಬ್ಬರು ತಮ್ಮ ಸ್ವಂತ

ಪ್ರಯತ್ನಗಳು ಮಾತ್ರ ಅವಲಂಬನೆಯಾಗಬಾರದು, ಆದರೆ ಪರಮಾತ್ಮನೊಂದಿಗೆ ಸಂಪರ್ಕ ಏರ್ಪಡಿಸಿಕೊಳ್ಳಲು ಮತ್ತು ಶ್ರೀಮಾತೆಯ ಶಕ್ತಿ ಮತ್ತು ಸಾನಿಧ್ಯ ಸ್ವೀಕರಿಸಿಕೊಳ್ಳುವಲ್ಲಿ ಯಶ್ವಸಿಯಾಗಬೇಕು.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 29/106–07 – ಶ್ರೀ ಅರವಿಂದರು**

## ಪಥದಲ್ಲಿ ಮುನ್ನಡೆ

**– ಅನುವಾದ: ಪುಟ್ಟು ಕುಲಕರ್ಣಿ**

### ಚೈತ್ಯ ಸತ್ತೆ

**ಈ ಜೀವ–ಜಗತ್ತು** ಅಥವಾ ಚೈತನ್ಯದ ಸಮಕ್ಷೇತ್ರವು ಈ ಜಗತ್ತಿನ ಒಂದು ಭಾಗವೇ ಆಗಿರುತ್ತದೆ. ಅದರಲ್ಲಿ ಈ ಚೈತಾತ್ಮವು ಆ ದಿವ್ಯ–ಚೇತನದ ಪ್ರಭಾವದಲ್ಲಿಯೇ ನೇರವಾಗಿ ಅಸ್ತಿತ್ವಗೊಂಡಿರುತ್ತದೆ. ಇಲ್ಲಿ ಯಾವುದೇ ಪ್ರತಿರೋಧ ಶಕ್ತಿಯೂ ಸಹಿತ ದೂರದಿಂದಲೂ ಇದರ ಮೇಲೆ ಪ್ರಭಾವವನ್ನು ಬೀರಲು ಸಾಧ್ಯವಿಲ್ಲ. ಇದು ಸೌಷಮ್ಯವೇ ತುಂಬಿಕೊಂಡಿರುವ ಜಗತ್ತು. ಇಲ್ಲಿ ಪ್ರತಿಯೊಂದೂ ಪ್ರಕಾಶದಿಂದ ಪ್ರಕಾಶದತ್ತಲೇ ಸಾಗುತ್ತದೆ. ಹೀಗಾಗಿ ಅದು ಪ್ರಗತಿಯಿಂದ ಪ್ರಗತಿಯತ್ತಲೇ ಆರೋಹಣ ಗೈಯುತ್ತಿದೆ. ಇದು ದಿವ್ಯ–ಚೇತನವು ಸ್ಥಿತವಾಗಿರುವ ಪೀಠವೂ ಆಗಿದೆ. ಅಂದರೆ ವೈಯಕ್ತಿಕ ಅಸ್ತಿತ್ವ(ವ್ಯಕ್ತಿಗತ ಅಸ್ತಿತ್ವ)ದಲ್ಲಿ ಅಂತರ್ಗತಗೊಂಡಿರುವ ದಿವ್ಯ–ಆತ್ಮವಾಗಿದೆ. ಇದು ಪ್ರಕಾಶದ ಕೇಂದ್ರ ಬಿಂದುವೂ ಹೌದು. ಜೊತೆಜೊತೆಗೆ ಸತ್ಯ ಮತ್ತು ಜ್ಞಾನದ ಹಾಗೂ ಸೌಂದರ್ಯದ ಮತ್ತು ಸೌಷಮ್ಯದ ರೂಪವಾಗಿದ್ದು, ಇಲ್ಲಿಯೇ ದಿವ್ಯ ಚೇತನವು ಈ ಪ್ರತಿಹಂತವನ್ನು ಸೃಷ್ಟಿಸುತ್ತಲೇ ತನ್ನ ಅಸ್ತಿತ್ವವನ್ನೂ ಹಂತಹಂತವಾಗಿಯೇ ತೋರಿಸುತ್ತದೆ. ಈ ಎಲ್ಲವೂ ಚೈತನ್ಯದಿಂದಲೇ ಪ್ರಭಾವಿತಗೊಂಡಿದ್ದು, ರೂಪವನ್ನು ಧರಿಸಿಕೊಂಡು ಚಲಿಸುತ್ತವೆ. ಸ್ಪಂದಿಸುತ್ತವೆ. ಇದು ದಿವ್ಯ ಚೇತನದ ಅಂಶಾಂಶವಾಗಿಯೂ ಇರುತ್ತದೆ.

ನಿಮ್ಮಲ್ಲಿ ಎಲ್ಲರಲ್ಲಿಯೂ ಇದು ಆಂತರ್ಯದ ಆಳದಲ್ಲಿಯೇ ಇರುವ ಅಸ್ತಿತ್ವವಾಗಿದೆ. ನೀವು ಅದರ ಸಂಪರ್ಕಕ್ಕೆ ಬರಲು, ಅದರೊಡನೆ ಸ್ಪಂದಿಸಲು ಸಾಧ್ಯವಾಗುವ ಹಾಗೆ ಇರುವ ಪಥವನ್ನು ಆಯ್ದುಕೊಳ್ಳಬೇಕು. ಇದು ದಿವ್ಯ–ಚೈತನ್ಯ

ಮತ್ತು ಬಾಹ್ಯ–ಪ್ರಜ್ಞೆಯ ಮಧ್ಯದಲ್ಲಿ ಇರುವ ಸಂಪರ್ಕ–ಸೇತುವಾಗಿರುತ್ತದೆ. ಇದು ಆಂತರ್ಯವನ್ನು ಪೂರ್ಣಗೊಳಿಸುವ ಹಾಗೆ ರಚನೆಯನ್ನು ಮಾಡುತ್ತದೆ. ಆ ದೈವೀ ಇಚ್ಛೆಯ ಅನುಸಾರವಾಗಿಯೇ ನಿಯಾಮಕಗೊಳ್ಳುವಂತೆ ಮತ್ತು ಬಾಹ್ಯ ಸ್ವಭಾವದಲ್ಲಿ ಅಂದರೆ ಪ್ರಕಟಿತ ಸ್ವಭಾವದಲ್ಲಿ ಅಭಿವ್ಯಕ್ತಗೊಳಲು ಇರುತ್ತದೆ. ನಿಮ್ಮ ಬಾಹ್ಯ ಬದುಕಿನಲ್ಲಿ ಇರುವ ಈ ಜೀವ–ಚೇತನದ ಬಗೆಗೆ ಅದು ನಿಮ್ಮ ಅಂತರಾತ್ಮವಾಗಿರುವ ಜೀವಾತ್ಮದೊಂದಿಗೇ ಸಂಯೋಗಗೊಂಡಿರುತ್ತದೆ. ಈ ವಿಷಯದ ಬಗೆಗೆ ನೀವು ಅರಿತುಕೊಂಡಲ್ಲಿ, ಆಗ ನೀವು ಪರಿಶುದ್ಧವಾದ ಶಾಶ್ವತದ ಚೈತನ್ಯವನ್ನು ಕಾಣಬಹುದು ಮತ್ತು ಅದರೊಡನೆ ಚಲಿಸಬಹುದು. ಕೇವಲ ಅಜ್ಞಾನದಲ್ಲಿಯೇ ದಿನ ಕಳೆಯುವದರ ಬದಲು, ಇದು ಈಗ ಸದ್ಯದ ಮಾನವ ಸಮುದಾಯವು ಅನುಸರಿಸುತ್ತಿರುವ ವಿಧಾನದಂತೆ ಇರದೇ, ಆ ಶಾಶ್ವತದ ಪ್ರಕಾಶವು ಮತ್ತು ಜ್ಞಾನವು ಅಸ್ತಿತ್ವದಲ್ಲಿರುವ ಬಗೆಗೆ – ಅದರಲ್ಲೂ ಅದೆಲ್ಲವೂ ನಿಮ್ಮಲ್ಲಿಯೇ ಇರುವದರ ಕುರಿತು ಜಾಗೃತಿ ಹೊಂದಬೇಕು. ಒಂದು ವೇಳೆ ನೀವು ಅದಕ್ಕೆ ನಿಮ್ಮನ್ನು ಪೂರ್ಣ ಸಮರ್ಪಣೆ ಮಾಡಿಕೊಂಡು ಅದರೊಡನೆ ಸಮಗ್ರೀಕರಿಸಿಕೊಂಡರೆ, ಆಗ ಅದು ಎಲ್ಲ ವಸ್ತುಗಳ–ವಿಷಯಗಳ ಚಲನವಲನಕ್ಕೆ ಕಾರಣವಾಗುತ್ತದೆ.

ನೀವು ಯಾವುದನ್ನು ಆ ಪರಮ ದಿವ್ಯಕ್ಕೆ ಸಮರ್ಪಣೆ ಮಾಡಿಕೊಂಡಿರುವಿರೋ, ಆ ಪರಮ ದಿವ್ಯತ್ವದ ಭಾಗವಾಗಿಯೇ ನಿಮ್ಮ ಚೈತ್ಯಾತ್ಮವೂ ಇರುತ್ತದೆ. ಇದು ನಿಧಾನವಾಗಿಯೇ–ಕ್ರಮಾನುಗತವಾಗಿಯೇ– ವಿಸ್ತರಿಸಿಕೊಳ್ಳುತ್ತ, ನಿಮ್ಮಂತರಂಗದಲ್ಲಿಯೇ ವ್ಯಾಪ್ತಿಗೊಳ್ಳುತ್ತ, ನಿಮ್ಮ ಬಾಹ್ಯ ಚಟುವಟಿಕೆಗಳ ಮೇಲೆ, ಭೌತಿಕ ಸೀಮೆಗಳ ಚಟುವಟಿಕೆಗಳ ಮೇಲೆ ಪ್ರಭಾವವನ್ನು ಬೀರುತ್ತದೆ. ಈ ಮೂಲಕ ಇದು ನಿಮ್ಮ ಸ್ವಭಾವವನ್ನೇ ಸಂಪೂರ್ಣ ರೂಪಾಂತರಗೊಳಿಸುತ್ತದೆ. ಇಲ್ಲಿ ಯಾವುದೇ ರೀತಿಯಲ್ಲಿ ನಿಸ್ತೇಜಗೊಳ್ಳುವ ಸ್ಥಿತಿಯು ಇರುವದಿಲ್ಲ. ಇದು ನಿಮ್ಮಂತರಂಗದಲ್ಲಿಯೇ ಇರುವ ಕಾಂತಿ ವಲಯವಾಗಿದೆ. ಬಹುತೇಖ ಜನರು ತಮ್ಮಲ್ಲಿಯೇ ಇರುವ ಈ ಚೈತನ್ಯದ ಕುರಿತು ಪ್ರಜ್ಞೆಯನ್ನು ಪಡೆದುಕೊಂಡಿರುವದಿಲ್ಲ. ಯೋಗದಿಂದ ಮಾತ್ರ ಇದನ್ನು ಅರಿತುಕೊಳ್ಳಲು ಸಾಧ್ಯವಾಗುತ್ತದೆ. ಇದು ನಿಮ್ಮ ರೂಪಾಂತರಣದ ಪ್ರಕ್ರಿಯೆಗೆ ಕಾರಣವಾಗಿ, ನಿಧಾನವಾಗಿ, ಕ್ರಮೇಣವಾಗಿ, ಶ್ರಮದಾಯಕವಾದ ರೀತಿಯಲ್ಲಿಯೇ ಶತಶತಮಾನಗಳ ಕಾಲದ ದೀರ್ಘಾವಧಿಯಲ್ಲಿ ಪೂರ್ಣಗೊಳ್ಳುವದಕ್ಕಿಂತ,

ಇದನ್ನು ಕೇವಲ ಒಂದೇ ಒಂದು ಜನ್ಮದ ಅವಧಿಯಲ್ಲಿ, ಅಥವಾ ಆ ಜನ್ಮದ ಕೆಲವೇ ಕೆಲವು ವರ್ಷಗಳ ಅವಧಿಯಲ್ಲಿ ಪಡೆದುಕೊಳ್ಳಬಹುದಾಗಿದೆ.

ಈ ಚೈತ್ಯವು ಸಾವಿನ ನಂತರದಲ್ಲೂ ಸಹಿತ ಪ್ರವೃತ್ತಿಯಾಗಿಯೇ ಇರುತ್ತದೆ. ಏಕೆಂದರೆ ಇದು ಶಾಶ್ವತವಾದ ಚೈತ್ಯವಾಗಿದೆ. ಇದೇ ಜನ್ಮದಿಂದ ಜನ್ಮಕ್ಕೆ ಪ್ರಜ್ಞೆಯನ್ನು ಮುಂದುವರೆಸಿಕೊಂಡು ಹೋಗುತ್ತದೆ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 3/62–63**

## ಯೋಗದ ಪದ್ಧತಿಗಳು

**– ಅನುವಾದ: ಶ್ರೀ ಎಂ.ಎಸ್. ನಾಗರಹಳ್ಳಿ**

ಪ್ರಕೃತಿಯ ವಿಕಾಸ ಕ್ರಮದ ಅಭ್ಯಾಸದಲ್ಲಿ ನಾವು ಮಾನವನಲ್ಲಿ ಕಂಡುಕೊಂಡ ವಿಭಾಗಗಳು ಹಾಗೂ ಅವುಗಳ ಉದ್ದೇಶ, ಉಪಯುಕ್ತತೆಗಳು ಇವೆ ಯೋಗದ ಬೇರೆ ಬೇರೆ ಪದ್ಧತಿಗಳಲ್ಲಿ ನಮಗೆ ಗೋಚರಿಸುವವು. ಮೂಲಭೂತ ಸಿದ್ಧಾಂತಗಳು ಹಾಗೂ ಕ್ರಮಗಳು ಪ್ರಕೃತಿ ಮತ್ತು ಯೋಗ ಇವೆರಡರಲ್ಲಿ ಒಂದೇ ಆಗಿವೆ. ಬೇರೆ ಬೇರೆ ಯೋಗ ಪದ್ಧತಿಗಳ ಮುಖ್ಯ ಗುರಿಗಳಲ್ಲಿ, ಕೇಂದ್ರೀಯ ಸಾಧನ ಕ್ರಮಗಳಲ್ಲಿ ಸಮನ್ವಯವನ್ನು ಸಾಧಿಸುವ ಯತ್ನದಲ್ಲಿ ಪ್ರಕೃತಿಯು ನಮಗೆ ನೀಡಿದ ಆಧಾರವೇ ನಮಗೆ ಸಹಾಯಕವಾಗುತ್ತದೆ.

ಒಂದು ದೃಷ್ಟಿಯಲ್ಲಿ ಯೋಗವು ವಿಶ್ವ ಪ್ರಕೃತಿಯ ಸಾಮಾನ್ಯ ವ್ಯಾಪಾರಗಳನ್ನು ದಾಟಿ ಮುಂದುವರೆಯುತ್ತದೆ. ವಿಶ್ವಮಾತೆಯು ತನ್ನ ಸ್ತರದಲ್ಲಿಯೇ ದೇವನನ್ನು ಅಪ್ಪಿಕೊಳ್ಳಲೆತ್ನಿಸುವಳು. ಆದರೆ ಯೋಗದ ಅತ್ಯುನ್ನತ ಆರೋಹಣಗಳಲ್ಲಿ ಆಕೆಯು ತನ್ನನ್ನೇ ಮೀರಿ ದೇವನನ್ನು ಅತೀತ ಸ್ತರಗಳಲ್ಲಿ ಕಂಡುಕೊಳ್ಳಲು ಯತ್ನಿಸುವಳು. ಇದರಿಂದಾಗಿ ಕೇವಲ ಅತೀತ ಸ್ತರಗಳಲ್ಲಷ್ಟೇ ಪರಮಾತ್ಮನೊಡನೆ ಒಂದಾಗುವದು ಯೋಗದ ಏಕೈಕ ಗುರಿಯಾಗಬಲ್ಲದು.

ಪ್ರಕೃತಿಯು ತನ್ನಲ್ಲಿ ಮೂಡಿಬಂದ ಅಂಶಗಳಲ್ಲಿ ಯಾವುದಾದರೊಂದರ ಮೂಲಕವೇ ಸದ್ಯದ ವಿಕಾಸ ಸ್ತರವನ್ನು ದಾಟಲೆತ್ನಿಸುವಳು. ವೈಯಕ್ತಿಕ ಹೃದಯವು ತನ್ನ ಅತ್ಯುಚ್ಚ ಪರಿಶುದ್ಧ ಭಾವನೆಗಳ ಊರ್ಧ್ವ ಪಾತದಿಂದಾಗಿ ಅತೀತ ಆನಂದವನ್ನು ಇಲ್ಲವೆ ಅನಿರ್ವಚನೀಯ ನಿರ್ವಾಣವನ್ನು ಹೊಂದುವದು.

ವೈಯಕ್ತಿಕ ಮನಸ್ಸು ತನ್ನ ಸಾಮಾನ್ಯ ಕಾರ್ಯಗಳಿಗೆ ಮನದಾಚೆಗಿನ ಜ್ಞಾನದ ಸ್ವರೂಪವನ್ನು ಕೊಟ್ಟು ಅನಿರ್ವಚನೀಯನು ಹಾಗು ತಾನು ಒಂದೇ ಎನ್ನುವ ಜ್ಞಾನವನ್ನು ದೊರಕಿಸಿಕೊಂಡು ತನ್ನ ಬೇರೆ ಅಸ್ತಿತ್ವವನ್ನು ಅತೀತ ಅಸ್ತಿತ್ವದಲ್ಲಿ ಒಂದಾಗಿರುವದು. ಪ್ರಕೃತಿಯ ಚೌಕಟ್ಟಿನಲ್ಲಿರುವ ವೈಯಕ್ತಿಕ ಆತ್ಮನೇ ಯಾವಾಗಲೂ ಸ್ವತಂತ್ರ ಅತೀತ ಪರಮಾತ್ಮನೊಡನೆ ಒಂದಾಗುವನು.

ಯೋಗದ ಸಾಧ್ಯತೆಗಿಂತಲೂ ಮೊದಲು **ಮೂರು ಅಂಶಗಳ** ಅಗತ್ಯತೆ ಇರುವದು. ಯೋಗ ಸಾಧನೆಯ ಪ್ರಯತ್ನಕ್ಕೆ ಈ ಮೂರು ಅಂಶಗಳ ಒಪ್ಪಿಗೆ ಬೇಕಾಗುವದು. **ದೇವ, ಪ್ರಕೃತಿ ಹಾಗು ಮಾನವ** ಜೀವಿ ಇವೇ ಆ ಮೂರು ಅಂಶಗಳಾಗಿವೆ. ಯೋಗದ ಪರಿಭಾಷೆಯಲ್ಲಿ ಹೇಳುವದಾದರೆ, **ಅತೀತ, ವಿಶ್ವಾತ್ಮಕ ಹಾಗು ವೈಯಕ್ತಿಕ ಆತ್ಮಗಳೇ** ಈ ಮೂರು ಅಂಶಗಳಾಗಿವೆ. ವ್ಯಕ್ತಿ ಹಾಗು ಪ್ರಕೃತಿಗಳು ಎರಡೇ ಇದ್ದರೆ ವ್ಯಕ್ತಿಯು ಪ್ರಕೃತಿಗೆ ಅಧೀನನಾಗಿ ಪ್ರಕೃತಿಯ ವಿಕಾಸವೂ ನಿಧಾನವಾಗುವದು. ಪ್ರಕೃತಿಗಿಂತ ಮಿಗಿಲಾದ ಸ್ವತಂತ್ರವಾದ, ಅತೀತವಾದ ಅಂಶವೊಂದು ಇರಲೇಬೇಕು. ಈ ಅತೀತವು ಉಳಿದ ಎರಡೂ ಅಂಶಗಳ ಮೇಲೆ ತನ್ನ ಪ್ರಭಾವವನ್ನು ಬೀರಿ ವ್ಯಕ್ತಿಯನ್ನು ತನ್ನತ್ತ ಆಕರ್ಷಿಸುವದು ಮತ್ತು ವ್ಯಕ್ತಿಯ ಉನ್ನತಿಗೆ ಪ್ರಕೃತಿಯು ಒಪ್ಪಿಗೆಯನ್ನು ಪಡೆಯುವದು. ಹೀಗಾಗಿ ಅತೀತವು ಪ್ರಕೃತಿಯ ಪ್ರಭುವಾಗಿರುವದು.

ಈ ಸತ್ಯದಿಂದಾಗಿ ಪ್ರತಿಯೊಂದು ಯೋಗ ಪದ್ಧತಿ ಹಿನ್ನಲೆಯಲ್ಲಿದ್ದ ಸಿದ್ಧಾಂತಕ್ಕೆ, ಯೋಗ ಸಾಧನೆಯ ಪ್ರಯತ್ನಕ್ಕೆ ಗಮ್ಯವಸ್ತುವಾದ ಹಾಗೂ ಸಾಧಕನಿಗೆ ಜ್ಞಾನದ ಸ್ಪರ್ಶವನ್ನು, ಸಿದ್ಧಿಗೆ ಬೇಕಾದ ಶಕ್ತಿಯನ್ನೂ ಕೊಡುವ ಈಶ್ವರ, ಪ್ರಭು ಪರಮಾತ್ಮನ ವಿಚಾರವು ಅನಿವಾರ್ಯವಾಗುತ್ತದೆ. ವ್ಯಕ್ತಿಗೆ ಅತೀತನ ಅವಶ್ಯಕತೆ ಇದ್ದಂತೆ ಅತೀತನಿಗೆ ವ್ಯಕ್ತಿಯ ಅವಶ್ಯಕತೆ ಇರುತ್ತದೆ. ವ್ಯಕ್ತಿಯು ಅತೀತವನ್ನರಸುವಂತೆ ಅತೀತನೂ ಸಹಿತ ವ್ಯಕ್ತಿಯನ್ನು ಅರಸುವನು. **ಭಕ್ತಿ ಯೋಗ**ವು ಹೇಳುವ ಈ ಮಾತು ಮೇಲಿನ ಮಾತಿಗೆ ಪೂರಕವಾಗಿದೆ. ಭಕ್ತನು ಭಗವಂತನಿಗಾಗಿ ಹಂಬಲಿಸುವಂತೆ ಭಗವಂತನು ಭಕ್ತನಿಗಾಗಿ ಹಂಬಲಿಸುವನು. ಜ್ಞಾನ ಪಿಪಾಸು ಮಾನವ, ಜ್ಞಾನದ ಪರಮ ಗಮ್ಯವಸ್ತು ಹಾಗೂ ವ್ಯಕ್ತಿಯಿಂದ ಜ್ಞಾನದ ವಿಶ್ವಾತ್ಮಕ ಶಕ್ತಿಗಳ ದಿವ್ಯ ಉಪಯೋಗ ಇವಿಲ್ಲದಿದ್ದರೆ **ಜ್ಞಾನ ಯೋಗವು** ಇರಲಾರದು. ದೇವಭಕ್ತ ಮಾನವ, ಪ್ರೇಮ ಆನಂದಗಳ ಪರಮ ಗಮ್ಯವಸ್ತು ಹಾಗು ವ್ಯಕ್ತಿಯಿಂದ ಆಧ್ಯಾತ್ಮಿಕ, ಭಾವನಾತ್ಮಕ. ಸೌಂದರ್ಯಾತ್ಮಕ ವಿಶ್ವ ಶಕ್ತಿಗಳ ದಿವ್ಯ

ಉಪಯೋಗ ಇವಿಲ್ಲದೇ **ಭಕ್ತಿ ಯೋಗವು** ಇರಲಾರದು. ಮಾನವೀಯ ಕರ್ತೃ, ಪರಮ ಸಂಕಲ್ಪ ಸ್ವರೂಪನಾದ ಎಲ್ಲ ಕರ್ಮಗಳ ಪ್ರಭುವು ಹಾಗೂ ವ್ಯಕ್ತಿಯಿಂದ ಪರಮ ವಿಶ್ವ ಶಕ್ತಿಗಳ ದಿವ್ಯ ಉಪಯೋಗ ಇವಿಲ್ಲದಿದ್ದರೆ **ಕರ್ಮ ಯೋಗ**ವಿರಲಾರದು. ಸದ್ವಸ್ತುವಿನಲ್ಲಿ ಅತ್ಯುಚ್ಚ ಅದ್ವೈತ ಭಾವವನ್ನು ಇಟ್ಟುಕೊಂಡವನಿಗೂ ಕೂಡ ಜೀವನದಲ್ಲಿ ಈ ಸರ್ವವ್ಯಾಪಿತ್ವವನ್ನು ಸ್ವೀಕರಿಸಲೇಬೇಕಾಗುವದು.

**ಮಾನವೀಯ ವೈಯಕ್ತಿಕ ಪ್ರಜ್ಞೆ ಹಾಗು ದಿವ್ಯ ಪ್ರಜ್ಞೆಗಳ ಐಕ್ಯವೇ ಯೋಗದ ಸಾರ**ವಾಗಿದೆ. ವಿಶ್ವದಲ್ಲಿ ತನ್ನ ಮೂಲದಿಂದ ಬೇರ್ಪಟ್ಟ ಅಂಶವು ಮತ್ತೆ ತನ್ನ ಮೂಲದೊಡನೆ ಒಂದಾಗುವದೇ ಯೋಗವಾಗಿದೆ. ಈ ಐಕ್ಯದ ಸ್ಪರ್ಶವು ನಮ್ಮ ವ್ಯಕ್ತಿತ್ವದ ಸಂಕೀರ್ಣ ಪ್ರಜ್ಞೆಯ ಯಾವುದೇ ಒಂದು ಭಾಗದಲ್ಲಾಗಬಹುದು. ಅದು ದೇಹದ ಮೂಲಕ ಭೌತ ಸ್ತರದಲ್ಲಿ, ನಮ್ಮ ನರ ಮಂಡಲದ ಮೂಲಕ ಪ್ರಾಣ ಸ್ತರದಲ್ಲಿ, ಭಾವನಾತ್ಮಕ ಹೃದಯ, ಸಕ್ರಿಯ ಸಂಕಲ್ಪಶಕ್ತಿ, ಬುದ್ಧಿ ಇಲ್ಲವೆ ಮಾನಸಿಕ ಪ್ರಜ್ಞೆಯ ಸಾಮಾನ್ಯ ಬದಲಾವಣೆಯ ಮೂಲಕ ಮನಸ್ತರದಲ್ಲಿ ಆಗಬಹುದು. ಅಹಂಪುರುಷನ ಸ್ಥಾಯಿಯಲ್ಲಿಯ ಬದಲಾವಣೆಯಿಂದಾಗಿ ಇದು ವಿಶ್ವಾತ್ಮನ ಇಲ್ಲವೇ ಅತೀತಾತ್ಮನ ಸಾಕ್ಷಾತ್ಕಾರದಿಂದಲೂ ಆಗಬಹುದು. ಸ್ಪರ್ಶಗೊಂಡ ನಮ್ಮ ವಿಶಿಷ್ಟ ಅಂಶವು ಯೋಗಕ್ಕೆ ವಿಶಿಷ್ಟ ಸ್ವರೂಪವನ್ನು ಕೊಡುವದು.

ಭಾರತದಲ್ಲಿ ಸದ್ಯ ಪ್ರಚಲಿತಿವಿದ್ದ ಎಲ್ಲ ಯೋಗ ಪದ್ಧತಿಗಳ ಸಾರ ತತ್ವಗಳನ್ನು ಗಮನಿಸಿದರೆ, ಈ ಪದ್ಧತಿಗಳು ಮಾನವನ ಅತಿ ನಿಮ್ನ ಸ್ತರವಾದ ದೇಹದಿಂದ ಆರಂಭಿಸಿ ಅತೀತ ಸ್ತರಗಳವರೆಗೆ ಏರುತ್ತವೆಂದು ಕಂಡು ಬರುವದು. **ಹಠ ಯೋಗವು** ದೇಹ–ಪ್ರಾಣಗಳಿಗೆ ಅಂಟಿಕೊಂಡಿರುವದು. ಅದು ಈ ಉಪಕರಣಗಳ ಪರಿಪೂರ್ಣತೆಯನ್ನು ತನ್ನ ಉದ್ದೇಶಕ್ಕಾಗಿ ಇಟ್ಟುಕೊಂಡಿರುತ್ತದೆ. **ರಾಜ ಯೋಗವು** ಮನಸ್ಸಿನ ಬೇರೆ ಬೇರೆ ಸ್ತರಗಳ ಶಕ್ತಿಗಳನ್ನು ಆರಿಸಿಕೊಂಡಿರುವದು. **ಜ್ಞಾನ, ಭಕ್ತಿ ಮತ್ತು ಕರ್ಮಗಳ** ತ್ರಿವಿಧ ಮಾರ್ಗವು ಮನೋಮಯನ ಹೃದಯ, ಸಂಕಲ್ಪ, ಬುದ್ಧಿ ಇವುಗಳಲ್ಲಿ ಯಾವುದಾದರೊಂದನ್ನು ಪ್ರಾರಂಭದಲ್ಲಿ ಸ್ವೀಕರಿಸಿ, ಅದರ ರೂಪಾಂತರದ ಮೂಲಕ ಆಧ್ಯಾತ್ಮಿಕ ಜೀವನದ ಅಂಶಗಳಾದ ಪರಮ ಸತ್ಯ, ಸೌಂದರ್ಯ, ಅನಂತತೆಗಳತ್ತ ಸಾಗಲು ಯತ್ನಿಸುವದು. ವೈಯಕ್ತಿಕ ದೇಹದಲ್ಲಿದ್ದ ಮಾನವೀಯ ಪುರುಷ ಹಾಗು ಪ್ರತಿಯೊಂದು ದೇಹದಲ್ಲಿ ಅಂತರ್ಯಾಮಿ–ಯಾಗಿದ್ದು ನಾಮರೂಪಗಳಾಚೆ ಇರುವ ಪರಮಾತ್ಮ ಇವರಿಬ್ಬರಲ್ಲಿ **ನೇರ ಸಂಬಂಧವನ್ನು ಕಲ್ಪಿಸುವದೇ ಈ ಮಾರ್ಗದ ಉದ್ದೇಶ**ವಾಗಿದೆ.

ಪ್ರಕೃತಿಯು ಮಾನವನಲ್ಲಿ ಮಾಡುವ ಕಾರ್ಯದ ಆಧಾರವಾದ ಅನ್ನಮಯ, ಪ್ರಾಣಮಯಗಳಿಂದಾದ ಸ್ಥೂಲ ದೇಹದ ಮೇಲೆ ಪ್ರಭುತ್ವವನ್ನು ತಂದುಕೊಳ್ಳುವದು **ಹಠಯೋಗದ ಉದ್ದೇಶ**ವಾಗಿದೆ. ಸ್ಥೂಲ ದೇಹದಲ್ಲಿ ಪ್ರಕೃತಿಯು ಸ್ಥಾಪಿಸಿದ ಸಾಮರಸ್ಯವು ಮಾನವನ ಸಾಮಾನ್ಯ ಅಹಂಜೀವನಕ್ಕೆ ಸಾಕಾಗುವದು. ಆದರೆ ಹಠ ಯೋಗಕ್ಕೆ ಇದು ಸಾಲದು. ಆದ್ದರಿಂದ ಹಠ ಯೋಗವು ಮಾನವನ ಸಾಮಾನ್ಯ ಜೀವನವನ್ನು ದಾಟಿ ಹೆಚ್ಚಿನ ಸಿದ್ಧಿಯನ್ನು ಪಡೆಯಲು ಅಪೇಕ್ಷಿಸುವದು. ಆದುದರಿಂದ ಹಠ ಯೋಗವು ಪ್ರಕೃತಿಯ ಲೋಪದೋಷಗಳನ್ನು ಹೋಗಲಾಡಿಸಿ ಇನ್ನೂ ಹಿರಿದಾದ ಸಾಮರಸ್ಯವನ್ನು ತಂದುಕೊಳ್ಳಲು ಅಪೇಕ್ಷಿಸುತ್ತದೆ. ದೇಹವು ತನ್ನಲ್ಲಿ ವಿಶ್ವ ಶಕ್ತಿಗಳನ್ನು ಧಾರಣ ಮಾಡಿಕೊಳ್ಳುವ ಶಕ್ತಿಯನ್ನು ತಂದುಕೊಳ್ಳಬೇಕು. ಪ್ರಕೃತಿಯ ಸದ್ಯದ ಸ್ತರದಲ್ಲಿದ್ದ ಮಾನವನ ದೇಹವು ಅಹಂಭಾವದಿಂದೊಡ–ಗೂಡಿದ್ದಾಗಿ ಸೀಮಿತ ಶಕ್ತಿಯನ್ನಷ್ಟೇ ಧಾರಣ ಮಾಡುವ ಯೋಗ್ಯತೆಯನ್ನು ಪಡೆದಿದೆ. ಹಠ ಯೋಗದ ಸಾಧನೆಯಿಂದ ವೈಯಕ್ತಿಕ ದೇಹ, ಪ್ರಾಣಗಳು ವಿಶ್ವಾತ್ಮಕವಾದವುಗಳಾಗಿ ವಿಶ್ವ ಶಕ್ತಿಗಳನ್ನು ಹೆಚ್ಚು ಪ್ರಮಾಣದಲ್ಲಿ ಧಾರಣ ಮಾಡುವ ಯೋಗ್ಯತೆಯನ್ನು ಪಡೆಯುವವು.

ಆಸನ, ಪ್ರಾಣಾಯಾಮಗಳು ಹಠ ಯೋಗದ ಮುಖ್ಯ ಉಪಕರಣಗಳಾಗಿವೆ. ಮನುಷ್ಯನ ದೇಹವು ತಾನು ಸ್ವೀಕರಿಸುತ್ತಿರುವ ಶಕ್ತಿಯನ್ನು ಹೊರಗೆಡಹುತ್ತಲೇ ಇರುತ್ತದೆ. ವಿಶಿಷ್ಟ ಪ್ರಮಾಣಕ್ಕಿಂತ ಹೆಚ್ಚಿನ ಶಕ್ತಿಯನ್ನು ಈ ದೇಹವು ಧಾರಣ ಮಾಡಲಾರದು. ಒಳಗೆ ಶಕ್ತಿಯು ಹೆಚ್ಚಾದಲ್ಲಿ ಅದರ ಸಮತೋಲನವೂ ತಪ್ಪುತ್ತದೆ. ಅದರಲ್ಲಿ ಉದ್ವಿಗ್ನತೆಯು ಬರುವದು. ಆಸನಗಳ ಅಭ್ಯಾಸವು ಈ ಉದ್ವಿಗ್ನತೆಯನ್ನು ಹೋಗಲಾಡಿಸುತ್ತದೆ. ಆಸನಗಳ ಅಭ್ಯಾಸದಿಂದಾಗಿ ದೇಹದಲ್ಲಿ ಆರೋಗ್ಯ, ಶಕ್ತಿ, ಚುರುಕುತನವು ಹೆಚ್ಚುತ್ತದೆ. ದೇಹದ ರೂಢಿಗತ ಲೋಪದೋಷಗಳು ದೂರವಾಗುವವು. ಹಠ ಯೋಗವು ಗುರುತ್ವಾಕರ್ಷಣ ಶಕ್ತಿಯನ್ನೂ ಸಹಿತ ಮೀರಬಲ್ಲುದು. ಪ್ರಾಣಾಯಾಮದಿಂದ ದೇಹದಲ್ಲಿಯ ಅಶುದ್ಧಿಯು ದೂರವಾಗುತ್ತದೆ. ನರ ಮಂಡಲದಲ್ಲಿ ಅಡ್ಡಿ, ಆತಂಕಗಳು ಮಾಯವಾಗುತ್ತವೆ. ಉಸಿರಾಟವು ಪ್ರಾಣಶಕ್ತಿಗಳ ಮುಖ್ಯ ಕಾರ್ಯವಾಗಿರುತ್ತದೆ. ಇದು ಭೌತಿಕ ಕಾರ್ಯ, ಈಗ ದೇಹವು ಪರಿಪೂರ್ಣವಾಗುವದು. ಪ್ರಾಣವು ಭೌತ ಪ್ರಕೃತಿಯ ಅಗತ್ಯತೆಗಳಿಂದ ಸ್ವತಂತ್ರವಾಗುವದು. ಆಯುರಾರೋಗ್ಯಗಳು ಹೆಚ್ಚುತ್ತವೆ. ಪ್ರಾಣಾಯಾಮದಿಂದ ಕುಂಡಲಿನಿಯು ಜಾಗೃತವಾಗಿ ಪ್ರಜ್ಞೆಯ ಕ್ಷೇತ್ರವು ವಿಸ್ತೃತಗೊಳ್ಳುತ್ತದೆ. ಇದರಿಂದ ಅಸಾಧಾರಣ ಶಕ್ತಿಯ ಅನುಭವಗಳು ಬರುವವು.

ಹಠ ಯೋಗದ ಮಹಾಸಿದ್ಧಿಗಳು ಭೌತಮನವನ್ನು ಸೂರೆಗೊಳ್ಳುವವು. ಆದರೆ ಅತಿ ಕಠಿಣ ಪರಿಶ್ರಮದ ಉಪಯೋಗ ಏನಾಗುತ್ತದೆ? ಭೌತ ಜೀವನದ ಭೋಗಭಾಗ್ಯಗಳು ಒದಗಿ ಬರಬಹುದೇನೋ ನಿಜ, ಆದರೆ ಈ ಸಿದ್ಧಿಗಳಿಗೆ ಬೇಕಾಗುವ ವೇಳೆ, ಶ್ರಮಗಳಿಗೆ ಮಿತಿ ಎನ್ನುವದೇ ಇಲ್ಲ. ರಾಜಯೋಗ ಇಲ್ಲವೆ ತಂತ್ರದ ಸಾಧನೆಯಿಂದ ಈ ಸಿದ್ಧಿಗಳನ್ನು ಇನ್ನೂ ಸುಲಭವಾಗಿಯೇ ಗಳಿಸಿಕೊಳ್ಳಬಹುದು. ಆದರೆ ಈ ಸಿದ್ಧಿಗಳಿಂದ ಸಮಾಜಕ್ಕೆ ಯಾವ ಹೆಚ್ಚಿನ ಪ್ರಯೋಜನಗಳೂ ಇರುವದಿಲ್ಲ.

**ರಾಜ ಯೋಗವು** ಇನ್ನೂ ಎತ್ತರದ ಸ್ತರವನ್ನು ತಲುಪಬಲ್ಲುದು. ಅದು ಮಾನವನ ಭಾವನಾತ್ಮಕ, ಸಂವೇದನಾತ್ಮಕ ಮನೋಮಯದ ವಿಮೋಚನೆಗಾಗಿ ಹೆಣಗುತ್ತದೆ. ಅದು ಮಾನಸಿಕ ಪ್ರಜ್ಞೆಯ ಮೇಲೆ ಪ್ರಭುತ್ವವನ್ನು ತಂದುಕೊಳ್ಳಲು ಯತ್ನಿಸುತ್ತದೆ. ಚಿತ್ತವೃತ್ತಿ ನಿರೋಧವೇ ಇದರ ಪ್ರಮುಖ ಕಾರ್ಯವಾಗಿದೆ. ಮಾನವನ ಸಾಮಾನ್ಯ ಮನಸ್ಸು ಗೊಂದಲಕ್ಕೆ ಈಡಾಗಿರುವದು. ಅಲ್ಲಿ ಸಂವೇದನೆ, ಭಾವನೆ, ಭೋಗಗಳ ಕ್ಷೋಭೆ ಇರುವದು. ಈ ಸ್ವೇಚ್ಛಾಚಾರದ ರಾಜ್ಯದಲ್ಲಿ ಶಾಂತಿಯನ್ನು ಸ್ಥಾಪಿಸುವದು ಈ **ರಾಜ ಯೋಗದ** ಗುರಿಯಾಗಿರುತ್ತದೆ. ವೈಯಕ್ತಿಕ ಪುರುಷನು ಈ ಕ್ಷೇತ್ರದಲ್ಲಿ ಸ್ವರಾಜ್ಯವನ್ನು ಸ್ಥಾಪಿಸಬೇಕು. ಮನಸ್ಸಿನಲ್ಲಿ ಒಳ್ಳೆಯ ರೂಢಿಗಳು ಮೂಡಿ ಬರಬೇಕು. ನಿಮ್ನ ಪ್ರಾಣಿಯ ತಾಂಡವವು ನಿಲ್ಲಬೇಕು. ಸತ್ಯ, ಅಹಂಕಾರರಾಹಿತ್ಯ, ಅಹಿಂಸೆ, ಪಾವಿತ್ರ್ಯ, ಧ್ಯಾನ, ದಿವ್ಯ ಪುರುಷನ ಕಡೆಗೆ ಒಲವು, ಅಂತಾರಾರಾಮ, ಶಾಂತಿ ಇವು ಸದಾ ಆಂತರ್ಯದಲ್ಲಿ ನೆಲೆಸಬೇಕು.

ಇದು ಕೇವಲ ಮೊದಲ ಹೆಜ್ಜೆಯಾಗಿದೆ. ಆಮೇಲೆ ಮನದ ಸಾಮಾನ್ಯ ಚಲನೆಗಳನ್ನು ಶಾಂತಗೊಳಿಸಬೇಕು. ಇದರಿಂದಾಗಿ ಆತ್ಮನು ಉನ್ನತ ಸ್ತರಗಳಿಗೇರಲು ಅಣಿಯಾಗುವನು. ದೇಹ ಪ್ರಾಣಗಳಿಗೆ ಅಧೀನವಾದ ಮನಸ್ಸು ಲೋಪದೋಷ–ಗಳಿಂದ ಕೂಡಿರುವದೆನ್ನುವದು ರಾಜ ಯೋಗಕ್ಕೆ ಗೊತ್ತಿದೆ. ಆದುದರಿಂದ ರಾಜ ಯೋಗವೂ ತುಸು ಮಟ್ಟಿಗೆ ಆಸನ ಪ್ರಾಣಾಯಾಮಗಳ ಸಹಾಯವನ್ನು ತೆಗೆದುಕೊಳ್ಳುವದು. ರಾಜ ಯೋಗವು ಹಠ ಯೋಗದ ಕ್ಲಿಷ್ಟತೆಯನ್ನು ಅನುಸರಿಸದೇ ಅದರ ಮಹತ್ವದ ಸಿದ್ಧಿಗಳನ್ನು ತಂದುಕೊಳ್ಳುವದು. ಇದು ಕೂಡ ಕುಂಡಲಿನಿಯನ್ನು ಜಾಗೃತಿಗೊಳಿಸುವದು. ಇದಾದ ಮೇಲೆ ರಾಜ ಯೋಗವು ಮನಸ್ಸನ್ನು ಸಂಪೂರ್ಣವಾಗಿ ಪ್ರಶಾಂತಗೊಳಿಸಲು ಯತ್ನಿಸುವದು. ಸಮಾಧಿಯ ಎಲ್ಲ ಮೆಟ್ಟಿಲುಗಳ ಮೂಲಕ ಅದು ಮನಸ್ಸನ್ನು ಉಚ್ಚ ಸ್ತರಗಳಿಗೆ ಕರೆದೊಯ್ಯುವದು.

ಮನಸ್ಸನ್ನು ಸಾಮಾನ್ಯ ವ್ಯಾಪಾರಗಳಿಂದ ದೂರವಾಗಿರಿಸಿ ಸ್ವತಂತ್ರ, ಉಚ್ಚ ಪ್ರಜ್ಞೆಯ ಸ್ತರಗಳಿಗೆ ಒಯ್ಯುವ ಸಮಾಧಿಯು ಎರಡು ಉದ್ದೇಶಗಳನ್ನು ಸಾಧಿಸುವದು. ಉಚ್ಚ ಸ್ತರಗಳಲ್ಲಿ ಮನಸ್ಸು ನಿಮ್ನ ಲೋಪದೋಷಗಳಿಂದ ದೂರವಾಗಿ ಸ್ವತಂತ್ರ ಕಾರ್ಯಾಚರಣೆಯನ್ನು ಸಾಗಿಸಲು ಸಮರ್ಥವಾಗಿರುವದು. ಮನಸ್ಸು ಮತ್ತೂ ಮೇಲಿನ ಸ್ತರಗಳಿಗೆ ಏರಿದಾಗ ವೈಯಕ್ತಿಕ ಆತ್ಮವು ತನ್ನ ನಿಜ ಸತ್ವವನ್ನು ಸೇರುತ್ತದೆ. ಈಗ ಮನಸ್ಸು ಶಕ್ತಿಯುತ ಪ್ರಜ್ಞೆಯನ್ನು ಹೊಂದುತ್ತದೆ. ಅದು ವಿಶ್ವಾತ್ಮಕ ದಿವ್ಯ ಶಕ್ತಿಗಳನ್ನು ತನ್ನಲ್ಲಿ ಒಳಗೊಳ್ಳುವದು. ಸಮಾಧಿ ಸ್ಥಿತಿಯಲ್ಲಿ ಗಳಿಸಿಕೊಂಡ ವಿಶ್ವಾತೀತ ಅನುಭವ, ಜ್ಞಾನಗಳಿಂದಾಗಿ ಯೋಗಿಯ ಜಾಗೃದಾವಸ್ಥೆಯಲ್ಲಿಯೂ ಸಹಿತ ಜಗದಲ್ಲಿ ಸರ್ವ ಸಮರ್ಥ ಜೀವನವನ್ನು ನಡೆಸಲು ಯೋಗ್ಯನಾಗುವನು. ರಾಜ ಯೋಗಿಯು ಸ್ವಪ್ರಭುವೂ ಆಗಿರುವದಷ್ಟೇ ಅಲ್ಲದೆ ಜಗದ ಸಾಮ್ರಾಟನೂ ಆಗುವನು.

ಹಠ ಯೋಗವು ತನ್ನ ಪ್ರಯತ್ನದ ತೀವ್ರತೆಯಿಂದ ದೇಹ, ಪ್ರಾಣ ಸ್ತರಗಳನ್ನು ದಾಟಿ ಮನಸ್ತರವನ್ನು ಮುಟ್ಟುವಂತೆ ರಾಜ ಯೋಗಿಯು ಮನಸ್ತರವನ್ನು ದಾಟಿ ಆಧ್ಯಾತ್ಮ ಸ್ತರವನ್ನು ತಲುಪುತ್ತಾನೆ. ಆದರೆ ಸಮಾಧಿಯ ಅಸಹಜ ಸ್ಥಿತಿಯನ್ನು ಅತಿಯಾಗಿ ಅವಲಂಬಿಸುವದು ರಾಜ ಯೋಗದ ದೋಷವಾಗಿದೆ. ಇದರಿಂದಾಗಿ ರಾಜ ಯೋಗಿಯು ಸಾಮಾನ್ಯ ಜೀವನದಿಂದ ದೂರ ಸರಿಯುವನು. ಆಧ್ಯಾತ್ಮಿಕ ಜೀವನವು ಕೇವಲ ಸಮಾಧಿ ಸ್ಥಿತಿಯನ್ನೇ ಅವಲಂಬಿಸುವದು. ಜಾಗೃದಾವಸ್ಥೆಯಲ್ಲಿ ಇದ್ದ ಯೋಗಿಯು ತಾನು ಗಳಿಸಿದ್ದನ್ನು ಸಮಾಜಕ್ಕೆ ನೀಡಲು ಅಸಮರ್ಥನಾಗುವನು.

**ಭಕ್ತಿ, ಜ್ಞಾನ, ಕರ್ಮ(ಯೋಗಗಳು)**ಗಳ ತ್ರಿವಿಧ ಮಾರ್ಗವು ರಾಜ ಯೋಗಕ್ಕಿಂತ ವಿಶಾಲವಾದ ಕ್ಷೇತ್ರವನ್ನಾರಿಸುವದು. ರಾಜ ಯೋಗದಂತೆ ಅದು ಬುದ್ಧಿ, ಹೃದಯ, ಸಂಕಲ್ಪ ಮೊದಲಾದ ಕೇಂದ್ರೀಯ ಸತ್ವಗಳನ್ನು ಆರಿಸಿಕೊಂಡು ಅವುಗಳನ್ನು ದೇವನತ್ತ ಹೊರಳಿಸಿ, ಅವುಗಳ ಸಾಮಾನ್ಯ ವ್ಯಾಪಾರಗಳ ಒಲವನ್ನೇ ಬದಲಿಸುವದು. ಆದರೆ ಇದು ದೈಹಿ, ಮಾನಸಿಕ ಪರಿಪೂರ್ಣತೆಯತ್ತ ಉದಾಸೀನ ಭಾವವನ್ನು ತಾಳಿರುವದು. **ಪೂರ್ಣ ಯೋಗದ** ದೃಷ್ಟಿಯಲ್ಲಿ ಇದು ಒಂದು ದೋಷವಾಗಿದೆ. ರೂಢಿಯಲ್ಲಿ ಈ ಮೂರರಲ್ಲಿ ಯಾವುದಾದರೊಂದರ ಅತಿರೇಕವಾಗುವದೂ ಉಂಟು. ಇದೂ ಒಂದು ದೋಷವೇ ಆಗಿದೆ.

**ಜ್ಞಾನ ಯೋಗ**ವು ಏಕೈಕ ಪರಾತ್ಪರ ಪರಮಾತ್ಮನನ್ನು ಸಾಕ್ಷಾತ್ಕರಿಸಿಕೊಳ್ಳಲು ಅಪೇಕ್ಷೆಯನ್ನು ಹೊಂದಿರುತ್ತದೆ. ಅದು ವಿಚಾರ ವಿವೇಕಗಳನ್ನು ಅವಲಂಬಿಸಿ ಮುಂದುವರೆಯುತ್ತದೆ. ಆತ್ಮನು ದೇಹ, ಪ್ರಾಣ, ಮನಗಳಿಂದ ತಾನು ಭಿನ್ನನೆಂದು ಜ್ಞಾನವನ್ನು ಪರಿಪೂರ್ಣಗೊಳಿಸಲೆತ್ನಿಸುವನು. ಪ್ರಕೃತಿಯಿಂದ ಹಿಂದೆ ಸರಿದು ಪರಮಾತ್ಮನೊಡನೆ ಒಂದಾಗಲು ಆತ್ಮನು ಪ್ರಯತ್ನಿಸುವನು. ಬಾಹ್ಯ ಜಗತ್ತು ಮಾಯೆಯೆಂಬ ಭ್ರಮೆಯು ಇದರಿಂದ ಬರುತ್ತದೆ. ಮಾಯೆಯಿಂದ ಪಾರಾಗಿ ಪರಬ್ರಹ್ಮನಲ್ಲಿ ಲೀನವಾಗುವದೇ ಇದರ **ಜ್ಞಾನ ಯೋಗ**ದ ಪರಮ ಉದ್ದೇಶವಾಗಿರುತ್ತದೆ.

ಆದರೆ ಈ ಒಮ್ಮುಖ ಮುನ್ನಡೆಯು ರಾಜ ಯೋಗಕ್ಕೆ ಅನಿವಾರ್ಯವಾದುದಲ್ಲ. ವ್ಯಕ್ತಿಗತ ಭಾವನೆಯನ್ನು ಕಡಿಮೆ ಮಾಡಿ ವಿಶಾಲ ಮನೋಭಾವದಿಂದ ಮುಂದುವರೆದರೆ ಅತೀತವನ್ನು ಅಪ್ಪುವದಷ್ಟೇ ಅಲ್ಲದೇ ವಿಶ್ವ ವಿಜಯವನ್ನೂ ಸಾಧಿಸಬಹುದಾಗಿದೆ. ಕೇವಲ ತನ್ನಲ್ಲಷ್ಟೇ ಅಲ್ಲದೇ ಎಲ್ಲ ಜೀವಿಗಳಲ್ಲಿ, ಎಲ್ಲ ಪದಾರ್ಥಗಳಲ್ಲಿ, ಎಲ್ಲ ಘಟನೆಗಳಲ್ಲಿ ಪರಮಾತ್ಮನನನು ಸಾಕ್ಷಾತ್ಕರಿಸಿಕೊಳ್ಳಬಹುದು. ಜ್ಞಾನದ ಎಲ್ಲ ಬಗೆಯ ಕಾರ್ಯಾಚರಣೆಗಳನ್ನು ದಿವ್ಯ ಚೈತನ್ಯದ ವ್ಯಾಪಾರಗಳೆಂದೇ ತಿಳಿಯಬಹುದು. ಏಕೈಕ ಪರಬ್ರಹ್ಮನನ್ನು ಜಗದ ಎಲ್ಲ ರೂಪ, ನಾಮ, ಸಂಕೇತಗಳಲ್ಲಿ ಕಾಣಬಹುದು. **ಜ್ಞಾನ ಯೋಗದ** ಮಾರ್ಗವು ಪರಮ ವೈಶಾಲ್ಯವನ್ನು ಹೊಂದಿ **ಭಕ್ತಿ ಯೋಗ, ಕರ್ಮ ಯೋಗ**ಗಳಲ್ಲಿ ಐಕ್ಯವಾಗುವದು.

**ಭಕ್ತಿ ಯೋಗವು** ಪರಮ ಪ್ರೇಮ ಆನಂದಗಳನ್ನು ಅನುಭವಿಸಲೆತ್ನಿಸುತ್ತದೆ. ಭಕ್ತನಿಗೆ ದೇವನು ಪರಮ ದಿವ್ಯ ವ್ಯಕ್ತಿ, ದಿವ್ಯ ಪ್ರಿಯಕರ ಹಾಗೂ ವಿಶ್ವ ಭೋಕ್ತೃವಾಗಿದ್ದಾನೆ. ವಿಶ್ವವು ಆತನ ಲೀಲೆಯಾಗಿದೆ. ಮಾನವನ ಪ್ರಕಟನೆ ಈ ನಾಟಕದ ಕೊನೆಯ ಅಂಕವಾಗಿದೆ. ಈ ಲೀಲೆ ಒಂದು ಕಣ್ಣುಮುಚ್ಚಾಲೆ ಆಟವಿದ್ದಂತೆ. ದೇವನು ತನ್ನನ್ನು ತಾನೇ ಬಚ್ಚಿಟ್ಟುಕೊಂಡು ತಾನೇ ತನ್ನನ್ನು ಹುಡುಕುವ ಆಟದಲ್ಲಿ ತೊಡಗಿರುವನು. ಎಲ್ಲ ಮಾನವೀಯ ಸಂಬಂಧಗಳನ್ನು ಉಪಯೋಗಿಸಿಕೊಳ್ಳುವದು ಭಕ್ತಿ ಯೋಗದ ಸಿದ್ಧಾಂತವಾಗಿದೆ. ಮಾನವೀಯ ಭಾವನೆಗಳನ್ನು ಅಶಾಶ್ವತ ವಸ್ತುಗಳತ್ತ ಹರಿಬಿಡದೆ ದೇವನತ್ತ ಹೊರಳಿಸಬೇಕು. ದೇವನು ಪ್ರೇಮಮಯ, ಆನಂದಮಯ, ಸೌಂದರ್ಯಮಯ, ಪೂಜೆ, ಧ್ಯಾನಗಳು ಭಕ್ತಿ ಯೋಗದ ಮೊದಲ ಮೆಟ್ಟಿಲುಗಳು. ಇದರಿಂದಾಗಿ ದಿವ್ಯ ಸಂಬಂಧಗಳಲ್ಲಿ ತೀವ್ರತೆಯು ಬರುತ್ತದೆ. ಈ ಯೋಗದಲ್ಲಿ ವಿರೋಧ, ದ್ವೇಷಗಳೂ ಸಹಿತ

ಉಪಯುಕ್ತವಾದವುಗಳಾಗಿವೆ. ಈ ಮಾರ್ಗವು ಕೂಡ ಜೀವನದಿಂದ ದೂರವೇ ಸಾಗುತ್ತಿದೆ. ದೇವನಲ್ಲಿ ಒಂದು ರೀತಿಯಲ್ಲಿ ಲೀನವಾಗುವದೇ ಈ ಯೋಗದ ಗುರಿಯಾಗಿರುತ್ತದೆ.

ಆದರೆ ಇಲ್ಲಿಯೂ ಕೂಡ ಒಮ್ಮುಖವಾದ ಅತಿರೇಕವು ಅನಿವಾರ್ಯ–ವಾದುದೇನಲ್ಲ. ದಿವ್ಯ ಸಂಬಂಧವು ಕೇವಲ ಭಕ್ತ ಭಗವಂತರ ನಡುವೆ ಅಷ್ಟೇ ಉಳಿಯದೆ ಭಕ್ತ ಸಮೂಹಕ್ಕೂ ಹರಡುವದು. ಭಕ್ತ ಭಕ್ತರಲ್ಲಿ ದಿವ್ಯ ಸಂಬಂಧ–ವುಂಟಾಗುತ್ತದೆ. ಭಗವಂತನನ್ನು ಎಲ್ಲರಲ್ಲಿ, ಎಲ್ಲದರಲ್ಲಿ ಕಾಣುವಂತಾಗುವದು. ವಿಶ್ವ ವ್ಯಾಪಾರಗಳೆಲ್ಲವೂ ಭಗವಂತನೊಡನಾಡಿದ ರಾಸಲೀಲೆಯೇ ಆಗುವದು.

**ಕರ್ಮ ಯೋಗವು** ಎಲ್ಲ ಕರ್ಮಗಳನ್ನು ಪರಮ ಸಂಕಲ್ಪಕ್ಕೆ ನಿವೇದಿಸಲು ಹಂಬಲಿಸುತ್ತದೆ. ಕರ್ಮದಲ್ಲಿ ಅಹಂಭಾವವು ಅಡಗುವದು. ಕರ್ಮ ಫಲದಾಶೆಯು ಅಳಿಯುವದು. ಈ ತ್ಯಾಗದಿಂದ ಮನಸ್ಸು, ಸಂಕಲ್ಪ ಇವು ಪವಿತ್ರವಾಗಿ ಸರ್ವಕರ್ತೃ ವಿಶ್ವ ಶಕ್ತಿಯ ಅನುಭವವಾಗತೊಡಗುವದು. ಸರ್ವಶಕ್ತಿ ಪರಾಶಕ್ತಿಯೇ ವಿಶ್ವದಲ್ಲಿ ಕಾರ್ಯ ಮಾಡುವ ಒಂದೇ ಒಂದು ಶಕ್ತಿ ಎನ್ನುವದು ಅರಿವಾಗುವದು. ವ್ಯಕ್ತಿಯು ಕೇವಲ ದಿವ್ಯ ಶಕ್ತಿಯ ಉಪಕರಣ ಇಲ್ಲವೆ ದಿವ್ಯ ಕೇಂದ್ರವಾಗುವನು. ಅಹಂಭಾವವು ಅಳಿದು ಕೇವಲ ಪರಮ ಸಂಕಲ್ಪದ ದಿವ್ಯ ಉದ್ದೇಶವೇ ಕಾರ್ಯಗೈಯುವಂತೆ ಆಗುತ್ತದೆ. ಕರ್ಮ ಹಾಗೂ ಕರ್ಮ ಫಲಗಳು ಪರಮ ಸಂಕಲ್ಪಕ್ಕೆ ಸಮರ್ಪಿತ–ವಾದವುಗಳಾಗಿವೆ. ಕರ್ಮ ಯೋಗವೂ ಕೂಡ ಸಾಮಾಜಿಕ ಆಸಕ್ತಿಯಿಂದ ವಿಮುಖವಾಗಿರುವದುಂಟು. ಆದರೆ ಇಲ್ಲಿಯೂ ಕೂಡ ಇಂಥ ಒಮ್ಮುಖ ಅತಿರೇಕವು ಅನಿವಾರ್ಯವಾದುದೇನೂ ಅಲ್ಲ. ಕರ್ಮ ಯೋಗಿಯೂ ಕೂಡ ಎಲ್ಲೆಂದರಲ್ಲಿ ಪರಮಾತ್ಮನನ್ನು ಕಾಣಬಹುದು. ವಿಶ್ವಲೀಲೆಯಲ್ಲಿ ಆತನು ಅಹಂಭಾವರಹಿತನಾಗಿ ಪಾಲ್ಗೊಳ್ಳಬಲ್ಲನು.

**ಸಮಗ್ರ ದೃಷ್ಟಿಗೆ** ಈ ಮೂರು ಮಾರ್ಗಗಳು ಒಂದೇ ಎಂದು ಗೊತ್ತಾಗುವದು. ದಿವ್ಯ ಪ್ರೇಮವು ಪ್ರಿಯಕರನ ದಿವ್ಯ ಜ್ಞಾನವನ್ನು ತರಲೇಬೇಕು. ಈಗ **ಭಕ್ತಿ ಯೋಗವು ಜ್ಞಾನ ಯೋಗವಾಗುವದು.** ಭಕ್ತನು ದಿವ್ಯ ಕರ್ಮಗಳನ್ನು ಆಚರಿಸಿ **ಕರ್ಮ ಯೋಗಿ** ಆಗುವನು. **ಜ್ಞಾನ ಯೋಗಿಯು** ಪರಮಾತ್ಮನನ್ನು ಪ್ರೀತಿಸಿ **ಭಕ್ತಿ ಯೋಗಿ** ಆಗುವನು. ಆದರೆ ಆತನು ಕರ್ಮ ಯೋಗಿಯಾಗದೇ ಇರಲು ಸಾಧ್ಯವಿಲ್ಲ. ಕರ್ಮ ಯೋಗಿಯು ತನ್ನ ಎಲ್ಲ ಕರ್ಮಗಳನ್ನು ಭಗವಂತನಿಗೆ ಅರ್ಪಿಸುತ್ತ ಭಕ್ತಿ ಯೋಗಿಯಾಗುವನು.

ಭಗವಂತನ ಪರಮ ಜ್ಞಾನವನ್ನು ಹೊಂದಿ **ಜ್ಞಾನ ಯೋಗಿ** ಆಗುವನು, ಮತ್ತೆ ಪ್ರೀತಿಯಿಂದ ಎಲ್ಲವನ್ನೂ ಅವನಿಗೇ ಅರ್ಪಿಸಿ **ಭಕ್ತಿ ಯೋಗಿಯೂ** ಆಗುವನು. ಈ **ತ್ರಿವಿಧ ಮಾರ್ಗವನ್ನು** ಅನುಸರಿಸಿ ನಾವು ಏಕ ಹಾಗೂ ಬಹುವಾದ ಪರಮಾತ್ಮನ ಪರಮ **ಜ್ಞಾನ, ಭಕ್ತಿಗಳನ್ನು** ಗಳಿಸಿಕೊಂಡು ಆತನ ದಿವ್ಯ ಸೇವಕರಾಗುವೆವು.

**ಶ್ರೀ ಅರವಿಂದರ 'ಯೋಗ ಸಮನ್ವಯ'; ಪುಟ 30–36**

## ಪೂರ್ಣ ಯೋಗದ ಸಿದ್ಧಾಂತ

**– ಅನುವಾದ: ಶ್ರೀ ಎಂ.ಎಸ್. ನಾಗರಹಳ್ಳಿ**

ನಮ್ಮ ಮಾನವೀಯ ಅಸ್ತಿತ್ವದಲ್ಲಿರುವ ಯಾವುದೊಂದು ಶಕ್ತಿಯನ್ನು ಇಲ್ಲವೆ ಎಲ್ಲ ಶಕ್ತಿಗಳನ್ನು ದೇವನನ್ನು ತಲುಪುವದಕ್ಕಾಗಿ ಉಪಯೋಗಿಸಿಕೊಳ್ಳುವದೇ ಯೋಗದ ವಿಧಾನವಾಗಿದೆ. ಸಾಮಾನ್ಯವಾಗಿ ಒಂದು ಮಹತ್ವದ ಶಕ್ತಿಯನ್ನು ಇಲ್ಲವೆ ಶಕ್ತಿಗಳ ಗುಂಪನ್ನು ಹೀಗೆ ಉಪಯೋಗಿಸಿಕೊಳ್ಳಲಾಗುವದು. ಆದರೆ **ಪೂರ್ಣ ಯೋಗದಲ್ಲಿ ಎಲ್ಲ ಶಕ್ತಿಗಳನ್ನೂ ಈ ಮಹಾಪರಿವರ್ತನೆಯ ಕಾರ್ಯದಲ್ಲಿ ಬಳಸಿಕೊಳ್ಳಲಾಗುವದು**. ಹಠ ಯೋಗದ ಉಪಕರಣಗಳು ದೇಹ ಮತ್ತು ಪ್ರಾಣಗಳಾಗಿವೆ; ದೇಹದ ಎಲ್ಲ ಶಕ್ತಿಯನ್ನು ಆಸನ, ಪ್ರಾಣಾಯಾಮದ ಮೂಲಕ ಪ್ರಶಾಂತಗೊಳಿಸಿ, ಏಕಾಗ್ರಗೊಳಿಸಿ, ಪರಿಶುದ್ಧಗೊಳಿಸಿ, ಉನ್ನತಗೊಳಿಸಿ ಅದನ್ನು ಅದರ ಸೀಮೆಯವರೆಗೆ ಕೊಂಡೊಯ್ದು ಇಲ್ಲವೇ ಸೀಮೆಯಾಚೆಯೂ ಸಾಗುವಂತೆ ಮಾಡಲಾಗುತ್ತದೆ. ಅದರಮತೆಯೇ ಪ್ರಾಣದ ಶಕ್ತಿಯನ್ನಾದರೂ ಪರಿಶುದ್ಧ–ಗೊಳಿಸಲಾಗುವದು. ಉನ್ನತಗೊಳಿಸಲಾಗುವದು. ಏಕಾಗ್ರಗೊಳಿಸಲಾಗುವದು. ಶಕ್ತಿಗಳ ಕೇಂದ್ರೀಕರಣ ವನ್ನು ದಿವ್ಯಪ್ರಜ್ಞೆಯು ಮಾನವ ದೇಹದಲ್ಲಿ ತನ್ನನ್ನು ಗುಪ್ತವಾಗಿ ಬಚ್ಚಿಟ್ಟುಕೊಂಡಿರುವ ಕೇಂದ್ರದತ್ತ ಹರಿಸುವದು. ಮಾಣವನ ಸಾಮಾನ್ಯ ಜೀವನಕ್ಕೆ ಸಾಕಾಗುವಷ್ಟೇ ಶಕ್ತಿಯು ಅವನಲ್ಲಿ ಪ್ರಕಟವಾಗುತ್ತದೆ. ಪ್ರಾಣಿಕ ಶಕ್ತಿಯು, ಪ್ರಕೃತಿಯ ಶಕ್ತಿಯು ಮಾನವ ದೇಹದಲ್ಲಿಯ ತೀರದಲ್ಲಿ ತೀರ ಕೆಳಚಕ್ರದ ಸುಪ್ತಾವಸ್ಥೆಯಲ್ಲಿ ಇರುವದು. ಅದು ಈಗ ಹಠಯೋಗದ ಅಭ್ಯಾಸದಿಂದ ಜಾಗೃತವಾಗಿ ಎಲ್ಲ ಚಕ್ರಗಳಲ್ಲಿಯೂ ಚಲಿಸತೊಡಗುವದು. ಈ ಶಕ್ತಿಯು ಈಗ ಮಾನವನ ಎಲ್ಲ ಚಕ್ರಗಳಲ್ಲಿಯೂ ಸಕ್ರಿಯವಾಗುವದು. ಮಾನವನಲ್ಲಿಯ ನರಮಂಡಲವು, ಭಾವನೆಗಳ ಸ್ಥಾನವಾದ ಹೃದಯ, ಮನಸ್ಸು, ಮಾತು, ದೃಷ್ಟಿ,

ಸಂಕಲ್ಪ, ಉಚ್ಚಜ್ಞಾನ ಇವೆಲ್ಲ ಅಸಾಧಾರಣವಾದ ಸಾಮರ್ಥ್ಯವನ್ನು ಹೊಂದುವವು. ಈಗ **ದಿವ್ಯ ಪ್ರಜ್ಞೆಯು** ಮೂಡಿ ಬರುತ್ತದೆ.

**ಮನಸ್ಸು ರಾಜಯೋಗದ ಉಪಕರಣವಾಗಿದೆ.** ನಮ್ಮ ಸಾಮಾನ್ಯ ಮನಸ್ಸನ್ನು ಸುನಿಯಂತ್ರಿತವಾಗಿಸಿ, ವಿಶುದ್ಧವನ್ನಾಗಿಸಿ, ದೇವನತ್ತ ಸಾಗುವಂತೆ ಮಾಡುವದು ರಾಜಯೋಗದ ವಿಧಾನವಾಗಿದೆ. ಇನ್ನು **ತ್ರಿವಿಧ ಮಾರ್ಗವು (ಭಕ್ತಿ, ಜ್ಞಾನ ಮತ್ತು ಕರ್ಮ)** ಮಾನವನ, ಮನೋಮಯನ ಮೂರು ಮುಖ್ಯ ಶಕ್ತಿಗಳನ್ನು ಉಪಯೋಗಿಸಿಕೊಳ್ಳುವದು. ಜ್ಞಾನವು ತರ್ಕ ಹಾಗೂ ಮಾನಸಿಕ ಗ್ರಹಿಕೆಗಳನ್ನು ಬಳಸಿಕೊಳ್ಳುತ್ತದೆ. ದೇವನನ್ನು ಕಂಡು, ಅರಿತುಕೊಂಡು ಆತನಂತೆ ಆಗುವದೇ ಇಲ್ಲಿರುವ ಉದ್ದೇಶವಾಗಿದೆ. **ಕರ್ಮಯೋಗವು** ಕರ್ಮಯೋಗಿ ಸಂಕಲ್ಪವನ್ನು ತನ್ನ ಉಪಕರಣವಾಗಿಸಿಕೊಳ್ಳುವದು. ಇಲ್ಲಿ ಜೀವನವು ದೇವನಿಗಾಗಿ ಮಾಡುವ ಯಜ್ಞವಾಗುವದು. **ಭಕ್ತಿಯು** ಜೀವನದ ಭಾವನಾತ್ಮಕ ಹಾಗು ಕಲಾತ್ಮಕ ಶಕ್ತಿಗಳನ್ನಾರಿಸಿಕೊಳ್ಳುತ್ತದೆ. ಈ ಶಕ್ತಿಗಳು ಪರಿಪೂರ್ಣವಾಗಿ ಪರಿಶುದ್ಧಗೊಳಿ–ಸಲ್ಪಡುವವು. ಅವು ಪರಮಾತ್ಮನನ್ನೇ ಸ್ವಾಧೀನಪಡಿಸಿಕೊಳ್ಳಬಲ್ಲವು. ಪ್ರತಿಯೊಂದು ಯೋಗ ಸಾಧನೆಗೆ ಅದರ ಉಪಕರಣದ ಬಣ್ಣವೇ ಬರುತ್ತದೆ. **ಹಠಯೋಗದ ವಿಧಾನವು ಭೌತಿಕ–ಅಂತರಾತ್ಮಿಕ; ರಾಜಯೋಗದ ವಿಧಾನವು ಮಾನಸಿಕ ಅಂತರಾತ್ಮಿಕ; ಜ್ಞಾನಯೋಗದ ವಿಧಾನವು ಆಧ್ಯಾತ್ಮಿಕ ಗ್ರಹಿಕೆಯಾಗಿದೆ; ಭಕ್ತಿಯೋಗದ ವಿಧಾನವು ಭಾವನಾತ್ಮಕ, ಕಲಾತ್ಮಕ ಮತ್ತು ಆಧ್ಯಾತ್ಮಿಕವೂ ಆಗಿದೆ.** ಪ್ರತಿಯೊಂದು ಮಾರ್ಗವೂ ತನ್ನ ಮುನ್ನಡೆಯಲ್ಲಿ ತನ್ನದೇ ಆದ ವಿಶಿಷ್ಟ ಶಕ್ತಿ ಸಹಾಯವನ್ನು ಪಡೆಯುತ್ತದೆ. ಆದರೆ **ಎಲ್ಲ ಶಕ್ತಿಗಳ ಉಗಮವು ಒಂದೇ ಆಗಿದೆ. ಏಕೆಂದರೆ ಎಲ್ಲ ಶಕ್ತಿಗಳು ನಿಜವಾಗಿ ಆತ್ಮದ ಶಕ್ತಿಗಳೇ ಆಗಿವೆ.**

ಈಗ ವಿವೇಚಿಸುತ್ತಿರುವ ಯೋಗ ಸಮನ್ವಯದಲ್ಲಿ **(ಪೂರ್ಣ ಯೋಗದಲ್ಲಿ)** ನಾವು ಯೌಗಿಕ ಸಾಧ್ಯತೆಗಳತ್ತ ಬೇರೊಂದು ದೃಷ್ಟಿಕೋನವನ್ನು ಹೊಂದಿ ಬೇರೊಂದು ತತ್ತ್ವವನ್ನು ಅವಲಂಬಿಸುತ್ತವೆ. ಇದು ವೇದದ ರೀತಿಯದ್ದಾಗಿದ್ದು ತಂತ್ರದ ಉದ್ದೇಶವನ್ನೇ ಹೊಂದಿದೆ. ತಂತ್ರದಲ್ಲಿ ಶಕ್ತಿಗೆ ಪ್ರಾಧಾನ್ಯವಿದೆ. ಅದುವೇ ಪರಮಾತ್ಮನನ್ನು ಅರಸುವ ಮುಖ್ಯ ಉಪಕರಣವಾಗಿದೆ. ನಾವು ಅನುಸರಿಸುತ್ತಿರುವ **ಸಮನ್ವಯದಲ್ಲಿ ಆತ್ಮಕ್ಕೆ ಪ್ರಾಧಾನ್ಯತೆ** ಇರುತ್ತದೆ. ಆತ್ಮವೇ ನಮಗೆ ತನ್ನ ಶಕ್ತಿಯನ್ನು ಒದಗಿಸುತ್ತಿರುವದು. ತಂತ್ರವಾದರೋ ತೀರ ಕೆಳಗಿನ ಮೆಟ್ಟಿಲಿನಿಂದ ಪ್ರಾರಂಭಿಸಿ ಶಿಖರಗಳತ್ತ ಸಾಗುತ್ತದೆ. ಆದುದರಿಂದ ದೇಹ ಹಾಗೂ

ಅದರ ಚಕ್ರಗಳಲ್ಲಿ ಜಾಗೃತವಾದ ಶಕ್ತಿಯ ಕಾರ್ಯಾಚರಣೆಗೆ ಪ್ರಾಧಾನ್ಯತೆಯನ್ನು ಕೊಡುವದು. ಆರು ಕಮಲಗಳ ಅರಳುವಿಕೆಯು ಆತ್ಮದ ಸ್ತರಗಳನ್ನು ಪ್ರಕಟಿಸುತ್ತದೆ. **ನಮ್ಮ ಸಮನ್ವಯವು ಮಾನವನನ್ನು ದೇಹದಲ್ಲಿ ಸಿಲುಕಿದ ಆತ್ಮನೆಂದು ನೋಡದೇ, ಮನದಲ್ಲಿ ಸಿಲುಕಿದ ಆತ್ಮನೆಂದು ತಿಳಿಯುತ್ತಿದೆ**. ಆದ್ದರಿಂದ ಮಾನವನು ಯೋಗವನ್ನು ಮಾನಸಿಕ ಸ್ತರಗಳಲ್ಲಿ ಪ್ರಾರಂಭಿಸಬಲ್ಲನೆನ್ನುವದು ತಿಳಿಯತ್ತದೆ. ಮನಸ್ಸು ತನ್ನನ್ನು ಉಚ್ಚ ಆಧ್ಯಾತ್ಮಿಕ ಶಕ್ತಿಗಳಿಗೆ ನೇರವಾಗಿ ಉನ್ಮೀಲಿತವಾದುದನ್ನಾಗಿ ಮಾಡಿಕೊಂಡು ತನ್ನಲ್ಲಿದ್ದ ಜೀವನ ಶಕ್ತಿಯಿಂದ ಮಾನವನ ಸತ್ವವನ್ನು ಆಧ್ಯಾತ್ಮೀಕೃತವಾಗಿರುವಂತೆ ಮಾಡಬಲ್ಲುದು. ಹೀಗೆ ಗಳಿಸಿಕೊಂಡ ಸಕ್ರಿಯವಾದ ಶಕ್ತಿಯಿಂದಾಗಿ ಮಾನವನ ಇಡೀ ನಿಮ್ನ ಪ್ರಕೃತಿಯು ತನ್ನ ಪರಿಪೂರ್ಣತೆಯನ್ನು ಹೊಂದುವದು. ಆದುದರಿಂದ ನಾವು ಮನದಲ್ಲಿದ್ದ ಜೀವನ ಶಕ್ತಿಗಳನ್ನು ಉಪಯೋಗಿಸುವದರಿಂದ ಪ್ರಾರಂಭ ಮಾಡುವೆವು. ಪರಮಾತ್ಮನ ದೇಗುಲದ ದ್ವಾರದ ಬೀಗಗಳನ್ನು ತೆರೆಯಲು ಕರ್ಮ, ಜ್ಞಾನ, ಭಕ್ತಿಗಳೆಂಬ ಬೀಗದ ಕೈಗಳನ್ನು ನಾವು ಉಪಯೋಗಿಸಿಕೊಳ್ಳಬೇಕು. ಇಲ್ಲಿ ಹಠ ಯೋಗವನ್ನು ಆಶ್ರಯಿಸುವ ಕಾರಣ ಬರುವದೇ ಇಲ್ಲ. ಆದರೆ ರಾಜ ಯೋಗವನ್ನು ತುಸುಮಟ್ಟಿಗೆ ಉಪಯೋಗ ಮಾಡಿಕೊಳ್ಳಬೇಕಾಗುತ್ತದೆ. ಬಹು ಚಿಕ್ಕದಾದ ಆಧ್ಯಾತ್ಮಿಕ ಶಕ್ತಿ, ಸತ್ವಗಳ ವಿಶಾಲ ಬೆಳವಣಿಗೆಯನ್ನು ಸಾಧಿಸಿಕೊಳ್ಳುವದು, ನಿಮ್ನ ಪ್ರಕೃತಿಯನ್ನು ದಿವ್ಯವನ್ನಾಗಿಸಿ ಅದರ ಎಲ್ಲ ಸ್ತರಗಳಲ್ಲಿಯೂ ಅದರ ವಿಮೋಚನೆಯನ್ನು ತಂದುಕೊಳ್ಳುವದು ನಮ್ಮ ಸ್ಫೂರ್ತಿದಾಯಕ ಉದ್ದೇಶವಾಗಿದೆ.

**ಆತ್ಮ ಸಮರ್ಪಣೆಯೇ** ನಾವಿಲ್ಲಿ ಉಪಯೋಗಿಸಿಕೊಳ್ಳುವ ಉಪಕರಣವಾಗಿದೆ. ಮಾನವನು ಇಡೀ ಸತ್ವವನ್ನು ಸತ್, ಚಿತ್, ಆನಂದಗಳಿಗೆ ಅರ್ಪಿಸುವನು. ಆತನು ತನ್ನ ಎಲ್ಲ ಅಂಶಗಳಲ್ಲಿ ದೇವನ ಸ್ಪರ್ಶವನ್ನು ಹೊಂದುವನು. ಇದರಿಂದಾಗಿ ತನ್ನ ಮಾನವೀಯ ಉಪಕರಣದ ಪ್ರಭುವಾದ ದೇವನು ತನ್ನ ಪರದೆಯನ್ನು ಸರಿಸಿ, ತನ್ನ ಸನ್ನಿಧಾನದ ಬೆಳಕಿನಿಂದ, ಮಾರ್ಗದರ್ಶನದಿಂದ ಪ್ರಕೃತಿಯ ಎಲ್ಲ ಶಕ್ತಿಗಳಲ್ಲಿ ಮಾನವನನ್ನು ಪರಿಪೂರ್ಣಗೊಳಿಸುತ್ತಾನೆ. ಈ ಮೂಲಕ ದಿವ್ಯ ಜೀವನದತ್ತ ಸಾಗುವಂತೆ ಮಾಡುವದೆ ಈ ಆತ್ಮಸಮರ್ಪಣೆಯ ಪ್ರಮುಖ ಅಂಶಗಳಾಗಿವೆ.

ಈಗ ಯೋಗದ ಉದ್ದೇಶವು ತನ್ನ ಈವರೆಗಿನ ಸೀಮೆಗಳನ್ನು ದಾಟಿ ಮಹಾವೈಭವ, ವೈಶಾಲ್ಯಗಳನ್ನು ಹೊಂದುತ್ತದೆ. ಮಾನವ ಜೀವಿಯನ್ನು ಅವನ ಸದ್ಯದ ಅಜ್ಞಾನ, ಸೀಮಿತತನದಿಂದ ವಿಮುಕ್ತಿಗೊಳಿಸುವದೇ ಎಲ್ಲ ಯೋಗ

ಮಾರ್ಗಗಳ ಸಾಮಾನ್ಯ ಪ್ರಾರಂಭಿಕ ಉದ್ದೇಶವಾಗಿದೆ. **ಮಾನವನ ಸದ್ಯದ ಸಾಮಾನ್ಯ ತತ್ವವು ಆಧ್ಯಾತ್ಮಿಕ ತತ್ವವಾಗಬೇಕು. ಮಾನವನ ಆತ್ಮವು ತನ್ನ ಪರಮಾತ್ಮನೊಡನೆ ಒಂದಾಗಬೇಕು.** ಆದರೆ ಸಾಮಾನ್ಯವಾಗಿ ಈ ಪ್ರಾರಂಭಿಕ ಉದ್ದೇಶವೇ ಇದರ ಅಂತಿಮ ಉದ್ದೇಶವೂ ಆಗುತ್ತದೆ. ಆಧ್ಯಾತ್ಮಿಕ ಸತ್ವದ ಆನಂದ ಭೋಗದ ಕೊನೆಯ ಉದ್ದೇಶವೂ ಇಲ್ಲಿದೆ. ಆದರೆ ಇದನ್ನು ಮಾನವನ ವೈಯಕ್ತಿಕ ಆತ್ಮವು ತನ್ನನ್ನು ಪರಮಾತ್ಮನ ಪರಮ ಮೌನದಲ್ಲಿ ಲೀನಗೊಳಿಸಿಕೊಳ್ಳುವದರಿಂದ ಲಭಿಸಿಕೊಳ್ಳಬೇಕೆಂಬ ವಿಚಾರವು ರೂಢಿಯಲ್ಲಿದೆ. ಈ ಆನಂದವು ಇಹದಲ್ಲಿ ಲಭ್ಯವಾಗುವದಿಲ್ಲ ಎನ್ನುವ ನಂಬಿಕೆಯು ರೂಢಿಯಲ್ಲಿದೆ. ತಂತ್ರವೂ ಸಹಿತ ವಿಮೋಚನೆಯನ್ನೇ ತನ್ನ ಗುರಿಯನ್ನಾಗಿಸಿಕೊಂಡಿದೆ. ಆದರೆ ಇದೊಂದೇ ಗುರಿಯಾಗಿರುವದಿಲ್ಲ. ಇಂತಹ ಮಾನವೀಯ ಅಸ್ತಿತ್ವದಲ್ಲಿಯೇ ಆಧ್ಯಾತ್ಮಿಕ ಶಕ್ತಿ, ಜ್ಯೋತಿ, ಆನಂದಗಳ ಪರಿಪೂರ್ಣತೆ ಹಾಗೂ ಪೂರ್ಣ ಭೋಗಗಳು ಮಾನವನಿಗೆ ಸಾಧ್ಯವೆಂದು ತಂತ್ರವು ನಂಬಿದೆ. ವಿಮೋಚನೆಯ ಜೊತೆಯಲ್ಲಿಯೇ ವಿಶ್ವಾತ್ಮಕ ಕಾರ್ಯ ಹಾಗೂ ಭೋಗಗಳು ಕೂಡ ಸಾಧ್ಯವೆನ್ನುವ ಕಲ್ಪನೆಯನ್ನು ತಂತ್ರವು ಕಟ್ಟಿಕೊಂಡಿದೆ.

ನಾವೂ ಕೂಡ ನಮ್ಮ ಆಧ್ಯಾತ್ಮಿಕ ಸಾಧ್ಯತೆಗಳ ಈ ವಿಶಾಲ ದೃಷ್ಟಿಕೋನವನ್ನು ಇಟ್ಟುಕೊಂಡೇ ಸಾಗುವೆವು. ಆದರೆ ಇದರಲ್ಲಿ ಒಂದು ಹೊಸ ಅಂಶವನ್ನು ಸೇರಿಸಿ ಇದಕ್ಕೆ ಪರಿಪೂರ್ಣ ಮಹತ್ವವನ್ನು ಕೊಡುವೆವು. ಮಾನವ ಜೀವನು ಪರಮಾತ್ಮನೊಡನೆ ಅತೀತ ಐಕ್ಯವನ್ನು ಹೊಂದಲು ಹೋರಾಟದಲ್ಲಿ, ಏಕಾಕಿ ವೈಯಕ್ತಿಕ ಸತ್ವವನ್ನಷ್ಟೇ ಅಲ್ಲದೆ, ಆತನ ಸತ್ವವು ವಿಶ್ವಾತ್ಮಕ ಸ್ವರೂಪದ್ದೂ ಆಗಿದ್ದು ಎಲ್ಲ ಜೀವಿಗಳೊಡನೆಯೂ, ಇಡೀ ಪ್ರಕೃತಿಯೊಡನೆಯೂ ಒಂದಾಗುವದರಿಂದ, ಆ ಮೂಲಕ ಪರಮಾತ್ಮನೊಡನೆ ಒಂದಾಗಲು ಸಮರ್ಥವಾಗುತ್ತದೆ.

ಈ ವಿಶಾಲ ದೃಷ್ಟಿಕೋನಕ್ಕೆ ನಾವು ಪೂರ್ತಿ ವ್ಯವಹಾರಿಕ ಸ್ವರೂಪವನ್ನು ಕೊಡುವೆವು. ಮಾನವ ಜೀವನ ವೈಯಕ್ತಿಕ ವಿಮೋಚನೆಯಲ್ಲಿ ಹಾಗೂ ಆತನ ಆಧ್ಯಾತ್ಮಿಕ ಸತ್ವದಲ್ಲಿ, ಪ್ರಜ್ಞೆಯಲ್ಲಿ, ಆನಂದದಲ್ಲಿ ಪರಮಾತ್ಮನೊಡನೆ ಸುಖದ ಸಮ್ಮಿಲನವನ್ನು ಹೊಂದುವದು ಎಲ್ಲ ಯೋಗಗಳ ಮೊದಲ ಗುರಿಯೂ ಆಗಿದೆ. ದೇವನೊಡನೆ ವಿಶ್ವಾತ್ಮಕವಾದ ಐಕ್ಯವನ್ನು ಹೊಂದಿ ಆನಂದವನ್ನು ಅನುಭವಿಸುವದು ಎರಡನೆಯ ಗುರಿಯಾಗಿದೆ. ಈ ಉದ್ದೇಶದೊಳಗಿನಿಂದಲೇ ಮೂರನೆಯ ಉದ್ದೇಶವೊಂದು ಮೂಡಿ ಬರುತ್ತದೆ. **ದೇವನು ಮಾನವತೆಯಲ್ಲಿಟ್ಟ ದಿವ್ಯೋದ್ದೇಶಕ್ಕಾಗಿ**

**ಸಹಾನುಭೂತಿಯನ್ನು ತಾಳಿ ಅದರಲ್ಲಿ ಭಾಗವಹಿಸುವ ಉದ್ದೇಶದಿಂದ ಮಾನವ ವೈಯಕ್ತಿಕ ಜೀವನು ಎಲ್ಲದರೊಡನೆ ಒಂದಾಗುವದರ ನಿಜವಾದ ಅರ್ಥವನ್ನು ಜೀವಿಸಿ ತೋರಿಸುವದೇ ಈ ಮೂರನೇ ಉದ್ದೇಶವಾಗಿದೆ. ಆಗ ಇದು ಮನುಕುಲದಲ್ಲಿ ನಡೆದ ದಿವ್ಯ ಪ್ರಕೃತಿಯ ಸಾಮೂಹಿಕ ಯೋಗವಾಗುವದು. ವಿಮುಕ್ತನಾದ, ದೇವನೊಡನೆ ಜೀವಭಾವದಲ್ಲಿ ಹಾಗೂ ಆತ್ಮಭಾವದಲ್ಲಿ ಒಂದಾದ ವೈಯಕ್ತಿಕ ಸತ್ವವು ತನ್ನ ಸಹಜ ಸತ್ವದಲ್ಲಿ ಮಾನವತೆಯಲ್ಲಾಗಬೇಕಾದ ದೇವನ ಪರಿಪೂರ್ಣ ವಿಕಸನದ ಪರಿಪೂರ್ಣತೆಯನ್ನು ತಾನೇ ತನ್ನಲ್ಲಿ ತಂದುಕೊಳ್ಳುತ್ತಿರುವ ಉಪಕರಣವಾಗುತ್ತದೆ. ಈ ವಿಕಸನದಲ್ಲಿ ಎರಡು ಹಂತಗಳಿವೆ –**

**ಅಹಂಭಾವವನ್ನು ಬಿಟ್ಟು ಆತ್ಮದ ಐಕ್ಯಭಾವವನ್ನು ತಂದುಕೊಳ್ಳುವದು ಮೊದಲನೇ ಹಂತವಾಗಿದೆ.** ಮಾನಸ ಜೀವಿಯಾದ ಮಾನವನಲ್ಲಿ ದಿವ್ಯ ಪ್ರಕೃತಿಯು ವಿಕೃತವಾಗಿರುತ್ತದೆ. ನಮ್ಮ ಸದ್ಯದ ನಿಮ್ನ ಪ್ರಕೃತಿಯು ವಿಶ್ವಾತ್ಮಕ ವ್ಯಕ್ತಿಯಲ್ಲಿ ಸಾಗುತ್ತಿರುವ ಊನಗೊಂಡ, ವಿಕೃತವಾಗಿರುವ ರೂಪಾಂತರವಾಗಿದೆ. ಮೇಲೆ ಹೇಳಿದ ವಿಕಸನವು **ದಿವ್ಯ ಪ್ರಕೃತಿಯನ್ನು ಅದರ ದಿವ್ಯ ಸ್ವರೂಪದಲ್ಲಿಯೇ ಹೊಂದುವದು, ಇದು ಎಡನೇ ಹಂತವಾಗಿದೆ.** ಇಲ್ಲಿ ಮಾನಸಿಕ ಪ್ರಕೃತಿಯು ಪರಿಪೂರ್ಣ ಆಧ್ಯಾತ್ಮಿಕ ಹಾಗೂ ಅತಿಮಾನಸಿಕ ದಿವ್ಯ ಪ್ರಕೃತಿಯಾಗಿ ಪರಿವರ್ತಿತಗೊಳ್ಳಬೇಕು.

**ಇದುವೇ ನಮ್ಮ ಗುರಿಯಾದ ಪರಿಪೂರ್ಣತೆಯಾಗಿದೆ. ಆದುದರಿಂದ ಕರ್ಮ, ಜ್ಞಾನ, ಭಕ್ತಿಗಳ ಪೂರ್ಣ ಯೋಗವು ಆಧ್ಯಾತ್ಮಿಕ, ಅತಿಮಾನಸಿಕ ಯೋಗವಾಗಿ ವಿಕಸಿತವಾಗಬೇಕು. ಅತಿಮಾನಸ, ಜ್ಞಾನ, ಸಂಕಲ್ಪ, ಆನಂದಗಳು ಆತ್ಮದ ನೇರ ಉಪಕರಣಗಳಾಗಬೇಕು. ನಾವು ಆತ್ಮಸ್ವರೂಪರಾಗುದರಿಂದಲೇ, ದಿವ್ಯ ಸತ್ವರಾಗುವ–ದರಿಂದಲೇ ಈ ಎಲ್ಲ ಉಪಕರಣಗಳನ್ನು ಪಡೆದುಕೊಳ್ಳಲು ಸಾಧ್ಯವಾಗುತ್ತದೆ. ಆದ್ದರಿಂದ ಈ ವಿಕಸನವು ನಮ್ಮ ಯೋಗದ ಮೊದಲ ಗುರಿಯಾಗಿದೆ. ಹೀಗಾಗಿ ಸಮಗ್ರತೆಯು ನಮ್ಮ ಯೋಗದ ಅನಿವಾರ್ಯ ತತ್ತ್ವವಾಗುವದು. ಹೀಗಾಗಿ ಈ ಪೂರ್ಣ ಯೋಗಕ್ಕೆ ದಿವ್ಯ ಜ್ಞಾನ, ಕರ್ಮ, ಭಕ್ತಿ ಯೋಗಗಳ ವಿಕಸನವು ಈ ದಿವ್ಯ ಯಾತ್ರೆಯ ಪೂರ್ವ ತಯಾರಿಯಾಗಿರುತ್ತದೆ ಎನ್ನುವದನ್ನು ಮರೆಯುವಂತಿಲ್ಲ.**

**ಶ್ರೀ ಅರವಿಂದರ 'ಯೋಗ ಸಮನ್ವಯ' ಪುಟ; 622–628**

# ನಿಜವಾದ ಆಧ್ಯಾತ್ಮಿಕ ಜೀವನ

– ಅನುವಾದ: ಡಾ॥ ಮಹಾದೇವ ಸಕ್ರಿ, ವಿಜಯಪುರ

## ಕಾಮನೆಗಳು ಮತ್ತು ನಿಜವಾದ ಸ್ವಾತಂತ್ರ್ಯ

ಪ್ರಚಲಿತದಲ್ಲಿ ಅರ್ಪಣೆಯ ಬಗ್ಗೆ ಹಲವು ತಪ್ಪು ಅಭಿಪ್ರಾಯಗಳಿವೆ. ಬಹಳಷ್ಟು ಜನರು ಅರ್ಪಣೆಯನ್ನು ವ್ಯಕ್ತಿತ್ವದ ಒಂದು ಪದ ತ್ಯಾಗವನ್ನಾಗಿ ಪರಿಗಣಿಸುತ್ತಾರೆಂದು ತೋರುತ್ತದೆ; ಆದರೆ ಅದೊಂದು ಘೋರ ತಪ್ಪು. ಒಬ್ಬ ವ್ಯಕ್ತಿಯು ದೈವೀ ಪ್ರಜ್ಞೆಯ ಒಂದು ಅಂಶವನ್ನು ಪ್ರಕಟಪಡಿಸುವ ಸಲುವಾಗಿ ಇರುವನು, ಮತ್ತು ಅದರ ವಿಶಿಷ್ಟವಾದ ಸ್ವರೂಪವನ್ನು ಅಭಿವ್ಯಕ್ತ ಪಡಿಸುವಿಕೆಯು ಅವನ ವ್ಯಕ್ತಿತ್ವವನ್ನು ರೂಪಿಸುತ್ತದೆ; ಆಗ, ದೈವೀ ನೆಲೆಯ ಕಡೆಗೆ ಸರಿಯಾದ ನಿಲುವನ್ನು ತೆಗೆದುಕೊಳ್ಳುವುದರಿಂದ, ಈ ವ್ಯಕ್ತಿತ್ವವು ಅದನ್ನು ಕುಗ್ಗಿಸುವ ಮತ್ತು ವಿಕೃತಗೊಳಿಸುವ ಕೆಳ ಸ್ವರೂಪದ ಎಲ್ಲ ಪ್ರಭಾವಗಳಿಂದ ಪರಿಶುದ್ಧಗೊಳಿಸಲ್ಪಡುತ್ತದೆ ಮತ್ತು ಅದು ಹೆಚ್ಚು ಸಮರ್ಥ, ಹೆಚ್ಚು ಪೂರ್ಣ, ಹೆಚ್ಚು ಆತ್ಮಗತವಾಗುತ್ತದೆ. ವ್ಯಕ್ತಿತ್ವದ ಸತ್ಯ ಮತ್ತು ಸಾಮರ್ಥ್ಯವು ಹೆಚ್ಚು ದೇದಿಪ್ಯಮಾನವಾದ ಶ್ರೇಷ್ಠತೆಯಿಂದ ಹೊರ ಹೊಮ್ಮುತ್ತದೆ, ಅದರ ಚಾರಿತ್ರ್ಯವು ಎಲ್ಲ ಅಸ್ಪಷ್ಟತೆ ಮತ್ತು ಅಜ್ಞಾನ ಮತ್ತು ಎಲ್ಲ ಕೊಳಕು ಮತ್ತು ನಿಮ್ನ ಸ್ವಭಾವದ ಬೆರಕೆಗಳೊಡನೆ ಮಿಶ್ರಣ ಮಾಡಿದಾಗಿನಕ್ಕಿಂತ ಹೆಚ್ಚು ಖಚಿತವಾಗಿ ಗುರುತಿಸಲ್ಪಡುತ್ತದೆ. ಅರ್ಹತೆಯ ವಿಷಯದಲ್ಲಿ ಒಂದು ಉನ್ನತಗೊಳಿಸುವಿಕೆ ಹಾಗೂ ವೈಭವೀಕರಿಸುವಿಕೆ, ಒಂದು ಅತಿಶಯಗೊಳಿಸುವಿಕೆ, ಅದರ ಸಾಧ್ಯತೆಗಳ ಒಂದು ಅಧಿಕತಮ ಮನವರಿಕೆಯನ್ನು ಅದು ಅನುಭವಿಸುತ್ತದೆ. ಆದರೆ ಈ ಉದಾತ್ತ ಬದಲಾವಣೆಯನ್ನು ಹೊಂದಬೇಕಾದರೆ ಅವರು ಮೊದಲು ಅವೆಲ್ಲವನ್ನೂ ಬಿಟ್ಟುಕೊಡಬೇಕು, ಸತ್ಯವನ್ನು ವಿಪರ್ಯಾಸಗೊಳಿಸುವ, ನಿಜ ಸ್ವಭಾವವನ್ನು ಮಿತಿಯಲ್ಲಿಡುವುದರಿಂದ ಮತ್ತು ಮಂಕುಗೊಳಿಸುವುದರಿಂದ, ನಿಜ ವ್ಯಕ್ತಿತ್ವವನ್ನು ಬಂಧಿಸುತ್ತದೆ ಮತ್ತು ಚಾರಿತ್ರ್ಯಗೆಡಿಸುತ್ತದೆ, ಮತ್ತು ವಿಕಾರಮಾಡುತ್ತದೆ; ಸಾಮಾನ್ಯ ಮನುಷ್ಯನ ಅಜ್ಞಾನದ ನಿಮ್ನ ಚಲನೆಗಳಿಗೆ ಮತ್ತು ಅವನ ಅವಿವೇಕದ, ಸೊರಗಿದ, ಸಾಧಾರಣ ಜೀವನಕ್ಕೆ ಸೇರಿದ ಎಲ್ಲವನ್ನೂ ಅವನು ತನ್ನಿಂದ ಕಿತ್ತೆಸೆಯಲೇಬೇಕು. ಕಾಮನೆಯು ಅತ್ಯಂತ ಮಂಕಾದ ಮತ್ತು ಅತ್ಯಂತ ಮಂಕುಗೊಳಿಸುವ ಚಲನೆಯಾಗಿರುವುದರಿಂದ ಮೊಟ್ಟಮೊದಲು ಅವನು ತನ್ನ ಎಲ್ಲ ಕಾಮನೆಗಳನ್ನು ಬಿಟ್ಟುಕೊಡಬೇಕು.

ಕಾಮನೆಗಳು ದುರ್ಬಲತೆಯ ಮತ್ತು ಅಜ್ಞಾನದ ಸೂಚಕಗಳಾಗಿವೆ ಮತ್ತು ಅವುಗಳು ನಿಮ್ಮ ದುರ್ಬಲತೆಗೆ ಹಾಗೂ ಅಜ್ಞಾನಕ್ಕೆ ನಿಮ್ಮನ್ನು ಕಟ್ಟಿ ಹಾಕುತ್ತವೆ. ಕಾಮನೆಗಳು ತಮ್ಮೊಳಗೇ ಜನಿಸಿವೆ ಎಂಬ ಅನಿಸಿಕೆ ಮನುಷ್ಯರಲ್ಲಿದೆ; ಅವುಗಳು ತಮ್ಮಿಂದಲೇ ಹೊರಬಂದಿವೆ ಅಥವಾ ಉದ್ಭವಿಸಿವೆ ಎಂಬಂತೆ ಭಾವಿಸುತ್ತಾರೆ; ಆದರೆ ಅದು ತಪ್ಪು ಅನಿಸಿಕೆ. ಬಯಕೆಗಳು ಅಸ್ಪಷ್ಟ ನಿಮ್ನ ಸ್ವಭಾವದ ವಿಶಾಲ ಸಾಗರದ ಅಲೆಗಳಾಗಿವೆ ಮತ್ತು ಅವುಗಳು ಒಬ್ಬ ವ್ಯಕ್ತಿಯಿಂದ ಇನ್ನೊಬ್ಬ ವ್ಯಕ್ತಿಗೆ ಮುಂದುವರೆಯುತ್ತವೆ. ಮನುಷ್ಯರು ತಮಷ್ಟಕ್ಕೆ ತಾವು ಬಯಕೆಗಳನ್ನು ಉತ್ಪಾದಿಸುವುದಿಲ್ಲ, ಆದರೆ ಈ ಅಲೆಗಳಿಂದ ದಾಳಿಮಾಡಲ್ಪಡುತ್ತವೆ; ಯಾರು ಅನಾವೃತರಾಗುತ್ತಾರೋ ಮತ್ತು ರಕ್ಷಣೆ ಇಲ್ಲದೆ ಇರುತ್ತಾರೋ ಅಂಥವರು ಅವುಗಳಲ್ಲಿ ಸಿಲುಕಿಕೊಳ್ಳುತ್ತಾರೆ ಮತ್ತು ಕ್ಷೋಭೆಗೊಳಗಾಗುತ್ತರೆ. ಬಯಕೆಯು ಅವನನ್ನು ತಲ್ಲೀನವಾಗಿಸುವುದರಿಂದ ಮತ್ತು ಸ್ವಾಧೀನದಲ್ಲಿಟ್ಟುಕೊಳ್ಳುವುದರಿಂದ ಅವನನ್ನು ಯಾವುದೇ ಅಸಮರ್ಥನನ್ನಾಗಿ ಮಾಡುತ್ತದೆ ಮತ್ತು ಅದು ತನ್ನ ಸಹಜ ಗುಣದ, ಅದನ್ನು ಪ್ರಕಟಪಡಿಸಲು ಬೇಕಾದ, ತನ್ನ ಸಹಜ ಗುಣದ ಅಂಶವೆಂಬ ಭಾವನೆಯನ್ನು ಕೊಡುತ್ತದೆ. ವಾಸ್ತವದಲ್ಲಿ ಅದು ಅವನ ನಿಜವಾದ ಸಹಜ ಗುಣದೊಂದಿಗೆ ಯಾವುದೇ ಸಂಬಂಧ ಹೊಂದಿಲ್ಲ. ಇದು ಎಲ್ಲ ನಿಮ್ನ ಪ್ರಚೋದನೆಗಳಿಗೆ ಅನ್ವಯಿಸುತ್ತದೆ, ಮಾತ್ಸರ್ಯ ಅಥವಾ ಅಸೂಯೆ, ಹಗೆತನ ಅಥವಾ ಹಿಂಸೆ. ಇವುಗಳು ನಿಮ್ಮನ್ನು ವಶಪಡಿಸಿಕೊಳ್ಳಲು ಬೇಕಾದ ಚಲನೆಗಳಾಗಿವೆ, ನಾಶ ಮಾಡುವ ಮತ್ತು ದಾಳಿ ಮಾಡುವ ಅಲೆಗಳಾಗಿವೆ; ಅವು ವಿರೂಪಗೊಳ್ಳುತ್ತವೆ, ಅವುಗಳು ನಿಜ ಲಕ್ಷಣಗಳಿಗೆ ಅಥವಾ ನಿಜ ಸ್ವಭಾವಕ್ಕೆ ಸೇರಿದವುಗಳಲ್ಲ; ಅವು ಸ್ವಾಭಾವಿಕವಲ್ಲ, ಅಥವಾ ನಿಮ್ಮಿಂದ ಬೇರ್ಪಡಿಸಲಾಗದ ಭಾಗ, ಆದರೆ ನಿಮ್ನ ಸ್ವಭಾವದ ಶಕ್ತಿಗಳು ಚಲಿಸುವ ಸುತ್ತಮುತ್ತಲಿನ ಅಸ್ಪಸ್ಟತೆಯ ಸಾಗರದಿಂದ ಹೊರಬರುತ್ತವೆ. ಈ ಕಾಮನೆಗಳಿಗೆ, ಈ ಭಾವೋದ್ವೇಗಗಳಿಗೆ ವ್ಯಕ್ತಿತ್ವವಿರುವುದಿಲ್ಲ, ಅವುಗಳಲ್ಲಿ ಅಥವಾ ಅವುಗಳ ಕ್ರಿಯೆಯಲ್ಲಿ ನಿಮಗೆ ವಿಶಿಷ್ಟವೆನಿಸುವುದು ಏನೂ ಇಲ್ಲ; ಪ್ರತಿಯೊಬ್ಬರಲ್ಲೂ ಒಂದೇ ತೆರನಾಗಿ ಅವು ಪ್ರಕಟವಾಗುತ್ತವೆ. ವ್ಯಕಿತ್ವವನ್ನು ಮರೆಮಾಚುವ ಮತ್ತು ಅದರ ವಿಸ್ತಾರವನ್ನು ಮತ್ತು ನೆರವೇರಿಕೆಯನ್ನು ಕ್ಷೀಣಿಸುವ ಸಂಶಯಗಳು ಮತ್ತು ಪ್ರಮಾದಗಳು ಮತ್ತು ತೊಂದರೆಗಳು, ಮನಸ್ಸಿನ ಅಸ್ಪಷ್ಟ ಚಲನೆಗಳೂ ಸಹ ಒಂದೇ ಮೂಲದಿಂದ ಬರುತ್ತವೆ. ಅವುಗಳು ಸಾಗುತ್ತಿರುವ ಅಲೆಗಳು ಮತ್ತು ಹಿಡಿಸಿಕೊಳ್ಳಲು ಮತ್ತು

ಅವುಗಳ ಕುರುಡು ಸಾಧನವನ್ನಾಗಿ ಉಪಯೋಗಿಸಲು ತಯಾರಾಗಿರುವ, ಯಾರಾದರೂ ಸರಿ, ಅವು ಹಿಡಿಯುತ್ತವೆ. ಆದಾಗ್ಯೂ, ಪ್ರತಿಯೊಬ್ಬನೂ ಈ ಚಲನೆಗಳು ತನ್ನ ಭಾಗವೆಂದು ಮತ್ತು ತನ್ನ ಸ್ವಂತ ಉದಾರ ವ್ಯಕ್ತಿತ್ವದ ಅಮೂಲ್ಯ ಪರಿಣಾಮವೆಂದು ನಂಬುತ್ತ ಹೋಗುತ್ತಾನೆ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 3/116–17**

## ಚೈತ್ಯ ಪುರುಷನಲ್ಲಿ ನೆಲೆಸಿರಿ

ಚೈತ್ಯನಲ್ಲಿ ನೆಲೆಸಬೇಕಾದರೆ ಎಲ್ಲ ಅತಿಯಾಸೆಗಳಿಗಿಂತ ಮೇಲೆ ಆರೋಹ–ಗೊಳ್ಳಬೇಕು. ನಿನ್ನಲ್ಲಿ ಹಪಹಪಿ ಇರುವುದಿಲ್ಲ, ಚಿಂತೆ ಇರುವುದಿಲ್ಲ, ಉದ್ರಿಕ್ತ ಬಯಕೆ ಇರುವುದಿಲ್ಲ. ಆಗ ಏನೆಲ್ಲ ಸಂಭವಿಸುತ್ತದೆಯೋ ಅದು ಒಳ್ಳೆಯದಕ್ಕೇ ಸಂಭವಿಸುತ್ತಿದೆ ಎಂದು ನಿಮಗೂ ಸಹ ಅನ್ನಿಸುತ್ತದೆ. ನನ್ನನ್ನು ತಪ್ಪಾಗಿ ತಿಳಿಯಬೇಡಿ, ಅದನ್ನು ವ್ಯಕ್ತಗೊಳಿಸಬೇಕಾದರೆ ಎಲ್ಲವೂ ಒಳ್ಳೆಯದಕ್ಕಾಗಿಯೇ ಎಂದು ಯಾವಾಗಲೂ ಯೋಚಿಸು. ನೀನು ಸಾಧಾರಣ ಪ್ರಜ್ಞೆಯಲ್ಲಿ ಇರುವವರೆಗೆ ಎಲ್ಲವೂ ಉತ್ತಮವಾದುದಕ್ಕಾಗಿ ಅಲ್ಲ. ನೀವು ಸರಿಯಾದ ಪ್ರಜ್ಞೆಯ ಸ್ತರದಲ್ಲಿ ಇರದಿದ್ದಾಗ ನಿಮ್ಮನ್ನು ಕಡು ತಪ್ಪು ಮಾರ್ಗಗಳೆಡೆಗೆ ಎಳೆಯಬಹುದು. ಆದರೆ ಒಮ್ಮೆ ನೀವು ಚೈತ್ಯನಲ್ಲಿ ಸಮತೋಲನ ಹೊಂದಿದರೆ ಮತ್ತು ನಿಮ್ಮನ್ನು ನೀವು ಭಗವಂತನಿಗೆ ಅರ್ಪಿಸಿಕೊಂಡರೆ, ಏನೇನು ಸಂಭವಿಸುತ್ತದೆಯೋ ಅದು ಒಳ್ಳೆಯದಕ್ಕೇ ಸಂಭವಿಸುತ್ತದೆ, ಎಲ್ಲದಕ್ಕೂ, ಹೇಗಾದರೂ ವೇಷಾಂತರವಾಗಲಿ, ಭಗವಂತನ ಒಂದು ಖಂಡಿತವಾದ ಪ್ರತಿಕ್ರಿಯೆಯಾಗಿರುತ್ತದೆ.

ಪ್ರಾಮಾಣಿಕ ಸ್ವಯಂ–ನೀಡುವಿಕೆಯು ನಿಜಕ್ಕೂ ಅದರ ಸ್ವಂತ ತಕ್ಷಣದ ಬಹುಮಾನವಾಗಿದೆ – ಅದು ತನ್ನೊಡನೆ ಬೇರೆ ಯಾವ ಸಂಗತಿಯೂ ಕೊಡದಂಥ ಸಂತೋಷವನ್ನು, ಆತ್ಮ ವಿಶ್ವಾಸವನ್ನು, ಸುರಕ್ಷತೆಯನ್ನು ತರುತ್ತದೆ. ಆದರೆ ಸ್ವಯಂ–ನೀಡುವಿಕೆಯು ದೃಢವಾಗಿ ಚೈತ್ಯವಾಗಿರುವವರೆಗೆ ಗೋಜಲುಗಳಿರುತ್ತವೆ. ಉಜ್ವಲ ಕ್ಷಣಗಳ ಮಧ್ಯೆ ಅಜ್ಞಾನದ ಕ್ಷಣಗಳ ಬಿಡುವು. ಚೈತ್ಯವು ಮಾತ್ರ ತುಂಡಾಗದ ಪಥದಲ್ಲಿ ಮುನ್ನಡೆಯುತ್ತ ಇರುತ್ತದೆ, ಅದರ ಚಲನೆಯು ಒಂದು ನಿರಂತರ ಆರೋಹಣ. ಉಳಿದೆಲ್ಲ ಚಲನೆಗಳು ತುಂಡಾದವುಗಳು ಮತ್ತು ನಿರಂತರವಲ್ಲದವುಗಳು. ಮತ್ತು ಚೈತ್ಯನು ನೀವೆ ಎಂದು ಅನುಭವಪಡುವವರೆಗೆ,

ಅದು ನಿಮ್ಮಲ್ಲಿರುವ ನಿಜ ವ್ಯಕ್ತಿತ್ವವಾಗಿರುವುದರಿಂದ ನೀವು ವ್ಯಕ್ತಿಯು ಸಹ ಆಗುವುದಿಲ್ಲ; ನಿಜ ವ್ಯಕ್ತಿತ್ವ ತಿಳಿಯುವ ಮೊದಲು ನೀವು ಸಾರ್ವಜನಿಕ ಸ್ಥಳ, ಒಂದು ಜೀವಿಯಲ್ಲ. ಹೊಡೆದಾಡಿಕೊಳ್ಳುವ ಅನೇಕ ಶಕ್ತಿಗಳು ನಿಮ್ಮಲ್ಲಿ ಕೆಲಸ ಮಾಡುತ್ತವೆ; ಆದ್ದರಿಂದ ನೀವು ನಿಜವಾದ ಪ್ರಗತಿಯನ್ನು ಸಾಧಿಸಬೇಕಾದರೆ, ಭಗವಂತನೊಡನೆ ನಿರಂತರ ತಾದಾತ್ಮ್ಯ ಹೊಂದಿರುವ ನಿಮ್ಮ ಸ್ವಂತ ಜೀವವನ್ನು ನೋಡಿಕೊಳ್ಳಿ. ಆಗ ಮಾತ್ರ ಪರಿವರ್ತನೆ ಸಾಧ್ಯವಾಗುತ್ತದೆ... ಚೈತ್ಯನ ಹತ್ತಿರ ಮಾತ್ರ ಒಂದು ನೈತಿಕವಾದ ಭೇದ ಇದೆ: ಅದು ನೇರವಾಗಿ ಶ್ರೇಷ್ಠ ಸಾನಿಧ್ಯದ ಅರಿವು ಹೊಂದಿದೆ, ಅದು ದೋಷಾತೀತವಾಗಿ ದಿವ್ಯವಾದ ಮತ್ತು ದಿವ್ಯವಲ್ಲದನ್ನು ಪತ್ತೆ ಹಚ್ಚುತ್ತದೆ. ಒಂದು ಕ್ಷಣವಾದರೂ ಸಹ ಅದನ್ನು ನೀವು ಸಂಪರ್ಕಿಸಿದ್ದರೆ, ಯಾವುದೂ ನಲುಗಿಸದಂಥ ದೈವೀ ಗಾಢ ನಂಬಿಕೆಯನ್ನು ನಿಮ್ಮೊಂದಿಗೆ ಕೊಂಡೊಯ್ಯುವಿರಿ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 3/123–24**

**ನಿಮ್ಮ ನಿಜವಾದ ಇರುವಿಕೆಯನ್ನು ಕಂಡುಕೊಳ್ಳುವುದು**

ನಾವು ನಮ್ಮ ನಿಜವಾದ ಅಸ್ತಿತ್ವವನ್ನು ಹೇಗೆ ತಿಳಿದುಕೊಳ್ಳಬೇಕು? ನೀವು ನನ್ನನ್ನು ಕೇಳಿ. ಅದಕ್ಕಾಗಿ ಕೇಳಿರಿ, ಅದಕ್ಕಾಗಿ ಹಂಬಲಿಸಿರಿ, ಬೇರೆನನ್ನೂ ಬಯಸದೆ ಅದನ್ನು ಬಯಸಿರಿ. ಇಲ್ಲಿಯ ಬಹಳಷ್ಟು ಜನರು ಅದರಿಂದ ಪ್ರಭಾವಿತರಾಗಿದ್ದೀರಿ, ಆದರೆ ಅದು ಪ್ರಭಾವಕ್ಕಿಂತ ಹೆಚ್ಚಿನದಿರಬೇಕು, ನೀವು ಅದರೊಂದಿಗೆ ಗುರುತಿಸಿಕೊಳ್ಳುವ ಭಾವ ಹೊಂದಲು ಸಮರ್ಥರಾಗಿರಬೇಕು. ಪರಿಪೂರ್ಣತೆಗೆ ಎಲ್ಲ ಪ್ರೇರಣೆಯು ಅದರಿಂದ ಬರುತ್ತದೆ, ಆದರೆ ಮೂಲದ ಬಗ್ಗೆ ಅರಿವಿಲ್ಲದವರಾಗಿದ್ದೀರಿ, ನೀವು ತಿಳಿದುಕೊಂಡು ಅದರ ಜೊತೆ ಸಹಯೋಗ ಮಾಡಿಕೊಳ್ಳುತ್ತಿಲ್ಲ, ನೀವು ಅದರ ಜ್ಯೋತಿಯ ಜೊತೆಗೆ ಗುರುತಿಸಿಕೊಳ್ಳುವಿಕೆಯಲ್ಲಿ ಇಲ್ಲ. ನಾನು ಚೈತ್ಯನ ಬಗ್ಗೆ ಮಾತನಾಡಿದಾಗ ನಿಮ್ಮ ಭಾವನಾತ್ಮಕ ಅಂಶದ ಬಗ್ಗೆ ಉಲ್ಲೇಖಿಸುತ್ತಿದ್ದೆನೆಂದು ಭಾವಿಸಬೇಡಿ. ಭಾವನೆಯು ಉನ್ನತ ಪ್ರಾಣಕ್ಕೆ ಸಂಬಂಧಪಟ್ಟಿದೆ, ಶುದ್ಧ ಚೈತ್ಯಕ್ಕೆ ಅಲ್ಲ. ಚೈತ್ಯವೆಂದರೆ ದಿವ್ಯತೆಯ ಕಡೆಗೆ ಮೇಲೆರುತ್ತಿರುವ ಮತ್ತು ಎಲ್ಲ ವಿರೋಧಗಳನ್ನು ವಿಫಲಗೊಳಿಸುವ, ಒಂದು ಶಕ್ತಿಯ ಸಂವೇದನೆಯನ್ನು ತನ್ನ ಜೊತೆಗೆ ಕೊಂಡೊಯ್ಯುವ ನಿಮ್ಮಲ್ಲಿ ಉರಿಯುವ

ಒಂದು ಜ್ಯೋತಿ. ನಿಮ್ಮನ್ನು ಅದರ ಜೊತೆಗೆ ಗುರುತಿಸಿಕೊಂಡಾಗ ದಿವ್ಯ ಸತ್ಯದ ಅನುಭವವನ್ನು ಹೊಂದುವಿರಿ..., ಆಗ ಇಡೀ ಪ್ರಪಂಚವು ಅಜ್ಞಾನದಿಂದ ತನ್ನ ಕಾಲುಗಳನ್ನು ಗಾಳಿಯಲ್ಲಿ ಮಾಡಿ ತನ್ನ ತಲೆಯ ಮೇಲೆ ನಡೆಯುತ್ತಿದೆ ಎಂಬ ಭಾವನೆಗೂ ನಿಮಗೆ ಸಹಾಯ ಮಾಡಲು ಸಾಧ್ಯವಿಲ್ಲ.

ನೀವು ಕರೆಯುವ ವೈಯಕ್ತಿಕ ಸ್ವಯಂ ಎಂಬುದನ್ನು ನಿಮ್ಮ ನಿಜವಾದ ಚೈತ್ಯ ವೈಯಕ್ತಿಕತೆಯ ಜೊತೆಗೆ ಒಂದುಗೂಡಿಸಲು ನೀವು ಕಲಿತುಕೊಳ್ಳಲೇಬೇಕು. ಪ್ರಸ್ತುತ ನಿಮ್ಮ ವೈಯಕ್ತಿಕತೆಯು ಬಹಳೇ ಮಿಶ್ರವಾದ ವಸ್ತುವಾಗಿದೆ, ಒಂದು ನಿರ್ದಿಷ್ಟ ನಿರಂತರತೆಯನ್ನು ಕಾಪಾಡುವ ಬದಲಾವಣೆಗಳ ಒಂದು ಸರಣಿಯು ಎಲ್ಲ ಹರಿವಿನ ಮಧ್ಯೆ ಕಂಪನದ ಒಂದು ನಿರ್ದಿಷ್ಟ ಸಮಾನತೆ ಅಥವಾ ಗುರುತು. ಎಂದಿಗೂ ಒಂದೇ ತೆರನಾಗಿ ಇರದ ಇದು ಬಹುತೇಕ ಒಂದು ನದಿಯಂತೆ ಇದ್ದಾಗ್ಯೂ ಅದು ತನ್ನದೇ ಆದ ಒಂದು ನಿರ್ದಿಷ್ಟತೆ ಮತ್ತು ನಿರಂತರತೆಯನ್ನು ಹೊಂದಿದೆ. ನಿಮ್ಮ ಮಾಮೂಲಾದ ಸ್ವಯಂ ನಿಮ್ಮ ನಿಜ ವೈಯಕ್ತಿಕತೆಯ ಕೇವಲ ಒಂದು ನೆರಳಾಗಿದೆ, ಬೇರೆ ಬೇರೆ ಸಮಯಗಳಲ್ಲಿ ಬೇರೆ ಬೇರೆ ನಿಲುವುಗಳನ್ನು, ಈಗ ಮಾನಸಿಕದಲ್ಲಿ, ನಂತರ ಪ್ರಾಣಿಕದಲ್ಲಿ, ಬೇರೆ ಸಮಯಗಳಲ್ಲಿ ಭೌತಿಕದಲ್ಲಿ, ಚೈತ್ಯನ ಜೊತೆಗೆ ಸಂಪರ್ಕವನ್ನು ಪಡೆದುಕೊಂಡು ಅದನ್ನು ನಿಜವಾದ ಉಪಸ್ಥಿತಿ ಎಂದು ಭಾವಿಸುವ ಈ ಮಾಮೂಲು ವೈಯಕ್ತಿಕತೆಯನ್ನು ನೀವು ಅರಿತುಕೊಳ್ಳುವಿರಿ. ಆಗ ನೀವು ಏಕವಾಗುವಿರಿ, ನಿಮ್ಮನ್ನು ಯಾವುದೂ ಘಾಸಿಸದು ಅಥವಾ ತೊಂದರೆ ಕೊಡದು, ನೀವು ಅವಿರತ ಮತ್ತು ಶಾಶ್ವತ ಪ್ರಗತಿಯನ್ನು ಸಾಧಿಸುವಿರಿ ಮತ್ತು ಆಹಾರಕ್ಕಾಗಿ ಆಸೆಗಳಂಥ ಕ್ಷುಲ್ಲಕ ವಿಷಯಗಳಿಗಿಂತ ಮೇಲಿರುವಿರಿ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 3/124–25**

## ದೈವದೊಂದಿಗೆ ಮಿಲನ

ಬಲವು ಅಜ್ಞಾನದಲ್ಲಿ ಮುಳುಗಿಹೋದಾಗ ಪ್ರಾಣಿಕ ಬಯಕೆಗಳ ರೂಪವನ್ನು ಪಡೆದುಕೊಳ್ಳುವುದು, ಅದರ ಶುದ್ಧ ರೂಪದಲ್ಲಿ ಒತ್ತಡವನ್ನು, ಪರಿವರ್ತನೆಯ ಕಡೆಗೆ ಚೈತನ್ಯವನ್ನು ರೂಪಿಸುವುದು ಒಂದೇ ಆಗಿದೆ. ಪರಿಣಾಮವಾಗಿ, ಅದೇ ಸಮಯಕ್ಕೆ ಬಯಕೆಗಳಲ್ಲಿ ಮುಕ್ತವಾಗಿ ಪಾಲ್ಗೊಳ್ಳುವಾಗ, ಅವುಗಳು ತಣಿಸಬೇಕಾದ ಅತ್ಯಗತ್ಯಗಳು ಎಂದು ಯೋಚಿಸುವಾಗ ಮತ್ತು ಪ್ರಾಣ ಶಕ್ತಿಗಳು

ಧನಾತ್ಮಕ ಕೆಡುಕೆಂದು ವರ್ಜಿಸುವಾಗ ನೀವು ಎಚ್ಚರಿಕೆಯಿಂದಿರಬೇಕು. ನೀವು ಮಾಡಬೇಕಾದುದೇನೆಂದರೆ, ನಿಮ್ಮ ಜೀವದ (ಇರುವಿಕೆಯ) ಕದಗಳನ್ನು ದೈವಕ್ಕೆ ವಿಶಾಲವಾಗಿ ತೆರೆದಿಡುವುದು. ನೀವು ಏನಾದರೊಂದನ್ನು ಮರೆಮಾಚಿದಾಗ ನೀವು ನೇರವಾಗಿ ಅನೃತದಲ್ಲಿ ಅಡಿ ಇಡುವಿರಿ. ನಿಮ್ಮ ಕಡೆಯ ಅತ್ಯಂತ ಕಡಿಮೆ ನಿರೋಧವು ಕೂಡಲೆ ನಿಮ್ಮನ್ನು ಪ್ರಜ್ಞಾಹೀನತೆಯ ಕಡೆಗೆ ಎಳೆಯುತ್ತದೆ. ನೀವು ಪೂರ್ಣ ಪ್ರಜ್ಞೆಯಿಂದಿರಬೇಕಾದರೆ, ಯಾವಾಗಲೂ ಸತ್ಯದ ಎದುರಿಗೆ ಇರಿ – ನಿಮ್ಮನ್ನು ನೀವು ಪೂರ್ಣವಾಗಿ ತೆರೆದುಕೊಳ್ಳಿ ಮತ್ತು ಅದು ನಿಮ್ಮ ಆಳದಲ್ಲಿ ನಿಮ್ಮ ಉಪಸ್ಥಿತಿಯ ಪ್ರತಿಯೊಂದು ಮೂಲೆಯಲ್ಲಿ ನೋಡುವಂತೆ ಹೆಚ್ಚು ಪ್ರಯತ್ನ ಮಾಡಿ. ಅದು ಮಾತ್ರ ನಿಮ್ಮಲ್ಲಿ ಬೆಳಕನ್ನು ಮತ್ತು ಪ್ರಜ್ಞೆಯನ್ನು ಮತ್ತು ಸತ್ಯವಿರುವುದೆಲ್ಲವನ್ನೂ ತರುತ್ತದೆ. ಸಂಪೂರ್ಣವಾಗಿ ವಿನಮ್ರವಾಗಿರಿ – ಹೇಳಬೇಕೆಂದರೆ, ನೀವೇನಾಗಿರುವಿರಿ ಮತ್ತು ಏನಾಗಬೇಕೆಂದುಕೊಂಡಿರುವಿರಿ ಇವುಗಳ ನಡುವಿನ ಅಂತರವನ್ನು ತಿಳಿಯಿರಿ. ಕೌಶಲವಿಲ್ಲದ ಭೌತಿಕ ಮಾನಸಿಕತೆಯನ್ನು ಅದು ತಿಳಿದುಕೊಂಡಿಲ್ಲದಾಗ ತಿಳಿದಿದೆ ಎಂದು ಯೋಚನೆ ಮಾಡಲು, ನಿರ್ಣಯ ಮಾಡದಿದ್ದಾಗ ನಿರ್ಣಯಿಸುತ್ತದೆ ಎಂದುಕೊಳ್ಳಲು ಬಿಡಬೇಡಿ. ವಿನಮ್ರತೆ ಎಂದರೆ ನಿಮ್ಮನ್ನು ನೀವು ತುಂಬು ಹೃದಯದಿಂದ ಭಗವಂತನಿಗೆ ತ್ಯಾಗ ಮಾಡುವುದು, ಸಹಾಯಕ್ಕಾಗಿ ಯಾಚಿಸುವುದು. ಮತ್ತು ವಿನಮ್ರತೆ ಎಂದರೆ, ಶರಣಾಗತಿಯಿಂದ ಮನಸ್ಸಿಗೆ ಸಂಪೂರ್ಣ ಸಮಾಧಾನವನ್ನು ಕೊಡುವಂಥ ಸ್ವಾತಂತ್ರ್ಯ ಮತ್ತು ಹೊಣೆಗಾರಿಕೆಯ ಕೊರತೆಯನ್ನು ಗೆಲ್ಲುವುದಾಗಿದೆ. ಇಲ್ಲದಿದ್ದರೆ ದಿವ್ಯ ಪ್ರಜ್ಞೆಯೊಂದಿಗೆ ಮತ್ತು ದಿವ್ಯ ಸಂಕಲ್ಪದೊಂದಿಗೆ ಮಿಲನವನ್ನು ಸಾಧಿಸುವ ಭರವಸೆ ನಿಮಗಿತ್ತೇ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 3/133**

**ಶರಣಾಗತಿಗೆ ನಿಜವಾದ ಪ್ರತಿಬಂಧ**

ವಿಶ್ವವ್ಯಾಪಿಗಾಗಲಿ ಅಥವಾ ತರ್ಕಾತೀತಕ್ಕಾಗಲಿ ಸ್ವಯಂ ಶರಣಾಗತಿಗೆ ಇರುವ ನಿಜವಾದ ಪ್ರತಿಬಂಧವು ಅವರ ಸ್ವಂತ ಇತಿಮಿತಿಗಳ ಪ್ರೇಮ. ವ್ಯಕ್ತಿಯ ಅಸ್ತಿತ್ವದ ರೂಪಗೊಳ್ಳುವಿಕೆಯಲ್ಲಿ ಮಿತಿಗಳ ಮೇಲೆ ಏಕಾಗ್ರತೆಯ ಕಡೆಗೆ ಒಲವಿರುವುದರಿಂದ ಅದು ನೈಜ ಪ್ರೇಮವಾಗಿದೆ. ಅದು ಇಲ್ಲದೆ, ಪ್ರತ್ಯೇಕತೆಯ

ಭಾವ ಅಲ್ಲಿರುವುದಿಲ್ಲ – ಪ್ರಜ್ಞೆಯ ಮಾನಸಿಕದಲ್ಲಿ ಮತ್ತು ಪ್ರಾಣಿಕದಲ್ಲಿ ಸಾಮಾನ್ಯವಾಗಿ ಎಲ್ಲವೂ ಮಿಶ್ರಿತವಾಗುತ್ತದೆ. ವಿಶೇಷವಾಗಿ ದೇಹವು ಅಷ್ಟೊಂದು ಸ್ಥಿರವಾಗಿರದೆ ಬೇರ್ಪಡುವಿಕೆಯು ಸ್ಥಾಪಿತವಾಯಿತೆಂದರೆ, ಅದನ್ನು ಕಳೆದುಕೊಳ್ಳುವ ಭೀತಿ ನುಸುಳುತ್ತದೆ – ಹಲವು ವಿಷಯಗಳಲ್ಲಿ ಒಂದು ಆರೋಗ್ಯವಾದ ಪ್ರವೃತ್ತಿ, ಆದರೆ ದೇವರ ವಿಷಯದಲ್ಲಿ ತಪ್ಪು ಬಳಕೆ. ದೇವರಲ್ಲಿ ನೀವು ನಿಜವಾಗಿಯೂ ನಿಮ್ಮ ವೈಯಕ್ತಿಕತೆಯನ್ನು ಕಳೆದುಕೊಳ್ಳುವುದಿಲ್ಲ: ನೀವು ನಿಮ್ಮ ಅಹಂಕಾರವನ್ನು ಮಾತ್ರ ಬಿಟ್ಟುಕೊಡುತ್ತೀರಿ ಮತ್ತು ನೈಜ ವ್ಯಕ್ತಿಯಾಗುತ್ತೀರಿ, ಸಾಮಾನ್ಯವಾಗಿ ನಿಮಗಾಗಿ ತೆಗೆದುಕೊಂಡ ಭೌತಿಕ ಪ್ರಜ್ಞೆಯ ನಿರ್ಮಾಣದಂತೆ ತಾತ್ಕಾಲಿಕವಾದ ದೈವೀ ಶಕ್ತಿ. ದೈವೀ ಪ್ರಜ್ಞೆಯ ಒಂದು ಸ್ಪರ್ಶ ಮತ್ತು ಅದರಲ್ಲಿ ನಷ್ಟವಿಲ್ಲದ್ದನ್ನು ನೀವು ತಕ್ಷಣ ನೋಡುತ್ತೀರಿ. ಪ್ರತಿಯಾಗಿ, ದೇಹದ ನೂರು ಸಾವುಗಳನ್ನು ಮತ್ತು ಪ್ರಾಣಿಕ–ಮಾನಸಿಕ ವಿಕಾಸದ ಏರಿಳಿತಗಳನ್ನು ಬದುಕಿರುವ ನಿಜವಾದ ವೈಯಕ್ತಿಕ ಸ್ಥಾಯಿತ್ವವನ್ನು ಹೊಂದುವಿರಿ. ಈ ರೂಪಾಂತರಿಸುವ ಸ್ಪರ್ಶವಿಲ್ಲದೆ ನೀವು ಯಾವಾಗಲೂ ಭಯದ ಸುತ್ತ ಹೋಗುವಿರಿ; ಅದರೊಂದಿಗೆ, ನಿಮ್ಮ ಭೌತಿಕ ಇರುವಿಕೆಯ ವೈಯಕ್ತಿಕತೆಯನ್ನು ಕಳೆದುಕೊಳ್ಳದೆ ಅದನ್ನು ಮೃದು ಮಾಡಿಕೊಳ್ಳುವ ಸಾಮರ್ಥ್ಯವನ್ನು ನಿಧಾನವಾಗಿ ಬೆಳೆಸಿಕೊಳ್ಳುತ್ತೀರಿ. ಈಗಲೂ ಸಹ ಅದು ಸಂಪೂರ್ಣವಾಗಿ ಕಠಿಣವಿಲ್ಲ, ಬೇರೆಯವರ ಸಂತೋಷಗಳಿಗೆ ಮತ್ತು ತೊಂದರೆಗಳಿಗೆ ದುರ್ಬಲ ಪ್ರತಿಕ್ರಿಯೆಗಳಾಗಿ ರೂಪಾಂತರಗೊಳಿಸುವ ಒಂದು ರೀತಿಯ ಅನುಕಂಪದ ಪ್ರಜ್ಞೆಯ ಚಲನೆಗಳನ್ನು ಅದು ಅನುಭವಿಸಲು ಸಾಧ್ಯವಾಗುತ್ತದೆ: ಅದು ನಿಮ್ಮ ಆಂತರಿಕ ಚಲನೆಗಳನ್ನು ಸಹ ವ್ಯಕ್ತಪಡಿಸಲು ಸಮರ್ಥವಾಗಿದೆ – ಮುಖವು ಮನಸ್ಸಿನ ಸೂಚಕ ಮತ್ತು ಕನ್ನಡಿ ಎನ್ನುವುದು ಗೊತ್ತಿರುವ ವಿಷಯ. ಆದರೆ, ದೈವೀ ಪ್ರಜ್ಞೆಯು ಮಾತ್ರ ದೇಹವನ್ನು ಸುಪ್ರಮಾನಸದ ಅಮರತ್ವದ ಎಲ್ಲ ಚಲನೆಗಳನ್ನು ಪ್ರತಿಫಲಿಸಲು ಮತ್ತು ನಿಜವಾದ ಆತ್ಮನ ಅಭಿವ್ಯಕ್ತಿಯಾಗಿರಲು ಸಾಕಷ್ಟು ಸ್ಪಂದಿಸುವಂತೆ ಮಾಡುತ್ತದೆ. ಮತ್ತು ದಿವ್ಯಮಯವಾಗಿರುವುದರಿಂದ ಸಾವು ಮತ್ತು ವಿಘಟನೆಯ ಅವಶ್ಯಕತೆಗಿಂತ ಭೌತಿಕವಾಗಿ ಎತ್ತಕ್ಕೇರುವಂಥ ಪರಮ ವೈಯಕ್ತಿಕತೆಯ ಪರಾಕಾಷ್ಠೆಯನ್ನು ತಲುಪಬಹುದು.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 3/167–169 – ಶ್ರೀಮಾತೆ**

ದಿವ್ಯದಿಂದ ಎಲ್ಲವನ್ನೂ ಮಾಡಬಹುದು, ಹೃದಯ ಮತ್ತು ಸ್ವಭಾವ ಶುದ್ಧವಾಗುವವು, ಆಂತರಿಕ ಪ್ರಜ್ಞೆ ಜಾಗೃತವಾಗುವುದು, ಮುಸುಕುಗಳು ತೆಗೆಯಲ್ಪಡುವವು, ನಮ್ಮನ್ನು ನಾವು ಭರವಸೆ ಮತ್ತು ಆತ್ಮವಿಶ್ವಾಸದಿಂದ ದೈವಕ್ಕೆ ಸಮರ್ಪಿಸಿಕೊಂಡರೆ – ಇದನ್ನು ಒಮ್ಮೆಲೆ ಪೂರ್ಣವಾಗಿ ಮಾಡಲಾಗದಿದ್ದರೂ, ನಾವು ಇದನ್ನು ಹೆಚ್ಚಾಗಿ ಮಾಡಿದರೆ, ಆಂತರಿಕ ಸಹಾಯ ಮತ್ತು ಮಾರ್ಗದರ್ಶನ ಹೆಚ್ಚು ಬರುತ್ತದೆ ಮತ್ತು ದೈವದ ಸಂಪರ್ಕ ಹಾಗೂ ಅನುಭವವು ಒಳಗಡೆ ಬೆಳೆಯುತ್ತದೆ. ಪ್ರಶ್ನಿಸುವ ಮನಸ್ಸು ಕಡಿಮೆ ಕ್ರಿಯಾಶೀಲವಾದರೆ ನಮ್ರತೆ ಮತ್ತು ಶರಣಾಗತರಾಗುವ ಬಯಕೆ ನಿಮ್ಮಲ್ಲಿ ಬೆಳೆಯುತ್ತದೆ, ಇದು ಸಮಗ್ರವಾಗಿ ಸಾಧ್ಯವಾಗಲೇಬೇಕು. ಆಗ ಬೇರೆ ಯಾವುದೇ ಬಲ ಹಾಗೂ ತಪಸ್ಸು ಬೇಕಾಗಿಲ್ಲ, ಇದೊಂದೆ ಸಾಕು.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 29/69 – ಶ್ರೀ ಅರವಿಂದರು**

## ಪೂರ್ಣ ಯೋಗದ ಸೂತ್ರಗಳು

**– ಅನುವಾದ: ಪ್ರೊ. ವೀರಭದ್ರಪ್ಪ ಕೆ., ರಾಯಚೂರು**

### ಬೆಳಕು ಮತ್ತು ಕರೆಗೆ ಪ್ರಾಮಾಣಿಕ ನಿಷ್ಠೆ

ನಾನು ಯಾವಾಗ ದೈವೀ ಕರೆಗೆ ಮತ್ತು ಆತ್ಮದ ಬೆಳಕಿಗೆ ನಿಷ್ಠೆಯಿಂದ ಇರಬೇಕು ಎಂದಾಗ, ನಿಮ್ಮ ಭೂತಕಾಲದ ಬಗ್ಗೆಯಾಗಲಿ ಅಥವಾ ನಿಮ್ಮಿಂದ ಯಾವುದೇ ಲೋಪಗಳಾಗಿವೆಯೆಂದು ಉಲ್ಲೇಖಿಸುತ್ತಿಲ್ಲಾ, ಸಂದಿಗ್ಧದಲ್ಲಿ ಮತ್ತು ದಾಳಿಯ ಸಮಯದಲ್ಲಿ ಅವುಗಳ ಅವಶ್ಯಕತೆ ಎಷ್ಟೆಂದು ಸುಮ್ಮನೆ ಸೂಚಿಸುತ್ತಿದ್ದೇನೆ – ಸತ್ಯದ ಕರೆಯನ್ನು ವಿರೋಧಿಸುವ ಸಲಹೆಗಳು, ತುಡಿತಗಳು ಆಕರ್ಷಣೆಗಳಿಗೆ ನಿರಾಕರಿಸಿ, ಅತ್ಯವಶ್ಯಕವಾದ ಬೆಳಕನ್ನು ಮಾತ್ರ ಗುರುತಿಸುವುದು ಮುಖ್ಯ ಸಂಗತಿಯಾಗಬೇಕು. ಬರುವ ಎಲ್ಲಾ ಸಂದೇಹಗಳಿಗೆ ಮತ್ತು ಖಿನ್ನತೆಗಳಿಗೆ ನಾನು ಹೇಳಬೇಕಾದುದೇನೆಂದರೆ "ನಾನು ದೇವರಿಗೆ ಸೇರಿದ್ದೇನೆ ನಾನು ವಿಫಲವಾಗುವುದಿಲ್ಲಾ"; ಅದರಲ್ಲೂ ಅಶುದ್ಧತೆ ಮತ್ತು ಅಸಮರ್ಥತೆಗಳ ಸಲಹೆಗಳಿಗೆ ಎಂದಿಗೂ ಪಕ್ಕಾಗುವದಿಲ್ಲ.. "ನಾನು ಶ್ರೀ ಅರವಿಂದರು ಮತ್ತು

ಶ್ರೀಮಾತೆಯವರಿಂದ ಆರಿಸಲ್ಪಟ್ಟ ಅಮರತ್ವತೆಯ ಕೂಸು ಎಂದು ಉತ್ತರಿಸುತ್ತೇನೆ. ನಾನು ಅವರಿಗಾಗಿ ಮತ್ತು ನನಗಾಗಿ ಸತ್ಯದಿಂದಿರುತ್ತೇನೆ – ಅಂದಾಗ ಗೆಲುವು ಖಂಡಿತ; ನಾನು ಬಿದ್ದರೂ ಕೂಡ, ನಿಸ್ಸಂದೇಹವಾಗಿ ಮೇಲೇಳುತ್ತೇನೆ" ಬೇರೆ ಮಾರ್ಗ ಮತ್ತು ಬೇರೆ ಆದರ್ಶಗಳನ್ನು ಪಾಲಿಸಲು ಒತ್ತಾಯ ಬಂದಾಗಲೂ ಸಹಿತ, ನಾನು ವಿಶ್ವಾಸ ಹೊಂದಿದ "ಇದೇ ಉನ್ನತವಾದುದ್ದು ಇದೇ ಸತ್ಯವಾದದ್ದು, ಇದೊಂದು ನನ್ನೊಳಗಿರುವ ಆತ್ಮವನ್ನು ತೃಪ್ತಗೊಳಿಸುತ್ತದೆ ಎಂದು ಹೇಳುತ್ತೇನೆ; ಈ ದೈವೀ ಯಾತ್ರೆಯಲ್ಲಿ ಬರುವ ಪರೀಕ್ಷೆ ಮತ್ತು ತೊಂದರೆಗಳನ್ನು ಕೊನೆಯತನಕ ಸಹಿಸಿಕೊಳ್ಳುತ್ತೇನೆ" ಎಂದು ಹೇಳುತ್ತೇನೆ ಬೆಳಕು ಮತ್ತು ಕರೆಗೆ ನಿಷ್ಠೆಯಿಂದ ಇರಬೇಕು ಎಂದು ನಾನು ನಿಮಗೆ ಹೇಳಿದ್ದು ಇದೇ ಅರ್ಥದಲ್ಲಿ.

**ಶ್ರೀಮಾತೆ ಮತ್ತು ಶ್ರೀಅರವಿಂದರಿಗೆ ನಮ್ಮನ್ನು ತೆರೆದುಕೊಳ್ಳುವುದು**

*ಶ್ರೀ ಅರವಿಂದರಿಗೆ ಬರೆಯುವುದು ಅಥವಾ ಶ್ರೀಮಾತೆಯವರಿಗೆ ಬರೆಯುವುದು ಒಂದೇ ತಾನೆ? ಕೆಲವೊಬ್ಬರು ಅವರು ಒಂದೇ ಎಂದು ಹೇಳುತ್ತಾರೆ. ಆದುದರಿಂದ ನಾವು ಶ್ರೀ ಅರವಿಂದರಿಗೆ ಬರೆಯಬೇಕೊ ಅಥವಾ ಶ್ರೀಮಾತೆಯವರಿಗೋ, ನಾವು ಶ್ರೀಮಾತೆಯವರಿಗೆ ನಮ್ಮನ್ನು ತೆರೆದುಕೊಂಡಿದ್ದೇವೆ. ಇದು ಸರಿಯಾಗಿದೆಯೆ?*

ನಾವು ಇಬ್ಬರೂ ಒಂದೇ ಎಂಬುದು ಸತ್ಯ, ಆದರೆ ಅಲ್ಲೊಂದು ಸಂಬಂಧವಿದೆ, ಅದು ಎಲ್ಲರೂ ಶ್ರೀಮಾತೆಯವರಿಗೆ ತಮ್ಮನ್ನು ತೆರೆದಿಟ್ಟುಕೊಳ್ಳಬೇಕೆಂಬ ಅವಶ್ಯಕತೆಯನ್ನು ಸಾರುತ್ತದೆ.

*ಯಾರು ಶ್ರೀ ಅರವಿಂದರಿಗೆ ತಮ್ಮನ್ನು ತೆರೆದುಕೊಂಡಿದ್ದಾರೆಯೊ ಅವರು ಶ್ರೀಮಾತೆಗೆ ತೆರೆದಿಟ್ಟುಕೊಂಡಿಲ್ಲಾ ಎಂದು ಅರ್ಥವಾಗುತ್ತದೆಯೋ? ಯಾರು ಶ್ರೀಮಾತೆಯವರಿಗೆ ತಮ್ಮನ್ನು ತೆರೆದಿಟ್ಟುಕೊಂಟಿದ್ದಾರೆಯೋ ಅವರು ಶ್ರೀಮಾತೆಯವರಿಗೆ ಮಾತ್ರವೇ ತೆರೆದಿಟ್ಟುಕೊಂಡಿದ್ದಾರೆಯಂತಲೋ?*

ಶ್ರೀಮಾತೆಯವರ ಪ್ರಸ್ತಾಪ ಸರಿಯಾಗಿದೆ ಸತ್ಯವಾಗಿದೆ. ಯಾರಾದರು ಶ್ರೀ ಅರವಿಂದರಿಗೆ ತೆರೆದಿಟ್ಟುಕೊಂಡು ಮತ್ತು ಶ್ರೀಮಾತೆಯವರಿಗೆ ಇಲ್ಲವೆಂದರೆ ನಿಜವಾಗಿಯೂ ಶ್ರೀ ಅರವಿಂದರಿಗೆ ತೆರೆದಿಟ್ಟುಕೊಂಡಿಲ್ಲವೆಂದು ಅರ್ಥ.

*ಅನೇಕ ಸಲ ಶ್ರೀ ಅರವಿಂದರು ಶ್ರೀಮಾತೆಯ ಶಕ್ತಿಯ ಪ್ರಭಾವ ಕೆಲಸ ಮಾಡಲು ಬಿಡಿ ಎಂದು ಹೇಳುವರು. ಇದರರ್ಥ ಅವೆರಡರ ಶಕ್ತಿಗಳ ಮಧ್ಯ ವ್ಯತ್ಯಾಸಗಳಿವೆಯೆ?*

– ಅಲ್ಲಿ ಒಂದೇ ಶಕ್ತಿ ಇದೆ, ಶ್ರೀಮಾತೆಯವರ ಶಕ್ತಿ – ಅಥವಾ, ನೀವು ಈ ರೀತಿ ಹೇಳಬಯಸಿದರೆ, ಶ್ರೀಮಾತೆ ಎಂದರೆ ಶ್ರೀ ಅರವಿಂದರ ಶಕ್ತಿ.

*ಕೆಲವರು ನನಗೆ ಹೇಳಿದ್ದರು; "ನಾನು ಇಲ್ಲಿಗೆ ಬಂದಾಗ, ಶ್ರೀ ಅರವಿಂದರು ಯೋಗದ ಬಗ್ಗೆ ಏನೂ ಬೋಧನೆ ಮಾಡಲಿಲ್ಲಾ, ನೀವು ನಿಮ್ಮಿಂದ ಆದ ರೀತಿಯಲ್ಲಿ ನಿಮ್ಮ ಜ್ಞಾನದಂತೆ ಪಾಲಿಸಿರಿ ಎಂದು ಅವರು ಹೇಳಿದ್ದರು" ಅದು ಹಾಗೆಯೇ ಏನು?*

ನನಗದರ ಬಗ್ಗೆ ಅರಿವಿಲ್ಲಾ. ಆದರೆ ಈಗಲೂ ಶ್ರೀಮಾತೆಯವರು ಬೋಧನೆ ಮಾಡುವುದಿಲ್ಲಾ, ಅವರು ಎಲ್ಲರಿಗೂ ನಿಮ್ಮನ್ನು ತೆರೆದಿಟ್ಟುಕೊಳ್ಳಿ ಮತ್ತು ಪಡೆಯಿರಿ ಎನ್ನುತ್ತಾರೆ. ಆದರೆ ಆಕೆ ಅವರಿಗೆ ಬೋಧನೆ ಮಾಡುವುದಿಲ್ಲಾ ಮತ್ತು ನಾನು ಆಲೋಚಿಸಿದಂತೆ, ಜನರಿಗೆ ನಿಮ್ಮದೇ ಜ್ಞಾನವನ್ನು ಪಾಲಿಸಿರಿ ಎಂದು ಹೇಳಿಲ್ಲಾ."

**ಅವರ ಪ್ರಭಾವವನ್ನು ಸ್ವೀಕರಿಸುವುದು**

ಅವರ ಪ್ರಭಾವವನ್ನು ಸ್ವೀಕರಿಸುವುದು ಆಧ್ಯಾತ್ಮಕದ ಹಾದಿಯಲ್ಲಿ ಒಂದು ನಂಬಿಕೆಯಾಗಿದೆ, ಹೌದು ಅದೊಂದು ಸಂಪೂರ್ಣ ನಂಬಿಕೆ, ಒಂದು ಸಂಕಲ್ಪ ಮತ್ತು ಪ್ರಭಾವಕ್ಕೆ ತೆರೆದುಕೊಳ್ಳುವ ಸಮರ್ಥತೆ ಬಿಟ್ಟರೆ, ಶ್ರೀ ಅರವಿಂದರ ಮತ್ತು ಶ್ರೀಮಾತೆಯವರ ಪ್ರಭಾವ ಸ್ವೀಕರಿಸಲು ಬೇರೆ ಯಾವುದೇ ಷರತ್ತುಗಳಿಲ್ಲಾ; ಆದರೆ ಈ ಸಮರ್ಥತೆ ಪ್ರಾಮಾಣಿಕತೆ ಮತ್ತು ನಂಬಿಕೆಯ ಫಲವಾಗಿ ಬರುತ್ತದೆ.

ಆಶ್ರಯದ ಹೊರಗೆ ಇದ್ದು ಈ ಯೋಗವನ್ನು ಅನುಸರಿಸಲು ಸಾಕಷ್ಟು ಸಾಧ್ಯತೆಯಿದೆ. ಸಾಕಷ್ಟು ಜನ ಉತ್ತರ ಮತ್ತು ದಕ್ಷಿಣ ಭಾರತೀಯರು ಇದೇ ರೀತಿ ಮಾಡುತ್ತಾರೆ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 32/104–06 – ಶ್ರೀ ಅರವಿಂದರು**

ನೀವು ಅಭೀಪ್ಸೆಯನ್ನು ಮಾತ್ರ ಪಡೆಯಬೇಕು. ನೀವು ಶ್ರೀಮಾತೆಯವರಿಗೆ ನಿಮ್ಮನ್ನು ತೆರೆದಿಟ್ಟುಕೊಂಡಿರಬೇಕು, ಆಕೆಯ ಸಂಕಲ್ಪಕ್ಕೆ ವಿರುದ್ಧವಾದುದನ್ನು ತಿರಸ್ಕರಿಸಬೇಕು. – ನೀವು ನಿಮ್ಮ ಕೆಲಸಗಳನ್ನು ಆಕೆಗೋಸ್ಕರವೇ ಮಾಡಬೇಕು ಮತ್ತು ಆಕೆಯ ಶಕ್ತಿಯ ಮೂಲಕ ನೀವು ಕೆಲಸ ಮಾಡುತ್ತಿರುವರೆಂಬ ನಂಬಿಕೆಯಿರಬೇಕು. ನೀವು ಈ ರೀತಿಯಾಗಿ ನಿಮ್ಮನ್ನು ತೆರೆದಿಟ್ಟುಕೊಂಡರೆ ಮಾತ್ರ ಜ್ಞಾನ ಮತ್ತು ಅರಿವು ಕಾಲಾಂತರದಲ್ಲಿ ಬರುತ್ತದೆ.

*

ಸರಿಯಾದ ಶರಣಾಗತಿಯ ನಿಲುವಿನಿಂದ ಶ್ರೀಮಾತೆಯವರಿಗೆ ನಿಮ್ಮನ್ನು ತೆರೆದಿಟ್ಟುಕೊಳ್ಳಿ ಮತ್ತು ನಿಮ್ಮ ಅಂತರಂಗಕ್ಕೆ ಬೇಕಾದುದನ್ನೆಲ್ಲಾ ಆಕೆಯಿಂದ ನಿಧಾನವಾಗಿ ಪಡೆದುಕೊಳ್ಳುವಿರಿ. ನಿಮ್ಮ ಅಂತರಂಗವನ್ನು ಶ್ರೀಮಾತೆಯವರಿಗೆ ತೆರೆದಿಟ್ಟುಕೊಳ್ಳಿ, ಕೆಲಸ ಅಥವಾ ಸಾಧನೆ ಮಾಡಲು ಹಂತ ಹಂತವಾಗಿ ಅವಶ್ಯಕತೆಯಿದ್ದದ್ದು ವಿಕಸಿತವಾಗುತ್ತದೆ, ಅದೊಂದು ಸಾಧನೆಯ ಪ್ರಮುಖವಾದ ರಹಸ್ಯ ನಿಮ್ಮಲ್ಲಿನ ಯಾವುದೇ ಭಾಗವು ತೆರೆದಿರದೆ ಇರಬಹುದು, ಆದರೆ ನೀವು ವಿಶಾಲವಾಗಿ ನಿಮ್ಮನ್ನು ತೆರೆದುಕೊಂಡಾಗ ಪಡೆಯುವುದು ಹೆಚ್ಚು ಸಂಪೂರ್ಣವಾಗುತ್ತದೆ, ನೀವು ಶ್ರೀಮಾತೆಯವರನ್ನು ನೆನೆಯುತ್ತಾ ಅವರ ಶಕ್ತಿಯನ್ನು ಕರೆಯಬೇಕು. ಆಗ ನಿಧಾನವಾಗಿ ನಿಮ್ಮಲ್ಲಿ ಪ್ರಗತಿಯಾಗುತ್ತದೆ. ನೀವು ವಿಶ್ವಾಸದಿಂದರಬೇಕು, ಎಚ್ಚರವಾಗಿರಬೇಕು ಮತ್ತು ಸಮರ್ಪಣೆಯಿಂದಿರಬೇಕು, ನೀವು ಹಾಗೇ ಇರುವಿರಿ ಮತ್ತು ಇರಬೇಕು ಕೂಡ.

*

ನಿಮ್ಮ ಪತ್ರಕ್ಕೆ ಉತ್ತರವಾಗಿ ಶ್ರೀ ಅರವಿಂದರು ಹೇಳುತ್ತಾರೆ ನೀವು ಶ್ರೀಮಾತೆಯವರನ್ನು ಹೃದಯದಿಂದ ಧ್ಯಾನಿಸುತ್ತಾ ಅವರನ್ನು ಕರೆಯಬೇಕು – ಅವರನ್ನು ನೆನಪಿಸಬೇಕು ಮತ್ತು ಸಮರ್ಪಿಸಿಕೊಳ್ಳಬೇಕು ಅಥವಾ ನಿಮ್ಮ ಆಲೋಚನೆಗಳನ್ನು ಮತ್ತು ಕ್ರಿಯೆಗಳನ್ನು ಅರ್ಪಿಸಬೇಕು. ನೀವು ಬಯಸಿದರೆ ಅವರ ಹೆಸರ ಮೇಲೆ ಜಪ ಮಾಡಬಹುದು. ನೀವು ನಿಮ್ಮ ಸತ್ತೆಯನ್ನು ಶುದ್ಧಗೊಳಿಸಲು ಅವರನ್ನು ಕರೆಯಬೇಕು ಮತ್ತು ನಿಮ್ಮ ಪ್ರಕೃತಿಯನ್ನು ಬದಲಾಯಿಸಿಕೊಳ್ಳಬಹುದು. ನೀವು ಏಕಾಗ್ರತೆಯಿಂದ ನಿಮ್ಮ ಮೇಲಿರುವ

(ಯಾವಾಗಲೂ ಅಲ್ಲೆ ಇರುತ್ತದೆ) ಆಕೆಯ ನಿಶ್ಚಲ ಮತ್ತು ಶಾಂತತೆಯನ್ನು ಮೊದಲು ಅವತರಣಗೊಳ್ಳಲು ಕರೆಯಿರಿ. ಅದು ಯಾವಾಗಲೂ ತಲೆಯ ಮೇಲೆಯೇ ಇರುತ್ತದೆ – ಆದರೆ ಮನುಷ್ಯನ ಮನಸ್ಸಿಗೆ ಅತಿಚೇತನವಾಗಿರುತ್ತದೆ. ಅಭೀಪ್ಸೆಯಿಂದ ಮತ್ತು ಏಕಾಗ್ರತೆಯಿಂದ ಅದು ಪ್ರಜ್ಞೆಗೆ ಬರುತ್ತದೆ ಮತ್ತು ಆ ಆಧಾರವು ಅದಕ್ಕೆ ತೆರೆದುಕೊಂಡಾಗ ಅದು ಅವರೋಹಣವಾಗಿ, ಮನಸ್ಸಿನಲ್ಲಿ, ಪ್ರಾಣದಲ್ಲಿ ಮತ್ತು ದೇಹದಲ್ಲಿ ಪ್ರವೇಶಿಸುತ್ತದೆ. ಸಮರ್ಪಿಸಬೇಕು ಅಥವಾ ನಿಮ್ಮ ಜೀವನ, ಆಲೋಚನೆಗಳನ್ನು ಮತ್ತು ಕ್ರಿಯೆಗಳನ್ನು ಅರ್ಪಿಸಬೇಕು, ಆಕೆಯ ನಿಶ್ಚಲ ಮತ್ತು ಶಾಂತತೆಯನ್ನು ಮೊದಲು ಕೆಳಗೆ ಕರೆಯಿರಿ, ನಂತರ ಆಕೆಯ ಶಕ್ತಿ, ಬೇಳಕು ಮತ್ತು ಆಕೆಯ ಆನಂದವನ್ನು ಕರೆಯಿರಿ. ಅದು ಯಾವಾಗಲೂ ತಲೆಯ ಮೇಲೆಯೇ ಇರುತ್ತದೆ – ಅದಕ್ಕಾಗಿ ಮುಕ್ತವಾಗಿರಬೇಕು ಮತ್ತು ಶ್ರೀಮಾತೆಗೆ ಎಲ್ಲವನ್ನೂ ಬಿಚ್ಚುಮನಸ್ಸಿನಿಂದ ತೋರಿಸಬೇಕು. ಅದು ನಿಮ್ಮನ್ನು ಸಂಪೂರ್ಣವಾಗಿ ತೆರೆದಿಟ್ಟುಕೊಳ್ಳುವುದಕ್ಕೆ ಸಹಾಯ ಮಾಡುತ್ತದೆ ಮತ್ತು ಆಕೆಯೂ ಸಹಿತ ನಿಮಗೆ ಸಂಪೂರ್ಣವಾಗಿ ಸಹಾಯ ಮಾಡಲು ಅನುಕೂಲವಾಗುತ್ತದೆ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 32/26 – ಶ್ರೀ ಅರವಿಂದರು**

ನಿಮಗೆ ಧ್ಯಾನ ಮಾಡಲಾಗದಿದ್ದರೆ, ಪ್ರಾರ್ಥಿಸಿ. ನೀವು ಮಾಡುವುದೆಲ್ಲವನ್ನೂ ಶ್ರೀಮಾತೆಗೆ ಅರ್ಪಿಸಿ. ನಿಮ್ಮ ಕ್ರಿಯೆಗಳನ್ನು ಮತ್ತು ನಿಮ್ಮ ಪ್ರಕೃತಿಯನ್ನು ತನ್ನ ಸ್ವಾಧೀನಕ್ಕೆ ತೆಗೆದುಕೊಳ್ಳುವಂತೆ ಪ್ರಾರ್ಥಿಸಿ, ಪ್ರೀತಿಸಿ ಮತ್ತು ಪೂಜಿಸಿ. ಇಲ್ಲಿ ನಿಮಗೆ ಸಂಪೂರ್ಣವಾದ ತೆರೆಯುವಿಕೆ ಬೇಕಾಗಿದೆ, ಆಗ ಮಾತ್ರ ಶ್ರೀಮಾತೆಯ ಪ್ರಜ್ಞೆಯಲ್ಲಿ ಬರುವಿರಿ. ಇವೆಲ್ಲವೂ ನಿಮ್ಮಲ್ಲಿ ತೆರೆಯುವಿಕೆಯನ್ನು ತರುತ್ತವೆ. ಸುಮ್ಮನೆ, ಸಮಯ ತೆಗೆದುಕೊಂಡರೂ ಸಹಿತ, ನೀವು ಖಿನ್ನತೆಗೊಳಗಾಗಬಾರದು, ಹತಾಶೆ ಅಥವಾ ವಿರೋಧ ಮಾಡಬಾರದು – ಇವೆಲ್ಲವೂ ತೆರೆದುಕೊಳ್ಳುವ ಹಾದಿಯಲ್ಲಿ ಅಡ್ಡಿಯನ್ನು ತರುತ್ತವೆ.

*

ಇಡೀ ವಿಷಯವೇನೆಂದರೆ ನಿಮ್ಮನ್ನು ಶ್ರೀಮಾತೆಯವರಿಗೆ ತೆರೆದಿಟ್ಟುಕೊಳ್ಳುವುದೇ ಆಗಿದೆ. ಪ್ರಕೃತಿಯು ನಿರ್ಣಾಯಕ ಅನುಭವಕ್ಕಾಗಿನ ತಯಾರಿಗಾಗಿ ಯಾವಾಗಲೂ

ಸಮಯವನ್ನು ತೆಗೆದುಕೊಳ್ಳುತ್ತದೆ ಮತ್ತು ತಕ್ಷಣದ ಪರಿಣಾಮಕ್ಕಾಗಿ ತಾಳ್ಮೆಗೆಡದೆ ನಿರುತ್ಸಾಹಗೊಳ್ಳದೆ ನಿರಂತರವಾಗಿ ಸ್ವಯಂ–ನಿಮ್ಮನ್ನು ನೀವು ತೆರೆದಿಟ್ಟುಕೊಳ್ಳಬೇಕು. ಶ್ರೀಮಾತೆಯವರಲ್ಲಿ ವಿಶ್ವಾಸವಿರಬೇಕು, ನಂತರ ಆಕೆಗೆ ಸಂಪೂರ್ಣವಾಗಿ ತೆರೆದಿಟ್ಟುಕೊಳ್ಳುವಿಕೆಯೇ ಉತ್ತಮವಾದ ಮಾರ್ಗ.

*

ಓ ಮಾತೆ, ನೀನು ಎಲ್ಲಿಯತನಕ ನನ್ನಿಂದ ಹೊರಗಿರುವೆ? ನಾನು ನಿನ್ನ ಮಗುವಲ್ಲವೆ? ಶ್ರೀಮಾತೆ ನಿನ್ನಿಂದ ಎಂದಿಗೂ ದೂರವಿರುವುದಿಲ್ಲಾ. ನೀನು ಆಕೆಗೆ ತೆರೆದಿಟ್ಟುಕೊಂಡರೆ, ನಿನ್ನಲ್ಲೇ ಇರುವಳೆಂಬ ಸಂವೇದನೆಯು ಯಾವಾಗಲೂ ನನಗಾಗುತ್ತದೆ. ನನ್ನ ಪ್ರೀತಿಯ ಮಾತೆಯೇ, ನಿನ್ನಲ್ಲೇ ಇರಲು ಅವಕಾಶ ಕೊಡು.

*

ಶ್ರೀಮಾತೆಯವರ ಶಾಂತತೆ ಮತ್ತು ಆನಂದಕ್ಕೆ ತೆರೆದುಕೊಳ್ಳಿರಿ – ಅದರೊಂದಿಗೆ ಜೀವಿಸುವುದರಿಂದ ನೀವು ಅವರಲ್ಲಿ ಇರಲು ಬರುತ್ತದೆ. ಅಂತರಾತ್ಮದ ಕೇಂದ್ರವನ್ನು ನೇರವಾಗಿ ತೆರೆದುಕೊಳ್ಳವದು ಸುಲಭ, ಆದರೆ ಅಹಂಭಾವ ಕೇಂದ್ರವು ಹೆಚ್ಚು ಕಡಿಮೆಯಾದಾಗ ಮಾತ್ರ ಇದು ಸಾಧ್ಯ ಮತ್ತು ಅದಕ್ಕಾಗಿ ಶ್ರೀಮಾತೆಯವರಲ್ಲಿ ಸದೃಢ ಭಕ್ತಿ ಇರಬೇಕು.

ಆಧ್ಯಾತ್ಮದ ನಮ್ರತೆ ಮತ್ತು ಶರಣಾಗತಿಯ ಭಾವ ಮತ್ತು ಅವಲಂಬನೆಯ ಅವಶ್ಯಕತೆ ಇರಬೇಕು.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 32/154, 163 – ಶ್ರೀ ಅರವಿಂದರು**

## ಶ್ರೀ ಅರವಿಂದರ
## 'ತಾಂತ್ರಿಕಸಿದ್ಧಿ ಪ್ರಕರಣಂ'

**– ಅನುವಾದ: ಪುಟ್ಟು ಕುಲಕರ್ಣಿ**

### ತಸ್ಮಿನ್ಸ್ಚ ಶಕ್ತಿಪ್ರಕರಣಂ–3

**ದ್ವಿವಿಧೋಪಾಸನಾ ಸಾಹಮಿತಿ ಸಾ ಪ್ರಕೃತಿರಹಂ ಪುರುಷ ಇತಿ ಏತೆ ದ್ವೇ ಪೂರ್ಣೋ ಖಂಡೋಪಾಸನಾಪ್ಯಸ್ತಿ ಭೇದಪ್ರಧಾನಾಂ ಸಾವಿದ್ಯೋಪಾಸನಾ ನ ಪ್ರವರಾ ॥ 2 ॥**

**"ದ್ವಿವಿಧದಲ್ಲಿ ಉಪಾಸನೆ ಇದೆ. ಪ್ರಕೃತಿ ಮತ್ತು ಪುರುಷ ಎಂದು ಆರಾಧಿಸಲಾಗುತ್ತಿದೆ. ಆದರೆ ಅವೆರಡೂ ಪೂರ್ಣವೇ ಆಗಿದೆ. ಈ ರೀತಿಯಾಗಿ ಖಂಡ ಸ್ವರೂಪದಲ್ಲಿ (ಬೇರೆ ಬೇರೆಯಾಗಿ) ಭೇದ ಪ್ರಧಾನದಲ್ಲಿ ರೂಪಿತಗೊಂಡಿರುವ ಇದು ವಿದ್ಯೋಪಾಸನೆಯೂ ಆಗಿದೆ, ಜೊತೆಗೆ ಅವಿದ್ಯೋಪಾಸನೆಯ ಪಥವೂ ಇದೆ. ಆದರೆ ಅವಿದ್ಯೋಪಾಸನೆಯ 'ಪ್ರವರ'ಗಳು (ಬಹುತೇಕವಾಗಿ) ಇಲ್ಲ" ಎನ್ನುವದು ಈ ಮಂತ್ರದ ಮೂಲಕ ಮೇಲ್ನೋಟಕ್ಕೆ ತೋರಿ ಬರುವ ಭಾವವಾಗಿದೆ.**

ಇಲ್ಲಿ ದ್ವಿವಿಧ ಉಪಾಸನೆ, ಪ್ರಕೃತಿ ಸ್ವರೂಪ, ಪುರುಷ ಸ್ವರೂಪ, ಇವೆರಡರ ಆದ್ಯಂತವೂ ಪೂರ್ಣವಾಗಿದೆ, ಆದರೂ ಖಂಡೋಪಾಸನೆ ಇದೆ. ವಿದ್ಯಾ–ಅವಿದ್ಯಾ ಸ್ವರೂಪದ ಆಯಾಮಗಳನ್ನು ನಾವು ಮನನ ಮಾಡಿಕೊಳ್ಳಬೇಕಿದೆ. ಸಾಕಾರ ಮತ್ತು ನಿರಾಕಾರದ ಸ್ವರೂಪದಲ್ಲಿಯೂ ಆರಾಧನಾ ವಿಧಾನಗಳಿವೆ.

ಇಲ್ಲಿ ಮೇಲ್ನೋಟಕ್ಕೆ ವಿಭಿನ್ನ ಸ್ವರೂಪದಲ್ಲಿ ಇದ್ದಂತೆ ಕಂಡರೂ, ಅದು ವಿಕಸನದ ನಿಯತಿಯೂ ಆಗಿರುವದರಿಂದ, ಆಯಾ ಸ್ವರೂಪದಲ್ಲಿ ಅಭಿವ್ಯಕ್ತ–ಗೊಳ್ಳುವ ಸ್ವರೂಪಗಳ ಹಿಂದೆ ಏಕೈಕವಾಗಿರುವ ವೈಶ್ವಿಕ ಸತ್ಯ ಅಥವಾ ಋತವೇ ಆಧಾರವಾಗಿದೆ. ಎರಡು ಸ್ವರೂಪದಲ್ಲಿದ್ದರೂ ಎರಡೂ ಪೂರ್ಣವೇ ಆಗಿವೆ; ಎರಡೂ ಪೂರ್ಣದ ಸ್ವರೂಪವೇ ಆಗಿ ಅಂಶಾಂಶದಲ್ಲಿ ಪ್ರಕಟಗೊಂಡಿರುತ್ತವೆ.

ಪ್ರಕೃತಿ ತತ್ತ್ವವನ್ನು ಶ್ರೀಮಾತೆಯ ವಿಶ್ವಮಾತೆಯ ಸ್ವರೂಪದಲ್ಲಿ, ವಿಶ್ವದ ಚೇತನಾ ಶಕ್ತಿಯಾಗಿ ಇರುದರಿಂದ ಈ ತತ್ತ್ವದ ಹಿನ್ನೆಲೆಯಲ್ಲಿ ಪ್ರಕಟಗೊಂಡ 'ಜಗತ್ತು' ಆ ಚೇತನದ ಆಕಾರವೇ ಆಗಿರುವದರಿಂದ, 'ಜಗನ್ಮಾತೆ' ಎಂದೇ ಆರಾಧಿಸಲಾಗುತ್ತಿದೆ. ಹಾಗಾದರೆ ಈ ಖಂಡ ಸ್ವರೂಪದಲ್ಲಿ ಇರುವ ಆರಾಧನಾ ಪದ್ಧತಿಯ ಆಂತರ್ಯವಾದರೂ ಏನು? ಚೇತನವು ನಿರಾಕಾರವಾಗಿದ್ದಾಗ

ಇರುವ ಶಕ್ತಿ ತತ್ತ್ವವು, ಅದು ಜಡ ಸ್ವರೂಪದಲ್ಲಿ ಅಭಿವ್ಯಕ್ತಗೊಂಡಾಗ ಅಲ್ಲಿ ಈ ಚೇತನವು ಹುದುಗಿದಂತಿದ್ದು, ಮೇಲ್ನೋಟಕ್ಕೆ 'ಜಡ'ದಂತೆ ಭಾಸವಾಗುತ್ತದೆ. ಜಡದ ಒಡಲಿನಲ್ಲಿಯೂ ಸಹಿತ ಚೇತನವು ಸುಪ್ತಾವಸ್ಥೆಯಲ್ಲಿದೆ. ಈ ಜಡವು ಪ್ರಕೃತಿಯ ಕೃಪೆ ಇಲ್ಲದೇ ಪ್ರಗತಿ ಹೊಂದಲಾರದು. ಚೇತನಕ್ಕೂ ಸಹಿತ ತನ್ನ ಶಕ್ತಿಯನ್ನು ಪ್ರಕಟಪಡಿಸಿ ಆನಂದಿಸುವ ಅಭೀಪ್ಸೆ ಇರುತ್ತದೆಯೇ ಎಂದು ಪ್ರಶ್ನೆ ಉದ್ಭವಿಸುತ್ತದೆ. ತನ್ನಲ್ಲಿರುವ ಅಪರಿಮಿತ ಶಕ್ತಿಯ ಬಗೆಗೆ, ಸೃಷ್ಟಿ–ಸ್ಥಿತಿ–ಲಯಗಳ ವಿನ್ಯಾಸಗಳ ಬಗೆಗೆ ನಿಖರವಾದ ವಿನ್ಯಾಸವನ್ನು ನಿಯತಿಯ ಪ್ರಕಾರವಾಗಿಯೇ ಹೊಂದಿರುವ 'ಆದಿಶಕ್ತಿಯು', ತನಗೆ ತಾನೇ ತಂತ್ರಗಳನ್ನು ರೂಪಿಸಿಕೊಂಡು – ಸ್ವತಂತ್ರಾ – ಎಂದೇ ಆರಾಧಿಸಲ್ಪಡುತ್ತಾಳೆ. ಆದರೆ 'ಪುರುಷ' ಸ್ವರೂಪದ ಜಡವು ಜಡದಂತೆ ಕಂಡರೂ, ಕ್ರಿಯಾಶಕ್ತಿ ಜಾಗ್ರತವಾಗದ ಹಂತದಲ್ಲಿ ಸ್ಥಿತಗೊಂಡಿರುತ್ತದೆ. ಈ ರೀತಿಯ ಕ್ರಿಯಾ ಪ್ರವೃತ್ತಿಯನ್ನು ಜಾಗ್ರತಗೊಳಿಸಲೆಂದೇ ಪ್ರಕೃತಿಯ ಕೃಪೆಯನ್ನು ಆಶಿಸುವ ಹಂತದಲ್ಲಿ ಈ ಹಂತವಿರುತ್ತದೆ.

ಜಡ ಮತ್ತು ಚೇತನಗಳೆರಡೂ ಬ್ರಹ್ಮಾಂಡದ ಆಯಾಮಗಳು. ಜಡಕ್ಕೆ ಆಕಾರವಿದೆ; ಚೇತನ ನಿರಾಕಾರ. ಇವೆರಡರ ಸಂಗಮವೇ 'ಅವಕಾಶ'ವಿದ್ದರೂ, ಜಗತ್ತಿನ ಸ್ವರೂಪ ಮಾತ್ರ ಈ ಅನಂತಾನಂತ ಅವಕಾಶದಲ್ಲಿ ಕೇವಲ ಅತ್ಯಲ್ಪ ಎನ್ನುವ ಮಟ್ಟಿಗೆ ಸಾಕಾರವನ್ನು ಹೊಂದಿದೆ. ಹಾಗಾದರೆ ಈ ಅನಂತಾನಂತದ ಅವಕಾಶದಲ್ಲಿ, ಈ ರೀತಿಯ ಸಾಕಾರರೂಪಿ ಅಭಿವ್ಯಕ್ತಿಗಳಿಗೆ 'ಕಾಲದ ಬಂಧನ' ಹಾಗೂ 'ಅವಕಾಶದಲ್ಲಿ ನಿಗದಿತವಾದ ಆವರಣದ ಚೌಕಟ್ಟು' ಸೃಷ್ಟಿಗೊಳ್ಳುವ ರಹಸ್ಯವಾದರೂ ಏನು? ಒಂದು ಅಪರಿಮಿತ ಚೇತನದ ಕಾಯದೊಂದಿಗೆ ಸಂಪರ್ಕಕ್ಕಾಗಿ ಸದಾ ಒಂದು ನಿಗದಿತ ದೂರವನ್ನು ಕಾಯ್ದುಕೊಂಡು, ನಿರಂತರ ಪರಿವರ್ತನಾಶೀಲ ಪಥದಲ್ಲಿ ಸಾಗುವದೇ ಈ 'ಜಡದ' ಅಥವಾ 'ಪುರುಷ ಸ್ವರೂಪದ' ಗುಣವಿಶೇಷವೇ? ಈ ಜಡವು ಚೇತನವನ್ನು ಆಂತರ್ಯದಲ್ಲಿ ಇಟ್ಟುಕೊಂಡೂ ಜಡದ ಸ್ವರೂಪದಲ್ಲಿಯೇ ಚಲನಶೀಲವಾಗುವದೇ ಬ್ರಹ್ಮಾಂಡದ ವಿಕಾಸನಾ ಪಥವಾಗಿದೆಯೇ? ಇದೆಲ್ಲವನ್ನೂ ನಿಯಂತ್ರಿಸುವ "ಶಕ್ತಿ" ಮಾತ್ರ ನಿರಾಕಾರವಾಗಿ, ಅವಕಾಶವೇ ಆಗಿ, ತನ್ನಿಂದಲೇ ಸೃಷ್ಟಿಗೊಂಡಿರುವ ಈ 'ಜಗತ್ತನ್ನು' ಪರಿಪಕ್ವಗೊಳಿಸಲುವ ಸಲುವಾಗಿ, ಪರಿಪೂರ್ಣತೆಯನ್ನು ಪಡೆದುಕೊಳ್ಳುವ ಸಲುವಾಗಿ, ಈ ಲೀಲೆಗಳನ್ನು ಪ್ರಕಟಪಡಿಸುತ್ತಿದ್ದಾಳೆಯೇ?

ಈ ರೀತಿಯ ದ್ವಿವಿಧೋಪಾಸನೆಯು ಮೊದಮೊದಲು ತತ್ತ್ವಪ್ರಧಾನವೇ ಆಗಿದ್ದು, ಕ್ರಮೇಣ ಸಾಕಾರರೂಪಿಯಾಗಿ ಶಕ್ತಿ ಮತ್ತು ಶಿವ ಸ್ವರೂಪದಲ್ಲಿ – ಪ್ರಕೃತಿ ಮತ್ತು ಪುರುಷ – ಹಂತದಲ್ಲಿ ಆರಾಧನೆಗಳು ರೂಪಿತಗೊಳ್ಳುತ್ತಿದ್ದಂತೆಯೇ, ಇವೆರಡೂ ಜಗತ್ತಿನ ಸ್ಥಿತಿಗೆ ಅಗತ್ಯವಾಗಿಯೇ ಇರುವದರಿಂದ, ಆಯಾ ಸ್ವರೂಪದಲ್ಲಿಯೇ ಉಪಾಸನಾ ವಿಧಾನಗಳು ವಿಕಾಸಗೊಳ್ಳತೊಡಗಿದವು. ಏನೇ ಬದಲಾವಣೆಯಾದರೂ ಮೊದಲು ಪ್ರಕೃತಿ ಅಥವಾ ಶಕ್ತಿ ಅಥವಾ ಚೇತನ ಎನ್ನುವದು ಆಧಾರವಾಗಿಯೇ ಬಂದಿದೆ. ಇದರಿಂದ ಈ ಶಕ್ತಿ ತತ್ತ್ವದ ಪಥದಲ್ಲಿ ಭಕ್ತಿ–ಜ್ಞಾನ–ಸಮರ್ಪಣೆ–ಕರ್ಮ ಮುಂತಾದವುಗಳ ಆಯಾಮಗಳು ರೂಪುಗೊಂಡವು. ಇವೆಲ್ಲ ಆಯಾಮಗಳಿಗೆ ಒಂದು ಸ್ವರೂಪವನ್ನು ಕೊಡಲೆಂದೇ 'ಜಡ' ಅಥವಾ 'ಪುರುಷ' ಸ್ವರೂಪದ ತತ್ತ್ವವು ಸದಾ ಸಿದ್ಧವಾಗಿರುತ್ತದೆ.

ಇದು ಭೇದ ಪ್ರಧಾನದಲ್ಲಿ ರೂಪಿತಗೊಂಡ 'ವಿದ್ಯೋಪಾಸನೆ'ಯಾಗಿದೆ. ಇಲ್ಲಿ ವಿದ್ಯೆ ಎನ್ನುವದು ಸಂಪೂರ್ಣವಾಗಿ ಚೇತನ ಶಕ್ತಿಯ ಕುರಿತೇ ಇರುವ ಅಂಶಗಳು. ಹೀಗಾಗಿ ವಿದ್ಯೆಯ ಪಥವು ಅಮೃತತತ್ತ್ವದೆಡೆಗೆ ಕರೆದೊಯ್ಯುತ್ತದೆ ಎನ್ನುವದು ವಿಶ್ವಾಸವಾಗಿದೆ. ಚೇತನಾ ಸ್ವರೂಪದ ಯಾವುದೇ ಆಯಾಮದ ಅಧ್ಯಯನ–ಆರಾಧನೆ–ಈಕ್ಷಣೆ–ಉಪಾಸನೆ–ಅನುಸಂಧಾನ–ಸಾಕ್ಷಾತ್ಕಾರ ಎಲ್ಲವೂ ಈ ಪಥದಲ್ಲಿ ಖಚಿತದಷ್ಟೇ ಸುಸ್ಪಷ್ಟವಾಗಿದೆ. ಹೀಗಾಗಿಯೇ ಶ್ರೀಮಾತೆಯನ್ನು 'ವಿಶ್ವರೂಪಾ ಜಾಗರಣೀ' ಎಂದು ಲಲಿತಾ ಸಹಸ್ರನಾಮವೂ ವಿವರಿಸುತ್ತದೆ. ಜಾಗ್ರದವಸ್ಥೆಯಲ್ಲಿ ವಿಶ್ವರೂಪವಾಗಿರುವವಳು – ಜಗತ್ತಿನ ಸ್ವರೂಪವಾಗಿರುವವಳು – ಎಂದು ವರ್ಣಿಸಿದೆ. 'ಸರ್ವಂಖಲ್ವಿದಮೇವಾಹಂ ನಾನ್ಯದಸ್ತಿ ಸನಾತನ' ಎಂದು ದೇವಿ ಭಾಗವತವು ಇದರ ವಿವರಗಳನ್ನು ರೂಪಿಸಿದೆ. ಅಂದರೆ ಜಾಗ್ರದವಸ್ಥೆಯಲ್ಲಿರುವ ಜೀವನಿಗೆ 'ವಿಶ್ವ' ಎಂದೇ ಕರೆಯಲಾಗುತ್ತಿದೆ. ಅದೇ ರೀತಿ ಸಮಷ್ಟಿರೂಪವಾದ ಜೀವರಿಗೆ "ವೈಶ್ವಾನರ" ಎಂದು ಕರೆಯಲಾಗುತ್ತಿದೆ. ಹೀಗಾಗಿ ದೇವಿಯು ವಿಶ್ವ–ವೈಶ್ವಾನರ ರೂಪದಿಂದ ಸ್ಥಿತಳಿರುವಳು. ಸ್ಥೂಲ ಶರೀರಾಭಿಮಾನಿಯೂ ವಿಶ್ವ ಎನ್ನುವ ಹೆಸರಿನಲ್ಲಿಯೇ ಗುರುತಿಸಲ್ಪಡುತ್ತದೆ. ಈ ರೀತಿಯ ಸ್ವರೂಪಕ್ಕೆ 'ಜಾಗರೀ' ಎಂದು ಹೆಸರಿದೆ. ಇಂತಹ 'ಜಾಗರೀ'ಯಿಂದ ಭಿನ್ನಳಾಗಿರುವವಳೇ ಜಾಗರಣೀ ಎಂದು ಆರಾಧಿಸಲ್ಪಡುತ್ತಾಳೆ.

ಇದೇ ವಿಷಯವನ್ನೇ ಉಪನಿಷತ್ತೂ ಸಹಿತ, 'ವಿದ್ಯಾಂಚ ಅವಿದ್ಯಾಂಚ ಯಸ್ತದ್–ವೇದೋ ಉಭಯಂ ಸಹ' ಎಂದೇ ಹೇಳಿದೆ. ಈ ಉಭಯ ತತ್ತ್ವಗಳ

ವಿಷಯವಾಗಿ ನಿಯಮಾನುಸಾರವಾಗಿಯೇ ಅನುಷ್ಠಾನಪೂರ್ವಕ ಅಧ್ಯಯನ ಪರಂಪರೆಯೂ ಇದೆ. ಈ ಉಪನಿಷತ್ತಿನ ತತ್ತ್ವದಂತೆಯೇ 'ವಿದ್ಯಯಾಂ ಅಮೃತಂ ಅಶ್ನತೇ' ಎನ್ನುವದು ಚೇತನವು ನಿತ್ಯ ನಿರಂತರವಾಗಿರುತ್ತದೆ; ಅನಂತಾನಂತವಾಗಿರುತ್ತದೆ; ಜನನ–ಮರಣಗಳ ಚಕ್ರ ಇರುವುದಿಲ್ಲ.

ಹಾಗಾದರೆ 'ಅವಿದ್ಯೆಯ' ಕುರಿತು ನೋಡಿದರೆ, ಸಾಕಾರಗೊಂಡದ್ದಕ್ಕೆ ಕಾಲಬಂಧನವಿರುತ್ತದೆ. ಒಮ್ಮೆ ಅದು ಸಾಕಾರಗೊಂಡ ನಂತರದಲ್ಲಿ, ವಿಕಾಸದ ಪ್ರಗತಿಯ ಪಥದಲ್ಲಿ ಅದು ಸದಾ ಪರಿವರ್ತನಶೀಲವಾಗಿಯೇ ಗಮಿಸಿ, ಮತ್ತೆ ಮೂಲದಲ್ಲಿಯೇ ಲೀನಗೊಂಡು ಬಿಡುವದರಿಂದ, ಮತ್ತು ಪುನಃ ಮತ್ತೆ ಆಕಾರ ತಳೆಯಬೇಕಾಗಿರುವಲ್ಲಿ, ಮೊದಲಿನಕ್ಕಿಂತ ವಿಭಿನ್ನವಾಗಿರುವ ಸ್ವರೂಪದಲ್ಲಿಯೇ ಇರುವದರಿಂದ, ಇದು ಜನನ–ಮರಣಗಳ ಚಕ್ರಕ್ಕೆ ಸಿಲುಕುತ್ತದೆ. ಹಾಗಾದರೆ 'ವಿಶ್ವ' ಸ್ವರೂಪದ ಈ ಹಂತ, ದೇವಿಯ ಸ್ವರೂಪವೇ ಆಗಿದ್ದರೂ, ತಾತ್ಕಾಲಿಕವಾಗಿ ರೂಪಧಾರಣೆ ಮಾಡಿರುವದರಿಂದ, ಹಾಗೂ ಆ ರೂಪವೂ ಕ್ಷಣಿಕವೇ ಆಗಿರುವದರಿಂದ, ಆ ರೂಪವನ್ನೇ ಆಧರಿಸಿ 'ಪ್ರವರ' ರೂಪಣೆಗೊಳ್ಳುವದಿಲ್ಲ. ತಾತ್ಕಾಲಿಕ ಸ್ವಭಾವದ ಸ್ವರೂಪವು ಸತ್ಯವೇ ಆಗಿದ್ದರೂ ಶಾಶ್ವತ ಸತ್ಯ ಇದಾಗಿರುವದಿಲ್ಲ. ಅವಿದ್ಯೆಯೆನ್ನುವದನ್ನು ತಾತ್ಕಾಲಿಕ ಸತ್ಯವೆಂದು ಪರಿಗಣಿಸಿದರೂ, ಅದು ಶಾಶ್ವತ ಸತ್ಯದ ಎಡೆಗೆ ವಿಕಾಸಗೊಳ್ಳುತ್ತಿರುವ ವಿಶ್ವದ ರಹಸ್ಯದ ಆಯಾಮವೇ ಅಗಿದೆ.

ಈ ಎರಡೂ ತತ್ತ್ವಗಳ ಸಮ್ಮಿಲನವಾದಾಗ ವೈಶ್ವಿಕವಾಗಿ ಘಟಿಸುವ ಲೀಲೆಗಳಿಗೆ ಒಂದು ನಿಗದಿತವಾದ ಗಮ್ಯವಿರುತ್ತದೆ. ಎಲ್ಲಿಯವರೆಗೂ ಆಕಾರ–ನಿರಾಕಾರಗಳ ಪರಿವರ್ತನಾ ಪ್ರಕ್ರಿಯೆಯು ಮುಂದುವರೆಯುತ್ತದೆಯೋ ಅಲ್ಲಿಯವರೆಗೂ, ಈ ಜಗತ್ತಿಗೂ ತನ್ನ ಮೂಲ ಅಸ್ಮಿತೆಯಾದ ಋತದ ಕುರಿತು ಪೂರ್ಣತಾ ಭಾವವು ರೂಪಿತಗೊಂಡಿರುವದಿಲ್ಲ. ಅದರಲ್ಲೂ ಊಹಾತೀತವಾಗಿರುವ ಆ ವೈರಾಜ್ಯದ ಉತ್ತುಂಗದಿಂದ ಆಗಮಿಸುವ ಪ್ರಭಾ ಕಿರಣಗಳಲ್ಲಿ ದರ್ಶಗೊಳ್ಳುವ ಚೇತನವು, ತಾನು ಚಲಿಸಿದಲ್ಲೆಲ್ಲವೂ ಪ್ರಭಾವಲಯವನ್ನೇ ಸೃಷ್ಟಿಸುತ್ತದೆ. ಇದರ ಸ್ಪರ್ಶದಿಂದ ವಿಶ್ವ ಸೃಷ್ಟಿಯೂ ಸಹಿತ ಸಿದ್ಧಿಗಾಗಿ ಕಂಪಿಸುತ್ತದೆ. ಈ ರೀತಿಯ ಭಾವ ಭವ್ಯತೆಯ ಬೆಳಕಿನ ಬೀಜಗಳನ್ನೇ ಬಿತ್ತುತ್ತ ನಡೆದಲೆಲ್ಲ ಜಗತ್ತು ಸಂರಚನೆಗೊಳ್ಳುತ್ತಲೇ ಸಾಗುತ್ತದೆ. ಸಂರಚನೆಗೊಳ್ಳುವ ಮುನ್ನ ನಿರಾಕಾರ ಸ್ಥಿತಿಯಲ್ಲಿದ್ದ ಚೇತನವು

ಚಣಕಾಲ ಒಂದು ನಿಗದಿತ ಆಕಾರದ ಸ್ವರೂಪಕ್ಕಾಗಿ, ತಾನೆ ಒಂದು ಜಡದ ಕವಚವನ್ನು ನಿರ್ಮಿಸಿಕೊಂಡು, ಅದರಂತರಂಗದಲ್ಲಿ ಹುದುಗಿಕೊಳ್ಳುತ್ತದೆ. ಆಯಾ ಸಂದರ್ಭಗಳಲ್ಲಿ ನಿರ್ಮಿತಿಗೊಳ್ಳಬೇಕಾದ ಗಾತ್ರವಾಗಲೀ ಅಥವಾ ಪಾತ್ರವಾಗಲೀ, ಎಲ್ಲವೂ ನಿಯತಿಯ ವೈಶ್ವಿಕ ನಿಯಮದಂತೆಯೇ ಘಟಿಸುತ್ತದೆ.

ಈ ಚೈತನ್ಯರೂಪಿ ಶಕ್ತಿಯು ಗಗನದೆದೆಯಲ್ಲಿ ವರ್ಣಲಿಪಿಯಾಗಿ ಪಡಿಮೂಡಿಕೊಂಡು, ಸರ್ವಸ್ವದಲ್ಲೂ ಪ್ರತಿರೂಪಗೊಳ್ಳಲು ಅಭೀಪ್ಸೆಯಲ್ಲಿ ಸ್ಪಂದಿಸುತ್ತಾ ಇರುತ್ತದೆ. ಇದರ ಸ್ಪಂದನಕ್ಕೆ ಸಮಸ್ಪಂದಿಯಾಗಿ ಇರುವ 'ಜಗತ್ತಿಗೆ' – ವಿಶ್ವಕ್ಕೆ – ಚೇತನಗೊಳ್ಳುತ್ತಿರುವ 'ಜಡ'ಕ್ಕೆ, ಸಹವರ್ತಿಯಾಗಲು ತನ್ನ ಲೀಲೆಯ ಮೂಲಕ ಅವಕಾಶ ಒದಗಿಸುತ್ತದೆ. ಇದು ವೈಶ್ವಿಕ ಯಜ್ಞದ ಸ್ವರೂಪದಲ್ಲಿ ಇರುತ್ತದೆ. ಇದನ್ನು ಭೂವಲಯದ ಚಿದ್ಭಾವ ಮಾತ್ರ ಗುರುತಿಸಲು ಸಮರ್ಥವಾಗಿರುತ್ತದೆ. ಇಂತಹ ಚಿದ್ಭಾವದ ಹಂತವನ್ನು ಪಡೆದುಕೊಳ್ಳುವ ಗತಿಯನ್ನು ಜಡವು ಸಾಧನೆಯ ಮೂಲಕವೇ ಪಡೆದುಕೊಳ್ಳಬೇಕಾಗಿದೆ.

ಇಂತಹ ಸಾಧನೆಯ ಹೆಜ್ಜೆಗಳೇ ಆಯಾಮಗಳಾಗಿ ಚೇತನಕ್ಕೆ ಅಪರೂಪದ ಸ್ವರೂಪವನ್ನೂ ರೂಪಿಸುತ್ತವೆ. ಜಡದ ಸಂಪರ್ಕವಿಲ್ಲದೇ ಚೇತನವು ಪೂರ್ಣವಾಗಲಾರದು; ಚೇತನದ ಆಧಾರವಿಲ್ಲದೇ ಹೋದರೆ ಜಡವು ನಿಷ್ಕ್ರಿಯವಾಗುತ್ತದೆ. ಈ ರಹಸ್ಯದ ಅಧ್ಯಯನ ವಿಧಾನವೊಂದು ನಮ್ಮಲ್ಲಿ ಪ್ರಕೃತಿ ಸಹಜವಾಗಿಯೇ ರೂಪುಗೊಂಡಿ(ತ್ತ)ದೆ. ಕಾರಣಾಂತರಗಳಿಂದಾಗಿಯೋ ಅಥವಾ ಯಾನದ ಅವಧಿಯಲ್ಲಿ ಘಟಿಸಿದ ವಿಘಟನಾತ್ಮಕ ವಿಚಲನೆಯ ಗತಿಯನ್ನು ಅರಿತುಕೊಳ್ಳದೇ ಹೋದ ಕಾರಣದಿಂದಲೋ, ನಮ್ಮ – ಭೂಬದುಕಿನ ಚಿಂತನಗಳೆಲ್ಲವೂ ತನ್ನ ಮೂಲ ಗುರಿಯನ್ನು ಮರೆತು, ತಮದ ನೆಲೆಯೆಡೆಗೇ ಸಾಗಿಬಂದವು. ಆದರೆ, ಈ ವಿಚಲನೆಯು, ಯಾನದ ಮೂಲ ಗುರಿಯನ್ನು ಮರೆಯದಂತೆ ಕಾಲ ಎಚ್ಚರಿಸುತ್ತದೆ. ಅದನ್ನೇ ಪ್ರಳಯದ ಸ್ವರೂಪವೆಂದು ಪರಿಗಣಿಸಲಾಯಿತು. ಆದರೆ ಈ ಪ್ರಳಯದ ಹಿನ್ನೆಲೆಯಲ್ಲಿಯೂ ಚೇತನದ ಅಭೀಪ್ಸೆಯೇ ಇರುವದರಿಂದ, ನವೋನವೀನ ಉದಯಕ್ಕೆ – ಪೂರ್ಣತ್ವದೆಡೆಗೆ ಸಾಗುವ ಪ್ರಕ್ರಿಯೆಯಗೆ – ಕಾರಣವಾಗುತ್ತದೆ. ಮರು ರೂಪ ಪಡೆಯುವ, ಪರಿವರ್ತನಾಶೀಲ ಕ್ರಿಯೆಯ ಸಚ್ಚಿದಾನಂದದ ಸ್ವರೂಪವೇ ಆಗಿರುತ್ತದೆ. ಅದನ್ನು ಗಮನಿಸಲು ನಮಗೆ 'ಅನಿಮೇಷ ಚಕ್ಷುಗಳ' ಅವಶ್ಯಕತೆ ಇದೆ.

ಇದನ್ನೇ ಶ್ರೀ ಅರವಿಂದರು 'ಸಾವಿತ್ರಿ'ಯಲ್ಲಿ ಹೀಗೆ ಅಭಿವ್ಯಕ್ತಗೊಳಿಸಿದ್ದಾರೆ –

'ಮೂಲ–ಪ್ರಕೃತಿಯಾ ಮಾಬಲದ ಗಡಣದಾ ಜನ್ಮ ತಾಣವೀಗ
ಮೃಣ್ಮಯದ ತಳದಿ ಅನಭಿಜ್ಞವಿರುವ ಆಧಾರವನ್ನು ಈಗ
ಈಗಿದೋ ಋತದ–ಉಪನಿವೇಶದೊಲು ಅದನು ರೂಪಣೆಯಗೊಳಿಸಿ
ಪಾರದರ್ಶಕದ ಪರಿಶುಭ್ರ–ತೋಷ–ಪೋಷಾಕು ನಿಗದಿಗೊಳಿಸಿ

ಅಜ್ಞಾತವನ್ನು ಜ್ಞಾತವಾಗಿಸುತ ನಿಲುವಂಗಿ ದೃಷ್ಟಿಗಿರಿಸಿ
ಅದರ ಮೂಲಕವೇ ಹೊಳೆಹೊಳೆವ ತೇಜ–ಕಾಂತಿಯಲಿ ಬೆಳಕು ಸೂಸಿ
ಋತದ ಉಜ್ಜ್ವಲದ ಅದ್ಭುತಾದ್ಭುತದ ಅಂಗಗಳು ರಂಗುಗೊಂಡು
ಜೊತೆಗಿದೋ ಋತವು ಪ್ರಕೃತಿಯಾ ಶಿರದ ಮಕುಟಮಣಿ ಸೂರ್ಯನಿಂದು

ಜೊತೆಜೊತೆಗೆ ಋತವು ಪ್ರಕೃತಿಯಾ ಪದದ ಪ್ರತಿಹಂತ ಹಂತಕಾಗಿ
ಪಥದ ದರ್ಶನಕೆ ಮುಂಚೂಣಿಯಲ್ಲಿ ತಾ ಮಾರ್ಗದರ್ಶಿಯಾಗಿ
ಮತ್ತಿದೋ ಋತವು ಅನಿಮೇಷವಾಗಿ ಮುಗಿಲಗಲವಾಗಿ ತೆರೆದು
ಅವಳ ಆ ಆಳ–ಪಾತಾಳದೆಡೆಗೆ ಈ ದೃಷ್ಟಿಪಾತ ಸಂದು

ಲೋಕಾತಿಲೋಕದುದ್ಧಾರಕಾಗಿ ತಾ ಜನಿಸಿ ಬರುವನೀಗ
ಪ್ರಕೃತಿಗಧಿಪುರುಷ ತಾನಾಗಿ ನಿಲುವನೀ ಅತಿಮಾನವನು ಈಗ
ಅವನ ಸಾನಿಧ್ಯವದು ಈಗ ಜಡದ ಈ ಲೋಕವೆಲ್ಲವನ್ನು
ರೂಪಾನುಸ್ಪಂದದಲಿ ನಿತ್ಯ ದೇದೀಪ್ಯಗೊಳಿಸಿ ಅದನು.

ಬುವಿಗೆ ಕವಿದಿರುವ ನಿಶೆಯ ಒಡಲಿನಲಿ ಬೆಳಗಿಸುತ ದೀಪ–ಜ್ಯೋತಿ
ಋತದ–ಜ್ವಾಲೆಗಳನವನೀಗ ಪುಟಿಸಿ ಪುಟಗೊಳಿಸಿ ದಿವ್ಯ ಕಾಂತಿ
ಋತದ ಮಹತಿಯಾ–ನಿಯತಿಯನು ಮೃಣ್ಮಯದ ಮೇಲೆ ನೆಲೆಸಿ;
ಮಾನವನು ಸಹಿತ ಪಡಮರಳಿಕೊಂಡ ಪರಮಾತ್ಮ–ಕರೆಯನರಸಿ.'

**(ಶ್ರೀ ಅರವಿಂದರ 'ಸಾವಿತ್ರಿ'; ದಳ 11 ಶಾಶ್ವತದ ಬೆಳಗು ಪುಟ 708/9)**

**– ಪುಟ್ಟು ಕುಲಕರ್ಣಿ**

(ಸಶೇಷ)

# ಶ್ರೀ ಅರವಿಂದರ ಕಾವ್ಯ
# "ಈಲಿಯನ್"

**– ಅನುವಾದ: ಡಾ॥ ಬಿ.ಆರ್. ಭೀಡ್, ರಾಯಚೂರು**

## ಮೊದಲ ಹೊತ್ತಿಗೆ: ಆಗಮನದ ಹೊತ್ತಿಗೆ (1/4)

139–144. ಆರಸ್ Ares ಇವನು ಯುದ್ಧ ಮತ್ತು ಧೈರ್ಯದ ದೇವತೆ. ಇವನು ಸ್ಯೂಸ್ ಹಾಗೂ ಹೀರಾ ಇವರ ಪುತ್ರ. ಇವನ ಬಗ್ಗೆ ಗ್ರೀಕರಲ್ಲಿ ಮಿಶ್ರ ಭಾವನೆ ಇದೆ.

ಇವನು ಟ್ರೋಜನರ ಪರ ಇದ್ದಾನೆ. ಅವನು ಮಹಾ ಬಲಶಾಲಿ, ಮೇಲಾಗಿ ಧೈರ್ಯವಂತ, ಯಾವುದಕ್ಕೂ ಹಿಂದೆ ಮುಂದೆ ನೋಡುವವನಲ್ಲ. ಟ್ರೋಜನರ ಹೃದಯದಲ್ಲಿ ದ್ವೇಷ, ಕೆಚ್ಚಿನ ಭಾವನೆಯನ್ನು ಪ್ರವಾಹದೋಪಾದಿ ಹರಿಸುತ್ತಾನೆ. ಅವರ ಕತ್ತಲೆಯ ಅಂತರಾಳದಿಂದ ರಾಕ್ಷಸ, ಅಸುರ, ದೈತ್ಯ ಶಕ್ತಿಗಳ ರೂಪದಲ್ಲಿ ಅವು ಟ್ರೋಜನರ ಆವೇಶದ ಮೂಲಕ ಹೊರಬರುವಂತೆ ಮಾಡುತ್ತಾನೆ. ಅವು ತುಂಬ ಭಯಾನಕ ರೂಪದವು. ಅವಚೇತನದ ಆಳದಲ್ಲಿ ಮರೆಯಲ್ಲಿ ಅಡಗಿ ಕುಳಿತು ಸುಪ್ತ ಎರಿನಿಯ Erinnys ನ್ನು ಮೂಕವಾಗಿ ಗಮನಿಸುತ್ತವೆ.

•ಎರಿನಿಯು ದ್ವೇಷ, ಪ್ರತೀಕಾರದ ದೇವತೆ. ಎರಿನಿಯನ್ನು ಇಲ್ಲಿ ಸರ್ಪಕೇಶಿ ಎಂದು ವರ್ಣಿಸಲಾಗಿದೆ. ಎರಿನಿ ಒಂದು ದೇವ(ಭೂತ) ಗಣ. ಇವರನ್ನು ಮೂಲತಃ ಶಾಪದ ಪ್ರತಿರೂಪಗಳೆಂದು ವರ್ಣಿಸಲಾಗಿದ್ದರೂ ಇವರನ್ನು ಮೃತ ಆತ್ಮ, ದೆವ್ವ ಇತ್ಯಾದಿಯಾಗಿ ಗುರುತಿಸಲಾಗುವುದು. ಗ್ರೀಕ ಕವಿ ಹೀಸಿಡ್‌ನ ಪ್ರಕಾರ ಇವರು ಭೂಮಿ ತಾಯಿಯ Earth ಪತಿಯಾದ ಮೃತ ಯುರೇನಸ್‌ನ Uranus ರಕ್ತದಿಂದ ಜನ್ಮ ತಾಳಿದವರು. ಇವರಿಗೆ ಬೇರೆ ಬೇರೆ ಹೆಸರುಗಳಿವೆ, ಇವರ ಹೆಸರಲ್ಲಿ ಬೇರೆ ಬೇರೆ ಆಖ್ಯಾಯಿಕೆಗಳೂ ಇವೆ. ಕೆಲ ಇತ್ತೀಚಿನ ಲೇಖಕರು ಇವರನ್ನು ಅಲೆಕ್ಟೋ (ಕ್ರೋಧದ ಅಧಿದೇವತೆ), ಟಿಸಿಫೋನ (ಕೊಲೆಯ ಪ್ರತೀಕಾರದ ಅಧಿದೇವತೆ), ಮಿಗಾರಾ (ಮಾತ್ಸರ್ಯ) ಎಂದು ಕರೆಯುತ್ತಾರೆ. ಇವರನ್ನೆಲ್ಲ ಇಲ್ಲಿ ಸಾಮಾನ್ಯವಾಗಿ ಸರ್ಪಕೇಶಿಯಾದ ಎರಿನಿಯಲ್ಲೆಯೇ ಸೇರಿಸಿ ಹೇಳಲಾಗಿದೆ. ಇವರು ಪಾತಾಳದಲ್ಲಿ ವಾಸ ಮಾಡುತ್ತಿದ್ದರು ಎಂದು ಭಾವಿಸಲಾಗಿದೆ. (1.41)

144–148. ಡೆಲ್ಫಿಕ್ ಅಪೋಲೋ ಇದು ಅಪೋಲೋದ ಡೆಲ್ಫಿಯ ದೈವವಾಣಿ. ಡೆಲ್ಫಿ ಇರುವುದು ಮಧ್ಯ ಗ್ರೀಸನಲ್ಲಿರುವ ಪರ್ನಾಸಸ್ ಬೆಟ್ಟಗಳ ತಪ್ಪಲಲ್ಲಿ. ಇದು ನಾಗರೀಕತೆಯನ್ನೇ ಕಾಣದ ತೀರ ಹಿಂದುಳಿದ ಪ್ರದೇಶ. ಇಲ್ಲಿ ಅಪೋಲೋ ದೇವತೆಯ ಬಹು ಮುಖ್ಯವಾದ ದೇವಾಲಯವಿದೆ. ಪೈಥಿಯಾ Pythia ದೇವತೆಗಳ ಸಂದೇಶವನ್ನು ಸಾರಿದ್ದು ಇಲ್ಲಿಂದಲೇ. ಅಪೋಲೋ ಇವನು ಸಂಗೀತ, ಕಾವ್ಯ, ಧನುರ್ವಿದ್ಯೆ ಮತ್ತು ಭವಿಷ್ಯ ಕಥನದ ಅಧಿದೇವತೆ.

ಅಪೋಲೋ ಅದ್ಭುತ ಪವಾಡಗಳ ದೇವತೆ. ಅವನದೇ ಆದ ಒಂದು ವಿಶಿಷ್ಟ ಪ್ರಭಾವಲಯ ಅವನಿಗಿದೆ. ಅವನು ಮನೀಷಿಯೂ, ಋಷಿಯೂ, ದ್ರಷ್ಟಾರನೂ, ಭವಿಷ್ಯವಾದಿಯೂ ಹೌದು. ಅವನು ಅಕಲ್ಪಿತವಾದ ಸಂಗತಿಗಳನ್ನು ಕಾಣಬಲ್ಲವನು. ನಮ್ಮಲ್ಲಿರುವ ದೇವತೆಯನ್ನು ಜಾಗೃತಗೊಳಿಸಿ ಅಮಾನುಷೀಯ ಅಂದರೆ ಮಾನವನಿಂದ ಮಾಡಲು ಸಾಧ್ಯವಾಗದ ಅಸಾಧ್ಯ ಕೆಲಸಗಳನ್ನು ಮಾಡಲು ಪ್ರೇರಿಸುವವನು ಮತ್ತು ಆ ಶಕ್ತಿಯನ್ನು ನೀಡುವವನು. ಅವನು ಉದ್ಧಾರಕನೂ ಹೌದು, ಸಂಹಾರಕನೂ ಹೌದು. ಅಂಥ ಅಪೋಲೋ ದೇವತೆ ತಾನಿರುವ ಎತ್ತರದ ಶಿಖರಗಳಿಂದ ಕೆಳಗಿಳಿದು ಬಂದನು. ತನ್ನ ಡೆಲ್ಫಿಕ್ ಅಪೋಲೋದ ರಹಸ್ಯಮಯ ಕೋಟೆಯನ್ನು ರಕ್ಷಿಸುವ ಉದ್ದೇಶದಿಂದ ತನ್ನ ಶಕ್ತಿಯನ್ನು ಈಲಿಯನ್ ಸಹಾಯಕ್ಕಾಗಿ ಕಳಿಸಿಕೊಟ್ಟನು. (1/42)

149–154. ಈ ದೇವ ದೇವತೆಗಳ ಮಧ್ಯ ಪ್ರವೇಶದಿಂದಾಗಿ ಈ ಟ್ರೋಜನ್ ಯುದ್ಧ ಬಹು ದೀರ್ಘಕಾಲ ನಡೆಯುವಂತಾಯಿತು. ಕೆಲವರು ಗ್ರೀಕರ ಪಕ್ಷ ಕೆಲವರು ಟ್ರೋಜನರ ಪಕ್ಷ ವಹಿಸಿ ಯುದ್ಧದಲ್ಲಿ ಭಾಗಿಯಾಗಿದ್ದರಿಂದ ಗೆಲುವು ಒಮ್ಮೆ ಆ ಕಡೆಗೆ ಒಮ್ಮೆ ಈ ಕಡೆಗೆ ಓಲಾಡುವಂತಾಯಿತು.

• the whirl of the Earth-force ಹಾಗೂ the sweep of the ages ಮುಂತಾದ ಸಾಲುಗಳಲ್ಲಿ ಆಳವಾದ ತಾತ್ವಿಕ ಚಿಂತನೆಗಳನ್ನು ಕಾಣಬಹುದು. (1/43)

All that is born and destroyed is reborn in the sweep of ages ಜಾತಸ್ಯ ಹಿ ಧ್ರುವೋ ಮೃತ್ಯುಃ ಧ್ರುವಂ ಜನ್ಮ ಮೃತಸ್ಯ ಚ ಹುಟ್ಟಿದ್ದು ಸಾಯಲೇಬೇಕು, ಸತ್ತದ್ದು ಮತ್ತೆ ಹುಟ್ಟಲೇಬೇಕು; ಇದು ಕಾಲಕಾಲಾಂತರದಲ್ಲಿ ನಡೆದೇ ತೀರುವಂಥದು.

ಜೀವನವೆನ್ನುವುದೊಂದು ಪುನರಾವರ್ತಿತವಾಗುತ್ತಲೇ ಇರುವ (ದಶಮಾಂಶ) ಅಂಕಿಯ ಹಾಗೆ. ಅದೇ ಜನ್ಮ, ಮತ್ತೆ ಬದುಕು, ಪುನಃ ಮರಣ, ಪುನರಪಿ ಜನನ ಪುನರಪಿ... ಈ ಚಕ್ರ ಹೀಗೆಯೇ ನಿರಂತರವಾಗಿ ಮುಂದುವರಿಯುವಂಥದು. ಕಾಲವು ಬೆಂಬತ್ತಿದ ಚೆಂಡಿಗೆ ನಿಲುಗಡೆ ಎಲ್ಲಿದೆ? ವಿಧಿಯ ಪಡೆಯು ಬೆನ್ನಟ್ಟಿ ಬರುವ ಜೀವಿಗೆ ಗುರಿ ಎಂಬುದೆಲ್ಲಿದೆ?

ಅನಿಷ್ಟವೆಂಬುದು ಒಮ್ಮೆ ಆಯಿತು, ಮತ್ತೆ ಬರದು ಅನ್ನುವ ಹಾಗಿಲ್ಲ, ಯಾವಾಗ ಪುನಃ ವಕ್ಕರಿಸುವುದೋ ಹೇಳಲು ಬರುವುದಿಲ್ಲ. ಹೀಗಾಗಿ ಬದುಕಿಗೇ ಅರ್ಥವಿಲ್ಲದಾಗಿದೆ. ಅದರಿಂದ ಯಾವ ಪರಿಣಾಮವೂ issue ತೋರದಂತಿದೆ.

ಅಗೋಚರವಾದ ಅದೃಶ್ಯವಾದ ಅಲೌಕಿಕ ಕಣ್ಣು ಮಾತ್ರ ಕಾಲ, ವಿಧಿ, ನಿಯತಿ, ಅನಿಷ್ಟ, ಭಾಗ್ಯ ಇವುಗಳ ಹೆಣಿಕೆಯನ್ನು ಪ್ರತ್ಯೇಕಿಸಿ ಕಾಣಬಲ್ಲದು.

•goal seems there none for the ball that is chased ಮತ್ತು the threads of its workings ಮುಂತಾದ ವಾಕ್ಯಗಳಲ್ಲಿ ತಾತ್ವಿಕ ಚಿಂತನೆಯ ಅತಿ ಕಾವ್ಯಮಯ ವರ್ಣನೆಯನ್ನು ಕಾಣಬಹುದು. (1/44)

155–156. ಇದನ್ನು fate's irony ಎಂದು ಹೇಳಬಹುದು: ವಿಧಿ ಕಾಲಹರಣಕ್ಕಾಗಿ ಆಡುತ್ತಿದೆಯೋ ಏನೋ! ಟ್ರಾಯ್ ಯುದ್ಧ ಕ್ಷೇತ್ರದಲ್ಲಿ ವಿಧಿ ಹೀಗೆ ಸುಮ್ಮನೇ ಆಡುತ್ತಿದೆಯೋ ಏನೋ ಅನಿಸುತ್ತದೆ; ಹತ್ತು ವರ್ಷ ನಡೆದ ಯುದ್ಧದಲ್ಲಿ ಯಾರೂ ಗೆಲ್ಲಲೊಲ್ಲರು, ಯಾರೂ ಸೋಲಲೊಲ್ಲರು. ಸೋಲು–ಗೆಲುವು ಒಮ್ಮೆ ಆ ಕಡೆಗೆ ಒಮ್ಮೆ ಈ ಕಡೆಗೆ ಓಲಾಡುತ್ತಿವೆ. ಸಾವಿನ ಆಟ ಇದು: ಸೋಲು ಗೆಲವುಗಳು ತೂಗುಯ್ಯಾಲೆಯಲ್ಲಿರುವಂತೆ ಆಕಡೆಗೆ ಈಕಡೆಗೆ ತೂಗಾಡುತ್ತಿವೆ. (1/45)

157–1589. ನಾಯಕರ ಪ್ರಯತ್ನವೆಲ್ಲ ನಿರರ್ಥಕವಾಗಿದೆ. ಪ್ರಬಲ ಬಲಶಾಲಿಗಳ ರಕ್ತ ನಿರುಪಾಯವಾಗಿ, ನಿರರ್ಥಕವಾಗಿ ಸುರಿದಿದೆ. ದೈತ್ಯ ಕಲ್ಲುಬಂಡೆಗಳಿಗೆ ಅಪ್ಪಳಿಸಿ ಸಮುದ್ರದ ಅಲೆಗಳ ನೊರೆ surf ಬಡಿಬಡಿದು ಕತ್ತರಿಸಿ ಎತ್ತರಕ್ಕೆ ಹಾರಿ ಯಾರ ಗಮನಕ್ಕೂ ಬಾರದಂತೆ ಕೆಳಕ್ಕೆ ಬೀಳುವಂತೆ ದಿನಗಳು, ಮಾಸಗಳು, ವರುಷಗಳು ತಿಳಿಯದಲೆ ಉರುಳಿಹೋಗಿವೆ. (1/46)

159–161 •Day hunted the steps of the nightfall ಬಹು ಸುಂದರವಾದ personification. ಹಗಲು ರಾತ್ರಿಯ ಹೆಜ್ಜೆಗಳ ಬೇಟೆಯಾಡಿತು. ಸಂತಸವು ದುಃಖದ ಉತ್ತರಾಧಿಕಾರಿಯಾಗಿ ಬಂದಿತು. ಸೋಲು ಸೋತವರ ಸೋಲನ್ನು ವೈಭವೀಕರಿಸಿತು, ಉದಾತ್ತೀಕರಿಸಿತು. ಗೆಲುವು ಖಾಲಿ ಸಂತಸವನ್ನು, ಶೂನ್ಯ ಸಂತಸವನ್ನು ತಂದಿತು. ಯಾವ ಲಾಭವೂ ಇಲ್ಲ ಯಾವ ಪದವಿ ಪಾರಿತೋಷಕವೂ ಇಲ್ಲ. (1/47)

162. End there was none of the effort ಯಾವ ಪಕ್ಷದ ಪ್ರಯತ್ನಕ್ಕೂ ಕೊನೆ ಇಲ್ಲ, ಮುಗಿತಾಯವಿಲ್ಲ, ವಿರಾಮವಿಲ್ಲ. and end there was none of the failure ಯಾವ ಪಕ್ಷದ ಸೋಲೂ ಕೊನೆಯಲ್ಲ ಮುಗಿತಾಯವಲ್ಲ.

ಯುದ್ಧ ಮುಂದುವರಿದೇ ಇದೆ. ಸೋಲು ಗೆಲುವು ದೈನಂದಿನ ಸಾಮಾನ್ಯ ಸಂಗತಿಯಾಗಿವೆ, ಮುಂದಿನ ಯುದ್ಧದಾಟದ ಮೆಟ್ಟಿಲಾಗಿದೆ.

•ಬಹು ಸುಂದರವಾದ ಕಾವ್ಯಾತ್ಮಕ ಪ್ರಸ್ತುತಿ ಇಲ್ಲಿದೆ. ಮಾನವನ ಬದುಕೂ ಕೂಡ ಸರಿಯಾಗಿ ಇದೇ ರೀತಿ ಮುಂದರಿಯಬೇಕು; ಯಾವ ಬಿಕ್ಕಟ್ಟು, ದುಃಖ, ಸೋಲು ಕೊನೆಯಲ್ಲ. ಮುಂದಿದೆ ಭವ್ಯ ಭವಿತವ್ಯದ ಕಟ್ಟೆ, ವಿಶ್ರಾಂತಿಯ ತಾಣ. ಅಲ್ಲಿ ಕೂಡ ಬಹು ಕಾಲ ಕುಳ್ಳಿರುವಂತಿಲ್ಲ. ಏಳಬೇಕು, ಮುನ್ನಡೆಯಬೇಕು. (1/48)

163–165. ವಿಜಯ ಮತ್ತು ಯಾತನೆಗಳು ನಿರಂತರ ಸ್ಥಾನ ಬದಲಿಸುತ್ತವೆ. ಸ್ನೇಹಿತರಂತೆ ಕೈಕೈ ಮಿಲಾಯಿಸುತ್ತವೆ. ಗಂಡಹೆಂಡಿರು, ಸ್ತ್ರೀ ಪುರುಷರು ಜೀವನವೆಂಬ ಹುಲ್ಲು ಹಾಸಿಗೆಯ ಮೇಲೆ ನಡೆಯುತ್ತ ಆನಂದದ ಕ್ಷಣಗಳಲ್ಲಿ ನಗುತ್ತ, ದುಃಖ ಪ್ರಸಂಗದಲ್ಲಿ ನಿರಾಶೆಯಿಂದ ಬಾಡಿದ ಮುಖದೊಂದಿಗೆ ನಡೆಯುತ್ತ, ಸುಖ ದುಃಖಗಳ ನರ್ತನದಲ್ಲಿ ನಲಿಯುತ್ತ ಮುದುಡುತ್ತ ಸಾಗುವಂತೆ ಸೋಲು–ಗೆಲುವುಗಳು ಆಕಡೆಗೂ ಈಕಡೆಗೂ ಸ್ಥಳ ಬದಲಿಸುತ್ತ ನಡೆದಿದ್ದವು.

•ಇದರ ನಿದರ್ಶನವನ್ನು ನಾವು ಜಾನಪದ ನೃತ್ಯಗಳಲ್ಲಿ ಕೂಡ ನೋಡಬಹುದು. ಸ್ತ್ರೀ ಪುರುಷರು ಕೈಕೈ ಹಿಡಿದು, ಪರಸ್ಪರ ಎದಿರುಬದುರಾಗಿ, ಹಿಮ್ಮುಖವಾಗಿ, ಮುಮ್ಮುಖವಾಗಿ ಕುಣಿದು ಕುಪ್ಪಳಿಸುತ್ತಾರೆ.

•ಇಲ್ಲಿ ಉಪಮಾ ಅಲಂಕಾರದ ಉದಾಹರಣೆ ನೋಡಬಹುದು. (1/49)

166. ಎರಡೂ ಪಕ್ಷಗಳ ಪರ ನಿರ್ದಯರಾದ ದೇವ ದೇವತೆಗಳಿದ್ದಾರೆ. ಅವರು ಮನುಷ್ಯರನ್ನು ನಿರ್ಲಕ್ಷ್ಯವಾಗಿ ತುಳಿಯುತ್ತ ಸಾಗಿದ್ದಾರೆ. (1/50)

166–167. ಕಾಲವೇನೋ ಮರಣರಹಿತವಾಗಿದೆ, ಅಮರವಾಗಿದೆ. ನಿಜ. ಆದರೆ ಅದರ ಕೆಲಸಗಳು, ರಚನೆಗಳು ಮಾತ್ರ ಕಾಲಬದ್ಧವಾಗಿವೆ! ಕಾಲಾಂತರದಲ್ಲಿ ಅವು ನಾಶಹೊಂದುವಂಥವುಗಳೇ ಆಗಿವೆ. ಕಾಲಪ್ರಾಪ್ತ ಆನಂದವೂ ಶಾಶ್ವತವಲ್ಲ. ದುಃಖ ಯಾತನೆಗಳೂ ಶಾಶ್ವತವಲ್ಲ. (1/51)

•ತಾಳಿಕೊಳ್ಳಬಲ್ಲ ಸಹನೆ ಬೇಕು, ಅಷ್ಟೇ.

168–171. •ಓಲಿಂಪಸ್ ಅನ್ನುವುದು ಈಶಾನ್ಯ ಗ್ರೀಕ್ ಪ್ರದೇಶದಲ್ಲಿರುವ ಬೆಟ್ಟಗಳ ಸಾಲು. ಅಲ್ಲಿ ಗ್ರೀಕ್ ಪುರಾಣಗಳಲ್ಲಿ ಬರುವ ಝ್ಯೂಸ್ ಮುಂತಾದ ದೇವತೆಗಳು ವಾಸವಾಗಿರುತ್ತಾರೆ ಎಂಬುದು ಅವರ ಪ್ರತೀತಿ. ಅಲ್ಲಿರುವ ದೇವತೆಗಳನ್ನು ಓಲಿಂಪಿಯನ್ಸ ಎಂದು ಕರೆಯುವುದು ಕೂಡ ವಾಡಿಕೆಯೇ. ಹೀಗಾಗಿ ದೇವತೆಗಳೂ ಓಲಿಂಪಿಯನ್ನರು. ಗ್ರೀಕರು ತಮ್ಮನ್ನು ತಾವೇ ಓಲಿಂಪಿಯನ್ನರೆಂದು ಕರೆದುಕೊಳ್ಳುತ್ತಿದ್ದರು.

ಇದರ ಮೇಲಿಂದಲೇ Olympic Games, Olympiad ಮುಂತಾದವುಗಳು ಪ್ರಚಲಿತವಾಗಿವೆ.

ಈ ಜಗತ್ತು ತಾತ್ಕಾಲಿಕ ಸಂರಚನೆಯುಳ್ಳದ್ದು. ಇದು ತತ್ಕಾಲೀನ ಸತ್ಯ. ಪ್ರಕೃತಿಯ ಸಂರಚನೆ ಮತ್ತು ಸಂರಕ್ಷಣೆಯ ಹೊಣೆಹೊತ್ತ ಅನೇಕಾನೇಕ ದೇವತೆಗಳು ಕುಶಲ ಶಿಲ್ಪಿಗಳ ತರಹ. ಅವರು ಸುಂದರಾಂಗರು, ಅಮರರು, ಪವಿತ್ರರು.

ತಾತ್ಕಾಲಿಕ ಜಗದ ವ್ಯಾಪಾರದಲ್ಲಿ ತಾವು ಸಕ್ರಿಯವಾಗಿ ಭಾಗವಹಿಸಿದ್ದು, ಟ್ರೋಜನ್ ಯುದ್ಧವನ್ನು ಒಂದು ಹಂತಕ್ಕೆ ತಂದು ನಿಲ್ಲಿಸಿದ್ದು ಅವರಿಗೆ ಸಮಾಧಾನ ನೀಡಿತ್ತು. ತಮ್ಮ ತಮ್ಮ ಕರ್ತವ್ಯ ಕರ್ಮಗಳಿಂದ ಅವರು ಸಂತೃಪ್ತರಾಗಿದ್ದರು.

ಅಂತೆಯೇ ಅವರೀಗ ಯುದ್ಧದಿಂದ ಹಿಂದೆ ಸರಿದರು. ಹತ್ಯಾಕಾಂಡ ಸಾಕೆನಿಸಿತು. ಯುದ್ಧದಿಂದ ನಿವೃತ್ತರಾದರು.

ಯುದ್ಧವೇನೂ ಮುಗಿದಿಲ್ಲ; ನಡೆದಿದೆ. ಆದರೆ ಅದರ ಪರಿಣಾಮ ಮಾತ್ರ ನಿಶ್ಚಿತವಿದೆ. ನಿರ್ಧಾರಿತವಾಗಿದೆ. ಅನೇಕಾನೇಕ ವೀರರು ಮಡಿದು ಹೋಗಿದ್ದಾರೆ. ಇನ್ನೂ ಅನೇಕ ವೀರ ಯೋಧರು, ನಾಯಕರು ಮಡಿಯಲಿದ್ದಾರೆ ಎಂಬುದು ದೇವತೆಗಳಿಗೆ ಗೊತ್ತು. ಯಾರು ಯಾರೆಲ್ಲ ವೀರ ಮರಣ ಹೊಂದಲಿದ್ದಾರೆ ಎಂಬುದು ಕೂಡ ಗೊತ್ತು. ಅವರು ಭವಿಷ್ಯದರ್ಶಿಗಳು, ಮುಂದಾಗಲಿರುವುದನ್ನು ಬಲ್ಲವರು.

ಟ್ರಾಯ್ ಪಟ್ಟಣ ನಾಶವಾಗುವುದೆಂಬ ಸಂಗತಿ ಅವರಿಗೆ ಗೊತ್ತು. ಗ್ರೀಕರೇನೋ ಸದ್ಯಕ್ಕೆ ಗೆಲ್ಲಬಹುದು, ಆದರೆ ಅವರ ವೈಭವ ಅನತಿ ಕಾಲದಲ್ಲಿ ಅವನತಿ ಹೊಂದಲಿದೆ ಎಂಬುದನ್ನು ಅವರು ಕಂಡಿದ್ದರು. (1/52)

172–179. ಅಂತೆಯೇ ಸ್ಯೂಸ್ ಹಾಗೂ ಅವನ ಪರಿವಾರದ ದೇವತೆಗಳೆಲ್ಲರೂ ಯುದ್ಧನಿವೃತ್ತರಾಗಿ ತಮ್ಮ ಸ್ವರ್ಗ ನಿವಾಸಕ್ಕೆ ಮರಳಿದರು. ಗರುಡ ಗರಿಗೆದರಿ ಅತಿ ವೇಗವಾಗಿ ಹಾರಿಹೋಗುವಂತೆ ತ್ವರಿತ ಗತಿಯಲ್ಲಿ ತಮ್ಮ ನಿವಾಸ ಸ್ಥಾನಕ್ಕೆ ತೆರಳಿದರು.

ಬಿದ್ದವರ, ಸೋತವರ, ಸತ್ತವರ ಲೆಕ್ಕವಿಲ್ಲ, ಪರಿವೆ ಇಲ್ಲ. ತಮ್ಮ ಶ್ರಮ, ತಮ್ಮ ಪ್ರಯತ್ನ ಅಷ್ಟೇ ಅವರ ಲೆಕ್ಕ. ಎಲ್ಲ ಮುಗಿಸಿ ಭರ್ಜರಿಯಾಗಿ ಏರ್ಪಾಡಾಗಿದ್ದ ಔತಣ ಕೂಟಕ್ಕೆ ತೆಳಿದರು. ಆಳುಗಳು, ವಿಶೇಷವಾಗಿ ಚಂದನೆಯ ದಾಸಿಯರು ಸುರಾ ಪಾತ್ರೆ ಹಿಡಿದು ಮೆಲ್ಲಮೆಲ್ಲನೆ ನಡೆದು ಬಂದರೆ ದೇವತೆಗಳ ಹೃದಯದಲ್ಲಿ ಶಾಂತಿ, ಸಮಾಧಾನ, ಸಂತಸ ತುಂಬಿತ್ತು.

ಈ ಗಾಯ–ಯಾತನೆ–ಅಳು ಇರುವ ಭೂಮಿಯನ್ನು ಬಿಟ್ಟು ದುಃಖ ದೂರವಾದ ಆಕಾಶದ ಸ್ತರಗಳತ್ತ ಏರಿ ಹೋದರು.

ಅವರು ಶಾಂತವಾಗಿ ವಿರಮಿಸಿದರು. ಅವರ ಹೃದಯ ಶಾಂತಿ, ಸಮಾಧಾನ, ಸಂತಸವನ್ನು ಬಯಸುತ್ತಿತ್ತು. (1/53)

180–181. ಮಾನವರ ಹೃದಯದ ಮೇಲೊಂದು ಬಹು ಭಾರವಾದ ಒತ್ತಡವಿತ್ತು. ಮಾನವರ ಸಂಕಲ್ಪದ ಮೇಲೆ ಅವರ ಪ್ರಕಾಶಮಾನ ಸಾನಿಧ್ಯವು ಬಹಳ ಪ್ರಭಾವ ಬೀರುತ್ತಿತ್ತು. ಮಾನವನ ಶಕ್ತಿ ಸಹಜವಾಗಿ ತನ್ನತನಕ್ಕೆ ಮರಳಿತು. ಅವನ ಸ್ವಂತಿಕೆ ಕ್ಷುಲ್ಲಕವಾಗಿರಬಹುದು, ಸಣ್ಣತನದ್ದಾಗಿರಬಹುದು ಆದರೆ ಅದೀಗ

ಅವನಿಗೆ ಪುನರ್ಲಾಭವಾಯಿತು. ಜಗದ ಪರಿಶ್ರಮ ಮತ್ತೆ ಅಚೇತನದ ಮಿತಿಯ ಒಳಗೇ ನಡೆಯತೊಡಗಿತು. ಮಾನವನ ಪ್ರಯತ್ನಕ್ಕೆ ಯೋಗ್ಯ ಬೆಲೆ ದೊರೆಯುವಂತಿರಲಿಲ್ಲ. (1/54)

182–183. ಮುಂದಿನ ಎರಡು ಸಾಲುಗಳಲ್ಲಿ ಬಹು ಸುಂದರವಾದ ವ್ಯತಿರಿಕ್ತ ಕಲ್ಪನೆಗಳನ್ನು ವಿವರಿಸುತ್ತಾರೆ.

ಜೀವನವು ಮೇಲ್‌ಸ್ತರದ ಒತ್ತಡಗಳಿಂದ ಅಂದರೆ ದೇವತೆಗಳ ಪ್ರಭಾವದಿಂದ ಬಿಡುಗಡೆ ಹೊಂದಿತು. the winds breathed freer delivered ವಾತಾವರಣ ದೇವತೆಗಳ ಸಂಕಲ್ಪ ಅವರ ಮಧ್ಯ ಪ್ರವೇಶದಿಂದ ಬಿಡುಗಡೆ ಅನುಭವಿಸಿತು. ಒತ್ತಡ ಕಡೆಮೆಯಾದಂತಾಗಿ ಸಮಾಧಾನದ ನಿಟ್ಟುಸಿರು ಬಿಟ್ಟಿತು.

ಬೆಳಕು ದೇವತೆಗಳ ಭಾರವಾದ ತೀಕ್ಷ್ಣ ಮೊನಚು ಕಳೆದುಕೊಂಡು ನಿಡು ಉಸಿರ್ಗರೆಯಿತು. ನಿರಾಳತೆ ಅನುಭವಿಸಿತು. ಅವರ ಮಹತಿಯ ಭಾರದಲ್ಲಿ ನಲುಗಿ ಹೋಗಿದ್ದ ಭೂಮಿಯು ತನ್ನ ಸಹಜ ಸ್ಥಿತಿಗೆ ಮರಳಿ ಸಂತಸ ಪಟ್ಟಿತು. light was released, the earth was released, the struggle titanic departed ಮುಂತಾದ ಪದ ಜೋಡಣೆ ತುಂಬ ಕಾವ್ಯಾತ್ಮಕವೂ ಆಗಿರುವುದರ ಜೊತೆಗೆ ಯುದ್ಧದ ನಿಲುಗಡೆ ಸಮೀಪಿಸುತ್ತಿರುವುದನ್ನು ನಿರ್ದೇಶಿಸುತ್ತದೆ. (1/55)

184. ಆದರೆ ಇಷ್ಟೇ; ಗ್ರೀಕ್ ಹಾಗೂ ಟ್ರೋಜನರ ನಡುವೆ ನಡೆದ ಅಸಾಧಾರಣ ಮಹಾಯುದ್ಧದಲ್ಲಿ ಅಮರರಾದ ದೇವತೆಗಳ ಮಧ್ಯಸ್ಥಿಕೆ – ಮಧ್ಯ ಪ್ರವೇಶ ಅಳಿಯಿತು. ಸಾಮಾನ್ಯ ಜನರು ತಮ್ಮ ತಮ್ಮ ವೈಯಕ್ತಿಕ ಬಲದ ಮೇಲೆ ಹೋರಾಡಲು ಬಾಧ್ಯಸ್ಥರಾದರು. (1/56)

(ಸಶೇಷ)

## ಕವನ

# ರವೀಂದ್ರನಾಥ ಠಾಕೂರರ "ನಮಸ್ಕಾರ"

**– ಅನುವಾದ: ಶ್ರೀ ಜಿ. ರಾಮನಾಥ ಭಟ್ಟರು, ಮೈಸೂರು**

ಓ ಅರವಿಂದ,
ನಿನಗೆ ರವೀಂದ್ರನಾಥನ ನಮನ.
ಓ ಗೆಳೆಯ ನನ್ನ ದೇಶದ ಪ್ರಿಯ ಸಖ
ಸ್ವರಾಜ್ಯವನು ಹಂಬಲಿಸುವ ಭಾರತದ
ಅಂತರ್ವಾಣಿಯ ಮೂರ್ತರೂಪ ನೀನು

ದೇವ ದೇವನ ಕಾಂತಿಯುತ ದೀಪಗಳ ಧರಿಸಿ
ಅವನ ದೂತನಾಗಿ ಭಾರತಕೆ ಬಂದಿರುವಿ ನೀನು
ಓ ಅರವಿಂದ ನಿನಗಿದೋ ರವೀಂದ್ರನ ನಮನ

–––––––––––––––

ಇದು ಕವಿ ರವೀಂದ್ರನಾಥ ಠಾಕೂರರು 1908 ರಲ್ಲಿ ಬರೆದ ಕವನ. ಅಲಿಪೂರ ಬಾಂಬ್ ಪ್ರಕರಣದಲ್ಲಿ ಭಾಗಿಯಾಗಿದ್ದರೆಂದು ಆಪಾದಿಸಿ 48 ಜನರನ್ನು ಬ್ರಿಟಿಶ ಸರಕಾರ ಬಂಧಿಸಿದಾಗ ಶ್ರೀ ಅರವಿಂದ ಘೋಷರೂ ಒಬ್ಬರಾಗಿದ್ದರು, ಒಂದು ವರ್ಷ ಸೆರೆಮನೆ ವಾಸ ಅನುಭವಿಸಿದ ಮೇಲೆ ಅವರನ್ನು ನಿರ್ದೋಷಿ ಎಂದು ಬಿಡುಗಡೆ ಮಾಡಲಾಯಿತು. ಆದರೂ ಮತ್ತೊಮ್ಮೆ ಹುಸಿ ಆರೋಪ ಹೊರಿಸಿ ಅವರನ್ನು ಬಂಧಿಸಲು ಸರಕಾರ ಹೊಂಚು ಹಾಕಿದ್ದನ್ನು ಗಮನಿಸಿ, ಅವರು ಫ್ರೆಂಚ್ ವಸಾಹತು ಸ್ಥಳವಾಗಿದ್ದ ಚಂದ್ರನಗರಕ್ಕೆ ತೆರಳಿ, ಕೆಲ ದಿನಗಳ ಬಳಿಕ ಪಾಂಡಿಚೇರಿಗೆ ಹೊರಟು ಅಲ್ಲಿ ಆಶ್ರಯ ಪಡೆದರು.

ಈ ಸಂದರ್ಭದಲ್ಲಿ ರವೀಂದ್ರನಾಥ ಠಾಕೂರರು, ತಮಗಿಂತ ವಯಸ್ಸಿನಲ್ಲಿ ಹನ್ನೆರಡು ವರುಷ ಕಿರಿಯರಾದ ಅರವಿಂದರನ್ನು ಶ್ಲಾಘಿಸಿ, ಬೆಂಬಲಿಸಿ ಬರೆದ ಕಿರುಪದ್ಯವಿದು. ಬ್ರಿಟಿಶರ ಕೆಂಗಣ್ಣಿಗೂ ಈ ಪದ್ಯ ಗುರಿಯಾಗಿತ್ತು.

(ಇದು ಕನ್ನಡಕ್ಕೆ "ರವೀಂದ್ರ ಕಾವ್ಯ ಸಂಚಯ–2014"ದಲ್ಲಿ ಪ್ರಕಾಶಿತಗೊಂಡಿದೆ.)

# ವಾರ್ತಾಪತ್ರ

## ಶ್ರೀ ಅರವಿಂದ ಸಂಕೀರ್ಣ

ಜೆ.ಪಿ. ನಗರ 1ನೇ ಹಂತ, ಬೆಂಗಳೂರು.

## ಶ್ರೀ ಅರವಿಂದೋ ಸೊಸೈಟಿ ಶಾಖೆ, ಧಾರವಾಡ

**ದಿನಾಂಕ 16/10/2022 ಭಾನುವಾರ, ಶ್ರೀ ಅರವಿಂದರ 150ನೇ ಜನ್ಮ ಜಯಂತಿಯ ಅಂಗವಾಗಿ ಶ್ರೀ ಅರವಿಂದೋ ಸೊಸೈಟಿ, ಧಾರವಾಡ ಶಾಖೆ ವತಿಯಿಂದ ಹಮ್ಮಿಕೊಂಡಿದ್ದ ಕಾರ್ಯಕ್ರಮದ ವಿವರಗಳು:**

ವಿಶ್ವದ ಸತ್ಯತೆ ಒಂದೇ. ಅದು ದಿವ್ಯತೆ ಎಂಬುದೇ ಶ್ರೀ ಅರವಿಂದರ ತತ್ವದರ್ಶನ ಎಂದು ಹಿರಿಯ ಸಾಹಿತಿ ಡಾ॥ ಗುರುಲಿಂಗ ಕಾಪಸೆ ಹೇಳಿದರು.

ಸ್ವಾತಂತ್ರ್ಯ ಅಮೃತ ಮಹೋತ್ಸವ ಹಾಗೂ ಶ್ರೀ ಅರವಿಂದೋ ಅವರ 150ನೇ ಜನ್ಮ ದಿನಾಚರಣೆ ಅಂಗವಾಗಿ ಇನ್‌ಸ್ಟಿಟ್ಯೂಷನ್ ಆಫ್ ಎಂಜಿನಿಯರ್ಸ್‌ನಲ್ಲಿ ಆಯೋಜಿಸಿದ್ದ ಭಾಷಣ ಹಾಗೂ ಪ್ರಬಂಧ ಸ್ಪರ್ಧೆಯಲ್ಲಿ ವಿಜೇತ ವಿದ್ಯಾರ್ಥಿಗಳ ಪ್ರಶಸ್ತಿ ಪುರಸ್ಕಾರ ಸಮಾರಂಭ ಉದ್ಘಾಟಿಸಿ ಮಾತನಾಡಿದರು. ವಿಶೇಷ ಉಪನ್ಯಾಸ ನೀಡಿದ ಹಿರಿಯ ಸಾಧಕ ಶ.ಸ. ಸಿಂಹ, ಮಾನವನ ಪ್ರಕೃತಿಯ ಆಮೂಲಾಗ್ರ ಬದಲಾವಣೆ ಹಾಗೂ ರೂಪಾಂತರಣವೇ ಶ್ರೀ ಅರವಿಂದರ ಯೋಗದ ವೈಶಿಷ್ಟತೆ ಎಂದರು.

ಡಾ॥ ಅರುಣ್ ಕುಲಕರ್ಣಿ ಉಪನ್ಯಾಸ ನೀಡಿದರು. ಅಧ್ಯಕ್ಷತೆ ವಹಿಸಿದ್ದ ಶ್ರೀ ಅರವಿಂದೋ ಸೊಸೈಟಿ ಶಾಖೆಯ ಅಧ್ಯಕ್ಷ ಎ.ಬಿ. ದೇಸಾಯಿ ಮಾತನಾಡಿ, ಗೊಂದಲದ ಗೂಡಾಗಿರುವ ಅಧ್ಯಾತ್ಮದ ಹಂತ, ನಿಲುಮೆಗಳನ್ನು ಸ್ಪಷ್ಟೀಕರಿಸುವುದು. ನವ ಯೋಗ ಮಾರ್ಗ ಒಂದನ್ನು ರೂಪಿಸಿ ತೋರಿಸಿವುದು ಶ್ರೀ ಅರವಿಂದಾಶ್ರಮದ ನಿಜ ಕಾರ್ಯ ಮತ್ತು ಸಾಧನೆ ಎಂದರು.

ಕಾರ್ಯಕ್ರಮದ ಕೊನೆಯಲ್ಲಿ ಭಾಷಣ ಮತ್ತು ಪ್ರಬಂಧ ಸ್ಪರ್ಧೆಯಲ್ಲಿ ವಿಜೇತರಾದ ವಿದ್ಯಾರ್ಥಿಗಳಿಗೆ ಬಹುಮಾನ ಮತ್ತು ಸ್ಮರಣಿಕೆಗಳನ್ನು ವಿತರಿಸಲಾಯಿತು.



ಫೋಟೋ: ಇಮೇಜಿಂಗ್ ಸಾವಿತ್ರಿ

ಜ್ಞಾನಾಗ್ನಿ ವಿಜಯದುತ್ಸವದ ಒಳಗೆ ಈ ಸತ್ಯ ಕಂಡು ನೆಲೆಯ;
ಮನುಜನೆದೆಯಲ್ಲಿ ದೇವನೆಲೆಗಾಗಿ ಜಯಿಸಿತ್ತು ಆಗ ವಿಜಯ
ದೈವತ್ವವಿಂದು ಪ್ರತ್ಯಕ್ಷಗೊಳ್ಳುತಲಿ ಗುಪಿತ ರೂಪದೊಳಗೆ
ಆ ಭೂಮರೂಪದಲಿ ಜಗಜ್ಜನನಿ ಅವಳುದಿತ ಭಾವದಲ್ಲಿ
ಮರಗಟ್ಟುತಿರುವ ವಿಧಿಬರಹಕಿಂದು ಹೊಡಮರಳಿ ಕುಶಲ–ಬೋಧ
ಸನ್ನಿವೇಶದಲಿ ಅಚ್ಚೊತ್ತಿ ನಿಂತ ಅಭಿಃ–ವಚನದಾ ಶಕ್ತಿ–ಮೋದ

**– ಪುಟ್ಟು ಕುಲಕರ್ಣಿ**

**(ಶ್ರೀ ಅರವಿಂದರ 'ಸಾವಿತ್ರಿ'; ದಳ 1 ರೇಣು 2 ಪುಟ 21)**

**RNI No. 22511/1971**
No. of Pages **56 + 4 (Cov. Page)**
KAR Reg No.: RNP/KA/BGS/368/2021-2023
Kannada Monthly Magazine
Date of Publication on 7th of Every Month
Permitted to Post 10th of Every Month. Reg. Valid till: 31-12-2023
Licensed to Post at BG PSO, Mysuru Road, Bengaluru - 560 026



ಫೋಟೋ: ಇಮೇಜಿಂಗ್ ಸಾವಿತ್ರಿ

Ed: Sri Puttu Parashuram Kulkarni, Pub: Dr. Ajit Sabnis
Ptd. by M/s. Seshaasai e-forms Pvt. Ltd.,
on behalf of Sri Aurobindo Complex Trust, 'Sri Aurobindo Marg',
J.P. Nagar I Phase, Bengaluru - 560 078. Phone: 080 - 22449882.